ಸಂಪ್ರೀತಿ ಸಮೃದ್ಧಿ

ನಿಮ್ಮ ಮನ ಮನೆಗಳಿಗೆ...

ಮಾಸಿಕ

Sampreethi - Samruddhi | Volume : 8 | Issue : 01 | May 2025 | Pages : 32 | ₹ 20/-
ಸಂಪ್ರೀತಿ ಸಮೃದ್ಧಿ | ಸಂಪುಟ : 8 | ಸಂಚಿಕೆ : 01 | ಮೇ 2025 | ಪುಟಗಳು : 32 | ₹ 20 ರೂ.

ಅಮ್ಮ ಎಂಬ ಮಾತೇ ಅಮೃತ. ಅಮ್ಮನ ಪ್ರೀತಿ ಸಂಜೀವಿನಿ.

ಅಮ್ಮ ಎಂದರೆ ವಾತ್ಸಲ್ಯದ ಮೂರ್ತಿ...

ವಿಶ್ವ ತಾಯಂದಿರ ದಿನ

ಕೆಂಪೇಗೌಡ ಮತ್ತು ಅವರ ಸೊಸೆ ಲಕ್ಷ್ಮೀದೇವಿಯವರು ಬೆಂಗಳೂರು ನಿರ್ಮಾಣ ಕಾರ್ಯದಲ್ಲಿ ವಹಿಸಿದ ಪಾತ್ರ, ಮಾಡಿದ ತ್ಯಾಗ ಬಲಿದಾನಗಳ ರೋಚಕ ಹಾಗೂ ದುರಂತ ಸನ್ನಿವೇಶಗಳ ಮೇಲೆ ಸಾಗುವ ಬೆಂಗಾಳೂರ ನಿರ್ಮಾತೃ ನಾಡಪ್ರಭು ಕೆಂಪೇಗೌಡ ಐತಿಹಾಸಿಕ ನಾಟಕ

ತಾರೀಖು: 24-03-2025ರಂದು ಬೆಂಗಳೂರಿನ ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಭಾರತ ಸರ್ಕಾರದ ಸಂಸ್ಕೃತಿ ಇಲಾಖೆಯ ಸಹಕಾರ (Assistance By Ministry of Culture, Government of India)ದಿಂದ ಅಂಜನೇಯನವರು ರಚಿಸಿರುವ ಬೆಂಗಾಳೂರ ನಿರ್ಮಾತೃ ನಾಡಪ್ರಭು ಕೆಂಪೇಗೌಡ ಐತಿಹಾಸಿಕ ನಾಟಕವು ನಾಟ್ಯ ಸರಸ್ವತಿ ಶಾಂತಲಾ ಕನ್ನಡ ಕಲಾ ಸಂಘದಿಂದ ಪ್ರದರ್ಶನಗೊಂಡಿತು.

ವಿಜಯನಗರ ಸಾಮ್ರಾಜ್ಯದ ಮಾಂಡಳೀಕರಾಗಿ ಯಲಹಂಕದಲ್ಲಿ ಆಳ್ವಿಕೆಯನ್ನು ನಡೆಸಿದ ಕೆಂಪೇಗೌಡರು ಕರ್ನಾಟಕದ ರಾಜಧಾನಿ ಯಾದ ಬೆಂಗಳೂರು ನಗರವನ್ನು ನಿರ್ಮಿಸಿ, ಇತಿಹಾಸದಲ್ಲಿ ಶಾಶ್ವತ ಸ್ಥಾನವನ್ನು ಪಡೆದಿದ್ದಾರೆ.

ವಿಜಯನಗರ ಸಾಮ್ರಾಟರುಗಳಿಗೆ ಅತ್ಯಂತ ಆಪ್ತರಾಗಿ ಅವರ ಪ್ರೀತ್ಯಾದಾರಗಳಿಗೆ

ಭಾಜನರಾಗಿದ್ದ ಕೆಂಪೇಗೌಡರು, ಸನಾತನ ಸಂಸ್ಕೃತಿ ಹಾಗೂ ಪರಂಪರೆಗಳ ರಕ್ಷಕರಾಗಿ, ಪ್ರಜಾ ಪರಿಪಾಲನೆಗೋಸ್ಕರ ಅಹರ್ನಿಸಿ ದುಡಿದು, ಇತಿಹಾಸದಲ್ಲಿ ಧರ್ಮಪ್ರಭು ಎಂದೇ ಖ್ಯಾತಿ ಪಡೆದಿದ್ದಾರೆ. ಪ್ರಸ್ತುತ ಕೆಂಪೇಗೌಡ ಮತ್ತು ಅವರ ವಂಶಸ್ತರು ನಾಡಿಗಾಗಿ, ಪ್ರಜೆಗಳ ಕಲ್ಯಾಣಕ್ಕಾಗಿ, ಬೆಂಗಳೂರು ನಗರ ನಿರ್ಮಾಣಕ್ಕಾಗಿ ಏನೆಲ್ಲಾ ಕಷ್ಟ ಪಟ್ಟರು? ವಿಜಯನಗರ ಸಾಮ್ರಾಜ್ಯದ ರಕ್ಷಣೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟ ಅವರ ಸಾಮ್ರಾಜ್ಯ ನಿಷ್ಠೆ, ಧೀರೋದತ್ತ ಗುಣಗಳು, ದೈವಭಕ್ತಿ, ಧಾರ್ಮಿಕ ಶ್ರದ್ಧೆ, ಹಾಗೂ ಅಂದಿನ ಯಲಹಂಕ ರಾಜ್ಯದಲ್ಲಿ ನಡೆಯುತ್ತಿದ್ದ ಜಾತ್ರೋತ್ಸವಗಳು, ಕೆಂಪೇಗೌಡರು ಕಟ್ಟಿಸಿದ ಕೆರೆ-ಕಟ್ಟೆ, ಗುಡಿ-ಗೋಪುರಗಳು, ಕೋಟೆ-ಕೊತ್ತಲಗಳು, ದೇವಾಲಯಗಳು, ವ್ಯಾಪಾರ-ವಹಿವಾಟುಗಳಿಗಾಗಿ ಆಯಾ ಪದಾರ್ಥಗಳ ಹೆಸರಿನಲ್ಲಿ ಹಾಗೂ ಸರ್ವ ಜನರೂ ತಮ್ಮ ತಮ್ಮ ಧಾರ್ಮಿಕ ಆಚಾರ-ವಿಚಾರ, ಪದ್ಧತಿಗಳನ್ನು ಅಡೆ-ತಡೆ ಇಲ್ಲದೆ ನಡೆಸಿಕೊಂಡು ಹೋಗಲು ಆಯಾ ಜಾತಿಗಳ ಹೆಸರಿನಲ್ಲಿ ಕಟ್ಟಿಸಿದ ಪೇಟೆಗಳು ಇವೆಲ್ಲವನ್ನೂ ಮೂರು ಘಂಟೆಗಳ ಅವಧಿಯ ಬೆಂಗಾಳೂರ ನಿರ್ಮಾತೃ ನಾಡಪ್ರಭು ಕೆಂಪೇಗೌಡ ನಾಟಕದಲ್ಲಿ ಇತಿಹಾಸಕ್ಕೆ ಅಪಚಾರವಾಗದಂತೆ ಅಳವಡಿಸಲಾಗಿದೆ.

ಒಟ್ಟಾರೆ ಇತಿಹಾಸ, ಸಂಸ್ಕೃತಿ, ಪರಂಪರೆಗಳ ಸಾರವನ್ನು ಈ ನಾಟಕದಲ್ಲಿ ಮನ ಮುಟ್ಟುವಂತೆ ಸೆರೆ ಹಿಡಿಯಲಾಗಿದೆ ಎನ್ನಬಹುದು. ನಾಟಕದ ದೃಶ್ಯಗಳೆಲ್ಲವನ್ನೂ ಅಭಿಮಾನದಿಂದ ನೋಡುತ್ತಾ, ಸುಶ್ರಾವ್ಯವಾದ ಸಂಗೀತ ಹಾಗೂ ಜಾತ್ರೆ, ಮಳೆ, ನೃತ್ಯಗಳ ವೈಭವವನ್ನು ಆನಂದದಿಂದ ಸವಿಯುತ್ತಿದ್ದ ಪ್ರೇಕ್ಷಕರಿಗೆ ನಾಟಕ ದುರಂತಮಯವಾಗಿ

ಕೊನೆಗೊಂಡಾಗ ಮನಸ್ಸಿಗೆ ವೇದನೆ ಉಂಟಾಗಿ, ಕಣ್ಣೀರನ್ನು ತರಿಸುತ್ತದೆ. ಬೆಂಗಾಳೂರು ನಗರ ನಿರ್ಮಾಣ ಪೂರ್ತಿಯಾಗಿ, ನಗರ ಪ್ರವೇಶಕ್ಕೆ ಕೆಂಪೇಗೌಡರು ಸಿದ್ಧತೆ ಮಾಡಿಕೊಳ್ಳುತ್ತಿರಲು, ಯಲಹಂಕ ರಾಜ್ಯದ ಜನತೆ ಹೊಸ ರಾಜಧಾನಿಯ ಪ್ರವೇಶವನ್ನು ನೋಡಿ ಕಣ್ತುಂಬಿಸಿಕೊಳ್ಳಲು ಕಾಯುತ್ತಿರಲು ಕೋಟೆಯ ಹೆಬ್ಬಾಗಿಲು ಬಿದ್ದು ಹೋಯಿತೆಂಬ ಸುದ್ದಿ ಬರಸಿಡಿಲಿನಂತೆ ಬಡಿಯುತ್ತದೆ. ಅದಕ್ಕೆ ಪರಿಹಾರವೆಂದರೆ, ಗರ್ಭಿಣಿ ಸ್ತ್ರೀ ಬಲಿಯಾಗಬೇಕೆಂಬ ನುಡಿ ರಾಜ ಪುರೋಹಿತರಿಂದ ಬರಲು, ಧರ್ಮಪ್ರಭು ಕೆಂಪೇಗೌಡರಿಗೋಸ್ಕರ ಆ ತ್ಯಾಗಕ್ಕೆ ಸಿದ್ಧರಾಗಿ,

ಹಲವಾರು ಸಾಧ್ವಿಯರು ಮುಂದೆ ಬರುತ್ತಾರೆ. ಅಹಿಂಸಾ ಪರಮೋ ಧರ್ಮವೆಂದು ನಂಬಿ ನಡೆಯುತ್ತಿದ್ದ ಕೆಂಪೇಗೌಡರು ಅದಕ್ಕೆ ಒಪ್ಪುವುದಿಲ್ಲ. ಆದರೆ ತನ್ನ ಕನಸಿನ ಮಹಾನಗರದ ನಿರ್ಮಾಣ ನನಸಾಗಲಿಲ್ಲವಲ್ಲ ಎಂಬ ಚಿಂತೆಯಿಂದ ಅನ್ನ, ನೀರನ್ನು ತೊರೆದು, ದಿನೇ-ದಿನೇ ಮನೋರೋಗದಿಂದ ಕೃಷರಾಗುತ್ತಾರೆ. ನ್ಯಾಯ, ನೀತಿ, ಧರ್ಮಗಳ ಪ್ರತೀಕರಾಗಿದ್ದ ತನ್ನ ಮಾವಯ್ಯ ಕೆಂಪೇಗೌಡರ ಕಣ್ಣೀರು ಹಾರಲೇಬೇಕು, ಅದಕ್ಕೆ ನವನಗರ ನಿರ್ಮಾಣ ಪೂರ್ತಿಯಾಗಲೇಬೇಕು. ಅಸಂಖ್ಯಾತ ಕನ್ನಡಿಗರ ಆಸೋತ್ತರ ಈಡೇರಲೇಬೇಕು ಎಂದು ನಿಶ್ಚಯಿಸಿದ ಹದಿನಾರರ ಹರೆಯದ ಗರ್ಭಿಣಿಯಾದ ಕೆಂಪೇಗೌಡರ ಸೊಸೆ ಲಕ್ಷ್ಮೀ, ತನ್ನನ್ನು ಅಪಾರವಾಗಿ ಪ್ರೀತಿಸುತ್ತಿದ್ದ ಪತಿ, ಅತ್ತೆ-ಮಾವ, ಬಂಧು-ಬಳಗ ಹಾಗೂ ಯಲಹಂಕದ ಪ್ರಜೆಗಳನ್ನು ಅಗಲಿ ಯಾರಿಗೂ ಗೊತ್ತಾಗದಂತೆ ರಾತ್ರೋರಾತ್ರಿ ಕೋಟೆಯ ಹೆಬ್ಬಾಗಿಲಿಗೆ ತನ್ನ ಪ್ರಾಣವನ್ನು ಅರ್ಪಿಸುತ್ತಾಳೆ. ರಾಜ ಪರಿವಾರದೊಡನೆ ಯಲಹಂಕದ ಪ್ರಜೆಗಳೆಲ್ಲ ದುಃಖ ಸಾಗರದಲ್ಲಿ ಮುಳುಗುತ್ತಾರೆ. ಲಕ್ಷ್ಮೀಯ ಆತ್ಮಾಹುತಿಯಿಂದ ಕೆಂಪೇಗೌಡರು ಅಪಾರವಾಗಿ ನೊಂದು, "ತನ್ನ ಸೊಸೆಯನ್ನು ಬಲಿ ತೆಗೆದುಕೊಂಡ ನವನಗರ ಬೆಂಗಾಳೂರನ್ನು ನಾನು ಹಿಂತಿರುಗಿ ನೋಡಲಾರೆ" ಎಂದು ಶಪಥವನ್ನು ಮಾಡಿ, ಲಕ್ಷ್ಮೀಯ ತವರೂರು ಕೋರಮಂಗಲದಲ್ಲಿ ಅವಳ ಸಮಾಧಿ ಹಾಗೂ ದೇವಾಲಯಗಳನ್ನು ನಿರ್ಮಿಸಿ, ಪೂಜಾ ಕಾರ್ಯಗಳ ಖರ್ಚಿಗೆ ಜಮೀನನ್ನು ದತ್ತಿಯಾಗಿ ಬಿಟ್ಟು, ಅಧಿಕಾರವನ್ನು ತನ್ನ ಪುತ್ರನಿಗೆ ವಹಿಸಿ, ಗಂಗಾಧರೇಶ್ವರ-ಹೊನ್ನದೇವಿಯರ ಆರಾಧನೆಯೊಡನೆ, ಧಾನ-ಧರ್ಮಗಳನ್ನು ಮಾಡುತ್ತಾ, ತನ್ನ ಕೊನೆಗಾಲವನ್ನು ಕಳೆಯಲು ಶಿವಗಂಗೆಗೆ ಹೊರಟು ಹೋಗುವುವ ಸನ್ನಿವೇಶದೊಂದಿಗೆ ನಾಟಕ ಮುಕ್ತಾಯವಾಗುತ್ತದೆ.

ಬೆಂಗಾಳೂರ ನಿರ್ಮಾತೃ ನಾಡಪ್ರಭು ಕೆಂಪೇಗೌಡ ನಾಟಕವು ನವರಸ ಭರಿತವಾಗಿದ್ದು, ಪ್ರೇಕ್ಷಕರಿಗೆ ಬೆಂಗಳೂರಿನ ಇತಿಹಾಸದ ಅರಿವನ್ನು ಮೂಡಿಸುವುದರೊಂದಿಗೆ ಇಂಪಾದ ಸಂಗೀತ ಮತ್ತು ಸೊಗಸಾದ ನೃತ್ಯಗಳಿಂದ ಮುದ ನೀಡುತ್ತಾ, ಕೊನೆಗೆ ಹೃದಯವನ್ನು ಕಲಕುತ್ತದೆ. ಕೆಂಪೇಗೌಡರ ಬಗ್ಗೆ ಇಂತಹ ಮಹಾಪುರುಷನು ಈ ನಮ್ಮ ನಾಡಿನಲ್ಲಿ ಹುಟ್ಟಿದ್ದು ನಮ್ಮ ಭಾಗ್ಯವೇ ಸರಿ ಎಂಬ ಭಾವನೆ ಮತ್ತು ಅಭಿಮಾನಗಳು ಪ್ರೇಕ್ಷಕರಲ್ಲಿ ಮೂಡುತ್ತವೆ. ಕೆಂಪೇಗೌಡ ಮತ್ತು ಅವರ ಸೊಸೆ ಲಕ್ಷ್ಮೀದೇವಿಯರ ನಾಡು-ನುಡಿ,

ರಾಷ್ಟ್ರಭಕ್ತಿ ಹಾಗೂ ಅವರು ಅನುಸರಿಸಿಕೊಂಡು ಬಂದ ಉನ್ನತವಾದ ಜೀವನ ಮೌಲ್ಯಗಳು ಇಂದಿನ ಪೀಳಿಗೆಗೆ ಪ್ರೇರಕ ಶಕ್ತಿಯಾಗಿ ನಿಲ್ಲುತ್ತವೆ ಎನ್ನಬಹುದು.ಸಾಹಿತಿ, ಕಲಾವಿದ ಮತ್ತು ರಂಗ ನಿರ್ದೇಶಕರಾದ ಆಂಜನೇಯನವರು ತಮ್ಮ ಹತ್ತಾರು ವರ್ಷಗಳ ಅನುಭವವನ್ನು ಧಾರೆ ಎರೆದು, ಕನ್ನಡ ರಂಗಭೂಮಿಗೆ ಈ ಒಂದು ಅತ್ಯುತ್ತಮ ಐತಿಹಾಸಿಕ ನಾಟಕವನ್ನು ನೀಡಿದ್ದಾರೆ ಎನ್ನಬಹುದು. ರಂಗ ಪರಿಕರ, ವಸ್ತ್ರವಿನ್ಯಾಸ, ವರ್ಣಾಲಂಕಾರ, ಸಂಗೀತ, ನೃತ್ಯಗಳೆಲ್ಲವೂ ಐತಿಹಾಸಿಕ ನಾಟಕಕ್ಕೆ ಪೂರಕವಾಗಿವೆ.

ನಿರ್ದೇಶಕರುಗಳಾದ ಹೆಚ್.ಎನ್.ಆನಂದ ಮೂರ್ತಿ ಮತ್ತು ಆಂಜನೇಯನವರು

ನಾಟಕವನ್ನು ಪರಿಣಾಮಕಾರಿಯಾಗಿ ರಂಗದ ಮೇಲೆ ತರುವಲ್ಲಿ ಯಶಸ್ವಿಯಾಗಿದ್ದಾರೆ.

ಪ್ರೇಕ್ಷಕರ ಗ್ಯಾಲರಿ ತುಂಬಿದ್ದಲ್ಲದೆ, ರಂಗಮಂದಿರದ ಮುಂಭಾಗದಲ್ಲಿ ಎಲ್.ಇ.ಡಿ ವ್ಯವಸ್ಥೆಯನ್ನು ಕೂಡ ಮಾಡಿ ಪ್ರೇಕ್ಷಕರಿಗೆ ನಾಟಕ ನೋಡುವ ಅವಕಾಶವನ್ನು ಮಾಡಿಕೊಡಲಾಗಿತ್ತು. ನಾಟಕ ನೋಡಲು ಪ್ರೇಕ್ಷಕರ ಕೊರತೆ ಇದೆ ಎಂಬ ಮಾತನ್ನು ಬೆಂಗಾಳೂರ ನಿರ್ಮಾತೃ ನಾಡಪ್ರಭು ಕೆಂಪೇಗೌಡ ಐತಿಹಾಸಿಕ ನಾಟಕ ಪ್ರದರ್ಶನ ಮರೆಸಿತ್ತು. ಉತ್ತಮವಾದ ನಾಟಕಗಳ

ಪ್ರದರ್ಶನ ಮತ್ತು ವ್ಯಾಪಕ ಪ್ರಚಾರ ನಡೆಸಿದರೆ, ಪ್ರೇಕ್ಷಕರ ಕೊರತೆ ನಾಟಕಗಳಿಗೆ ಬರಲಾರದು ಎಂಬುದಕ್ಕೆ ಅಂದು ಅಪಾರವಾಗಿ ನೆರೆದಿದ್ದ ಪ್ರೇಕ್ಷಕರು ಸಾಕ್ಷಿಯಾಗಿದ್ದರು.

ನಾಡಪ್ರಭು ಕೆಂಪೇಗೌಡ ಐತಿಹಾಸಿಕ ನಾಟಕ ಪ್ರದರ್ಶನದ ಸಮಾರಂಭದಲ್ಲಿ ವಿವೇಕ ಭಾರತ ಸಂಸ್ಥೆಯ ಸಂಸ್ಥಾಪಕರಾದ ನಯನ್ ಕುಮಾರ್ ಗೌಡರವರನ್ನು ಸನ್ಮಾನಿಸಲಾಯಿತು.

ಕೆಂಗೇರಿಯ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧಿಪತಿಗಳಾದ ಪರಮ ಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ.ನಿಶ್ಚಲಾನಂದ ನಾಥ ಸ್ವಾಮೀಜಿಗಳು ಹಾಗೂ ಕುಣಿಗಲ್ಲಿನ ಶ್ರೀ ಅರೆ ಶಂಕರ ಮಠದ ಪರಮ ಪೂಜ್ಯ ಶ್ರೀ ಸಿದ್ಧರಾಮ ಚೈತನ್ಯ ಮಹಾಸ್ವಾಮಿಗಳು ದಿವ್ಯ ಸಾನಿಧ್ಯವನ್ನು ವಹಿಸಿ ಆಶೀರ್ವಚನ ನೀಡಿದ್ದಲ್ಲದೆ, ಕನ್ನಡ ಭಾಷೆ ಮತ್ತು

ಸಂಸ್ಕೃತಿಗಳನ್ನು ಉಳಿಸಿಕೊಳ್ಳುವ ಅನಿವಾರ್ಯತೆಯ ಬಗ್ಗೆ ಎಚ್ಚರ ಮೂಡಿಸುವಂತಹ ವಿಚಾರಗಳ ಬಗ್ಗೆ ಸುಧೀರ್ಘವಾಗಿ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮಾಜಿ ವಿಧಾನ ಪರಿಷತ್ತಿನ ಸದಸ್ಯರಾದ ಅ.ದೇವೇಗೌಡರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ರಾಜ್ಯ ನೌಕರರ ಸಂಘದ ಮಾಜಿ ಅಧ್ಯಕ್ಷರಾದ ರಾಮುರವರು, ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಂಟಿ ನಿರ್ದೇಶಕರಾದ ಲಿಂಗಣ್ಣ ಗುಂಡಳ್ಳಿಯವರು ಸಮಾರಂಭ ವನ್ನು ಕುರಿತು ಮಾತನಾಡಿದರು. ಕನ್ನಡದ ಉಪನ್ಯಾಸಕರಾದ ನರಸಿಂಹ ಮೂರ್ತಿ. ಬಿ.ಆರ್‌ರವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು.

ಸಂಪ್ರೀತಿ - ಸಮೃದ್ಧಿ

ನಿಮ್ಮ ಮನ ಮನೆಗಳಿಗೆ...

ಮಾಸಿಕ

ಸಂಪಾದಕೀಯ

ಮೇ : 2025

ಸಂಪುಟ 8, ಸಂಚಿಕೆ 1

ಸಂಪಾದಕರು

ಡಾ|| ಸಿ. ನಂಜುಂಡಯ್ಯ

ಚಂದಾ ವಿವರ :

10 ವರ್ಷಕ್ಕೆ	ರೂ.2000/-
05 ವರ್ಷಕ್ಕೆ	ರೂ.1000/-
02 ವರ್ಷಕ್ಕೆ	ರೂ.500/-

ಹಣವನ್ನು ಮನಿಯಾರ್ಡರ್, ಬ್ಯಾಂಕ್ ಡ್ರಾಫ್ಟ್ ಮೂಲಕ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.

ಸಂಪಾದಕರು

ಸಂಪ್ರೀತಿ - ಸಮೃದ್ಧಿ

ನಂ. 83, ಬಸವಣ್ಣ ದೇವಸ್ಥಾನ ರಸ್ತೆ
ದೊಡ್ಡಸೋಮನಹಳ್ಳಿ,
ಮಾಗಡಿ ತಾಲ್ಲೂಕು,
ರಾಮನಗರ ಜಿಲ್ಲೆ - 562 131.

#66, ಸಂಪ್ರೀತಿ - ಸದನ
ಸರ್ಕಾರಿ ಆಸ್ಪತ್ರೆ ಪಕ್ಕದ ರಸ್ತೆ,
ಮಾಗಡಿ - 562 120 ರಾಮನಗರ ಜಿಲ್ಲೆ.

ಮುದ್ರಕರು

- ಕಂಪ್ಯೂಟರ್ ವರ್ಲ್ಡ್
ಜಿ.ಟಿ.ವರ್ಲ್ಡ್ ಮಾಲ್ ಹತ್ತಿರ
ಮಲ್ಲಿಗೆ ತೋಟ, ಮಾಗಡಿ ರಸ್ತೆ,
ಬೆಂಗಳೂರು - 560 023.

- ಓದುಗರು ತಮ್ಮ ಅಭಿಪ್ರಾಯಗಳನ್ನು ಮತ್ತು ಲೇಖಕರು ಲೇಖನಗಳನ್ನು ಕೆಳಗಿನ ಈ-ಮೇಲ್ ವಿಳಾಸಕ್ಕೆ ಕಳುಹಿಸಬಹುದು.

sampreethisamruddhi@gmail.com

8971608213

ಸಂಪ್ರೀತಿ - ಸಮೃದ್ಧಿ

ನಾಟಕದಲ್ಲಿ ವಿಭಿನ್ನ ಪಾತ್ರಗಳು ಹಾಡುತ್ತ, ಕುಣಿಯುತ್ತ ಬರುತ್ತವೆ. ಝಗಮಗಿಸುವ ಬಟ್ಟೆಗಳನ್ನು ತೊಟ್ಟು, ಸೊಗಸಾಗಿ ಮಾತನಾಡುತ್ತ ಪ್ರೇಕ್ಷಕರ ಮನ ಸೂರೆಗೊಳ್ಳುತ್ತಿರುತ್ತಾರೆ. ಆದರೆ ನಾಟ್ಯ ಮಂದಿರದಲ್ಲಿರುವ ವಿದ್ಯುತ್ ದೀಪಗಳು ಏನಾದರೂ ಕೈ ಕೊಟ್ಟರೆ, ಎಲ್ಲ ಪಾತ್ರಗಳು ತೆರೆಮರೆಗೆ ಹೋಗಿಬಿಡುತ್ತವೆ. ಆಗ ಭೀಮನೂ ಇಲ್ಲ, ದುಶ್ಯಾಸನನೂ ಇಲ್ಲ

ಶ್ರೀಕೃಷ್ಣಾರ್ಜುನರೂ ಇಲ್ಲ! ಬರಿ ಕತ್ತಲೆ ಕವಿದು ಬಿಡುತ್ತದೆ. ದೀಪವಿದ್ದಾಗಲೇ ನಮ್ಮೆಲ್ಲರ ಆಟ ನಡೆಯುವುದು ದೀಪದಿಂದಲೆ ಎಲ್ಲದಕ್ಕೂ ಬೆಲೆ, ಗೌರವ ಮಾನ-ಸನ್ಮಾನ! ಆದುದರಿಂದ ದೀಪವೇ ದೇವರು, ದೀಪವೇ ಧರ್ಮ!!

"ಸೂರ್ಯಾದ್ಭವಂತಿ-ಸೂರ್ಯೇಣ ಪಾಲಯಂತಿ ಸೂರ್ಯೇ ಲಯಂ ಯಾಂತಿ"

ಸಕಲ ಜೀವರಾಶಿಗಳು ಸೂರ್ಯನಿಂದ ಜನಿಸುತ್ತವೆ. ಸೂರ್ಯನಿಂದ ರಕ್ಷಿಸಲ್ಪಡುತ್ತವೆ. ಕೊನೆಗೆ ಸೂರ್ಯನಲ್ಲಿಯೇ ಲಯವಾಗುತ್ತವೆ. ಸೂರ್ಯನು ಬೆಳೆಸಿದ ಹಣ್ಣು-ಹಂಪಲಗಳನುಂಡು ಎಲ್ಲ ಜೀವರಾಶಿಗಳು ಇತರ ಜೀವರಾಶಿಗಳಿಗೆ ಜನ್ಮ ನೀಡುತ್ತವೆ. ಅದೇ ಅನ್ನವನುಂಡು ಜೀವರಾಶಿಗಳು

ರಕ್ಷಿಸಲ್ಪಡುತ್ತವೆ. ಕೊನೆಗೆ ಆಯುಷ್ಯ ತೀರಿದ ಮೇಲೆ ಸೂರ್ಯಾಗ್ನಿಯಲ್ಲಿ ಮರೆಯಾಗಿ ಹೋಗುತ್ತವೆ. ಒಟ್ಟಾರೆ ನಮ್ಮ ಜೀವನವೇ ಸೂರ್ಯಸಂಕಲ್ಪ. ನಮ್ಮ ಒಳ ಹೊರಗೆ ಕತ್ತಲೆ ಬೀಳದಂತೆ ನಾವು ಬದುಕಿದರೆ ಅದುವೆ

ಸೂರ್ಯಪ್ರೀಯ ಬದುಕು.

ಬಾನಕ್ಕಿಗೆ ಧನ, ಕನಕ, ಮನೆ, ಮಠ ಏನೂ ಇಲ್ಲ. ನಮ್ಮ ಹಿತ್ತಲದಲ್ಲಿರುವ ಮರ ಒಂದೇ ನಮ್ಮದು. ಆದರೆ ಬಾನಕ್ಕಿಗೆ ಅರಣ್ಯವೆಲ್ಲ ಅದರದೇ. ಬಾನಕ್ಕಿಗೆ ಯಾವ ವಾದ್ಯಗಳೂ ಇಲ್ಲ. ಆದರೆ ಎಲ್ಲ ವಾದ್ಯಗಳು ಆ ಹಕ್ಕಿಗಳಿಂದ ಪ್ರೇರಿತ. ಮೇಘಗಳಿಗೆ ರೆಕ್ಕೆಗಳಿಲ್ಲ ಆದರೂ ಸೂರ್ಯನ ಕಾವಿನಿಂದ ನೀರು ಆವಿಯಾಗಿ ಮೇಲೇರಿ ಮೇಘವಾಗಿ ಮಳೆ ಸುರಿಸುತ್ತದೆ. ಹಕ್ಕಿಯ ಹಾಡು ಮೇಘದ ಮಳೆ ಎರಡೂ ಸೇರಿದಾಗ ನಿಸರ್ಗವೆಲ್ಲ ಸ್ವರ್ಗಸದೃಶವಾಗುತ್ತದೆ. ನದಿಯು ಹರಿದು ಹರಿದು ಸುತ್ತೆಲ್ಲ ಹಸಿರುಮಾಡಿ ಸಾಗರ ಸೇರುತ್ತದೆ. ಜೀವನದಿಯಾದರೂ ದೇವಸಾಗರ ಬೆರೆಯುವ ಮೊದಲು ತಾನು ಹರಿದಲ್ಲೆಲ್ಲ ಸಂತಸದ ಬೆಳೆ ಬೆಳೆಯಬೇಕು. ಕೊನೆಗೆ

ನಮ್ಮ ಹೊರಗಿರುವುದೆಲ್ಲ ಭೌತರವಿಯಲ್ಲಿ, ನಮ್ಮ ಒಳಗಿರುವುದೆಲ್ಲ ಆತ್ಮರವಿಯಲ್ಲಿ ಒಂದಾಗುವುದೇ ಅಮೃತತ್ವ! ಹೊರಗೆ ಸೌಂದರ್ಯಸಿರಿ, ಒಳಗೆ ಜ್ಞಾನಸಿರಿ ಇವು ಎರಡೇ ನಮ್ಮ ಆಸ್ತಿ. ಹೊರಗಿನ ದೀಪ ಆರಿದರೂ ಒಳಗಿನ ಆತ್ಮದೀಪ ಆರುವುದಿಲ್ಲ. 'ಯಃ ಸೂರ್ಯ: ಸಃ ಅಹಮೇವ'ನಾನಾರು ಎಂದರೆ ಯಾವನು ಸೂರ್ಯನೋ ಅವನೇ ನಾನು. ಹೀಗೆ ಆತ್ಮ ಸೂರ್ಯನೇ ನಾನಾದ ಬಳಿಕ ದುಃಖದ ಪ್ರಶ್ನೆಯೇ ಇಲ್ಲ. ಜೀವನವೆಲ್ಲ ಸುಖ ಸಂತಸ ನಗೆ. ಈ ನಗೆಯೇ ಒಂದು ಹಬ್ಬ. ಅಳುವುದು ಎಂದೂ ಹಬ್ಬವಾಗುವದಿಲ್ಲ. ಎಲ್ಲಿ ಜ್ಞಾನ ಸೂರ್ಯ ಇರುವನೋ ಅಲ್ಲಿ ಅಜ್ಞಾನ,ರಾಗ, ದ್ವೇಷ, ಕಲಹ, ಕದನ ಏನೂ ಇರುವುದಿಲ್ಲ. ಆದುದರಿಂದ ನಮ್ಮ ಒಳಹೊರಗೆಲ್ಲ ಇರುವುದು ಸೂರ್ಯನ ಪ್ರಕಾಶ ಎಂಬ ಅರಿವೇ ಸುಖಜೀವನದ ಸೂತ್ರ! ಇದುವೇ ಪ್ರಕಾಶಮಯ ಪ್ರಪಂಚ ! ॐ

ವಿಶ್ವ ತಾಯಂದಿರ ದಿನ

ವಿಶ್ವ ತಾಯಂದಿರ ದಿನವನ್ನು ಮೇ 14 ರಂದು ಆಚರಿಸಲಾಗುವುದು. ತಾಯಿಯ ಋಣವನ್ನು ಈ ಒಂದೇ ದಿನ ಮಾತ್ರವಲ್ಲ, ಏಳು ಜನುಮ ಎತ್ತಿ ಬಂದರೂ ಆಕೆಯ ಋಣವನ್ನು ತೀರಿಸಲು ಯಾರಿಂದಲೂ ಸಾಧ್ಯವಿಲ್ಲ. ಹಿಂದೂ ಧಾರ್ಮಿಕ ಗ್ರಂಥಗಳಲ್ಲಿ, ತಾಯಿಯನ್ನು ದೇವರಿಗಿಂತ ಹೆಚ್ಚು ಪೂಜಿಸಲಾಗುತ್ತದೆ ಎನ್ನುವ ವಿವರಣೆಯನ್ನು ನೀಡಲಾಗಿದೆ. ವಿಶ್ವದಾದ್ಯಂತ ತಾಯಂದಿರ ದಿನ (Mother's Day) ವನ್ನು ಪ್ರತೀ ವರ್ಷ ಮೇ ತಿಂಗಳ ಎರಡನೇ ಭಾನುವಾರ ಆಚರಿಸಲಾಗುತ್ತದೆ. ಈ ದಿನದ ಪ್ರಮುಖ ಉದ್ದೇಶವೆಂದರೆ ತಾಯಿಯ ಪ್ರೀತಿ, ತ್ಯಾಗ ಹಾಗೂ ಮಹತ್ವವನ್ನು ಜನರಿಗೆ ತಿಳಿಸಿಕೊಡುವುದಾಗಿದೆ.

ವಿಶ್ವಾದ್ಯಂತ ತಾಯಂದಿರ ದಿನವನ್ನು ಪ್ರತೀ ವರ್ಷ ಮೇ ತಿಂಗಳ ಎರಡನೇ ಭಾನುವಾರ ಆಚರಿಸಲಾಗುತ್ತದೆ. ಈ ವಿಶೇಷ ದಿನದಂದು ಅವಳಿಗೆ ವಿಶೇಷ ಪ್ರೀತಿಯ ಶುಭಾಶಯ ತಿಳಿಸಿ. ಅಮೆರಿಕಾದಲ್ಲಿ 1908ರಲ್ಲಿ ಪ್ರಾರಂಭವಾದ ಈ ವಿಶೇಷ ಆಚರಣೆ ಇಂದಿಗೂ ಆಚರಣೆಯಲ್ಲಿದೆ. ಈ ದಿನದ ಪ್ರಮುಖ ಉದ್ದೇಶವೆಂದರೆ ತಾಯಿಯ ಪ್ರೀತಿ, ತ್ಯಾಗ ಹಾಗೂ ಮಹತ್ವವನ್ನು ಜನರಿಗೆ ತಿಳಿಸಿಕೊಡುವುದು. ಈ ದಿನವನ್ನು ಸಾಮಾನ್ಯವಾಗಿ ಭಾರತ, ಅಮೆರಿಕಾ, ಕೆನಡಾ, ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್ ಸೇರಿದಂತೆ ಹಲವು ದೇಶಗಳಲ್ಲಿ ಮೇ ತಿಂಗಳ ಎರಡನೇ ಭಾನುವಾರದಂದು ಆಚರಿಸಲಾಗುತ್ತದೆ.

1914 ರಲ್ಲಿ, ಅಮೇರಿಕದ 28 ನೇ ಅಧ್ಯಕ್ಷ ವುಡ್ರೋ ವಿಲ್ಸನ್ ಮೇ ತಿಂಗಳ ಎರಡನೇ ಭಾನುವಾರವನ್ನು ತಾಯಂದಿರ ದಿನವೆಂದು ಗೊತ್ತುಪಡಿಸುವ ಘೋಷಣೆಗೆ ಸಹಿ ಹಾಕಿದರು. ಇದಾದ ಬಳಿಕ ಈ ದಿನವು ಅಮೇರಿಕದಲ್ಲಿ ಅಧಿಕೃತ ರಜಾದಿನವಾಯಿತು. ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ಸಿಂಗಾಪುರ ಮತ್ತು ಪ್ರಪಂಚದಾದ್ಯಂತ ವಿವಿಧ ಸಂಪ್ರದಾಯಗಳು ಮತ್ತು ಪದ್ಧತಿಗಳೊಂದಿಗೆ ಪ್ರಪಂಚದಾದ್ಯಂತ ಜನಪ್ರಿಯತೆಯನ್ನು ಗಳಿಸಿತು.

ತಾಯಂದಿರ ದಿನ ಇತಿಹಾಸ:

ಪ್ರಾಚೀನ ಕಾಲದಲ್ಲಿ, ಗ್ರೀಕರು ಮತ್ತು ರೋಮನ್ನರು ಮಾತೃ ದೇವತೆಗಳಾದ ರಿಯಾ ಮತ್ತು ಸೈಬೆಲೆಯ ಗೌರವಾರ್ಥವಾಗಿ ಹಬ್ಬಗಳನ್ನು ನಡೆಸುತ್ತಿದ್ದರು. ಆದರೆ 20 ನೇ ಶತಮಾನದ ಆರಂಭದಲ್ಲಿ ತಾಯಂದಿರ ದಿನ 1908ರಲ್ಲಿ ಅಮೇರಿಕದಲ್ಲಿ ಶುರುವಾಗಿತ್ತು. ಅಮೇರಿಕದ ಶಾಂತಿ ಕಾರ್ಯಕರ್ತೆ ಆಗಿದ್ದ ಅನಾ ಜಾರ್ವಿಸ್ ತನ್ನ ತಾಯಿಯನ್ನು ತುಂಬಾ ಪ್ರೀತಿಸುತ್ತಿದ್ದರು. ಅನಾ ಜಾರ್ವಿಸ್ ಮದುವೆ ಆಗಿರಲಿಲ್ಲ. 1905ರಲ್ಲಿ ಅನಾ ತಾಯಿ ಮರಣ ಹೊಂದಿದ್ದರು. ತನ್ನ ತಾಯಿಯ ಮೇಲಿದ್ದ ಪ್ರೀತಿಯನ್ನು ವ್ಯಕ್ತಪಡಿಸಲು ಅನಾ ಈ ದಿನ ಆಯ್ಕೆ ಮಾಡಿಕೊಂಡಿದ್ದರು. ಬಳಿಕ ಈ ದಿನವನ್ನು ತಾಯಂದಿರ ದಿನವಾಗಿ ಆಚರಿಸಲು ಶುರು ಮಾಡಿದ್ದರು.

ತಾಯಂದಿರ ದಿನ ಮಹತ್ವ :

ವಿವಿಧ ದೇಶಗಳಲ್ಲಿ ವಿಭಿನ್ನ ಸಂಪ್ರದಾಯಗಳು ಮತ್ತು ಸಂಸ್ಕೃತಿಗಳು ಚಾಲ್ತಿಯಲ್ಲಿದ್ದರೂ, ತಾಯಂದಿರ ದಿನದ ಆಚರಣೆಯ ಹಿಂದಿನ ಭಾವನೆ ಒಂದೇ ಆಗಿರುತ್ತದೆ. ನಮ್ಮ ತಾಯಿಯ ಬಗ್ಗೆ ನಮ್ಮ ಪ್ರೀತಿ ಮತ್ತು ಕೃತಜ್ಞತೆಯನ್ನು ವ್ಯಕ್ತಪಡಿಸುವ ದಿನ, ಅವರ ಮಕ್ಕಳನ್ನು ಬೆಳೆಸಲು ಅವರ ದಣಿವರಿಯದ ಪ್ರಯತ್ನಗಳು, ನಿರಂತರ ಆರೈಕೆ ಮತ್ತು ಅವರ ಮಕ್ಕಳ ದೊಡ್ಡ ಬೆಂಬಲಿಗರಾಗಿ ಬೆಳೆದರು.

ಭಾರತದಲ್ಲಿ ತಾಯಂದಿರ ದಿನ:

ದೇಶದಲ್ಲಿ ತಾಯಂದಿರನ್ನು ಯಾವಾಗಲೂ ಗೌರವಿಸಲಾಗುತ್ತದೆ. ಜನರು ತಮ್ಮ ಅಮ್ಮಂದಿರಿಗೆ ತಮ್ಮ ಪ್ರೀತಿ ಮತ್ತು ಕೃತಜ್ಞತೆಯನ್ನು ತೋರಿಸುವ ಮತ್ತೊಂದು ದಿನವಾಗಿದೆ. ಇದು ತಾಯಂದಿರು ಮಾತ್ರವಲ್ಲ, ಬದಲಾಗಿ ಅಜ್ಜಿ, ಚಿಕ್ಕಮ್ಮ ಮತ್ತು ಅತ್ತೆಯರಿಗೂ ಈ ದಿನ ಮೀಸಲು.

ತಾಯಿ (Mother) ಎಂದ ಕೂಡಲೇ ಮನಸ್ಸಿನಲ್ಲಿ ಮೂಡುವುದು ಪ್ರೀತಿ, ವಾತ್ಸಲ್ಯ, ಕರುಣೆ ಹೀಗೆ ತಾಯಿಯ ಹತ್ತು ಹಲವು ಗುಣಗಳು. ವಿಶ್ವಾದ್ಯಂತ ತಾಯಂದಿರ ದಿನ (Mother's Day)ವನ್ನು ಆಚರಿಸಲಾಗುತ್ತದೆ. ತಾಯಿಗೆ ಪ್ರೀತಿ ತೋರಿಸಲು ದಿನದ ಹಂಗಿಲ್ಲ, ಆದರೂ ಅವಳಿಗಾಗಿ ಒಂದು ದಿನವಿರುವಾಗ ಅಂದು ಆಕೆಯ ದಿನವನ್ನು ಸ್ಪೆಷಲ್ ಆಗಿ ಮಾಡಿ. ಆಕೆಯ ಜತೆ ಹೆಚ್ಚು ಸಮಯ ಕಳೆಯಿರಿ.

ತಾಯಂದಿರ ದಿನ ಶುರುವಾಗಿದ್ದು ಹೇಗೆ?

ತಾಯಂದಿರ ದಿನ 1908ರಲ್ಲಿ ಅಮೆರಿಕದಲ್ಲಿ ಶುರುವಾಗಿತ್ತು. ಅಮೆರಿಕದ ಶಾಂತಿ ಕಾರ್ಯಕರ್ತೆ ಆಗಿದ್ದ ಅನಾ ಜಾರ್ವಿಸ್ ತನ್ನ ತಾಯಿಯನ್ನು ತುಂಬಾ ಪ್ರೀತಿಸುತ್ತಿದ್ದರು. ಅನಾ ಜಾರ್ವಿಸ್ ಮದುವೆ ಆಗಿರಲಿಲ್ಲ. 1905ರಲ್ಲಿ ಅನಾ ತಾಯಿ ಮರಣ ಹೊಂದಿದ್ದರು. ತನ್ನ ತಾಯಿಯ ಮೇಲಿದ್ದ ಪ್ರೀತಿಯನ್ನು ವ್ಯಕ್ತಪಡಿಸಲು ಅನಾ ಈ ದಿನ ಆಯ್ಕೆ ಮಾಡಿಕೊಂಡಿದ್ದರು. ಬಳಿಕ ಈ ದಿನವನ್ನು ತಾಯಂದಿರ ದಿನವಾಗಿ ಆಚರಿಸಲು ಶುರು ಮಾಡಿದ್ದರು.

ತಾಯಿಯ ಮಹತ್ವವನ್ನು ಜನರಿಗೆ ತಿಳಿಸಲು ಈ ದಿನವನ್ನು ಆಚರಿಸಲಾಗುತ್ತದೆ. ತಾಯಂದಿರ ದಿನದ ಮಹತ್ವವನ್ನು ಅರಿತ ಜನರು, ತಮ್ಮದೇ ಆದ ರೀತಿಯಲ್ಲಿ ತಾಯಂದಿರ ದಿನವನ್ನು ಆಚರಿಸುತ್ತಾರೆ. ವಿಶೇಷವಾಗಿ ಭಾರತದಲ್ಲಿ, ಮಕ್ಕಳು ತಮ್ಮ ತಾಯಿಗೆ ವಿಶೇಷ ಭಾವನೆ ಮೂಡಿಸಲು ಏನಾದರೂ ವಿಶೇಷವಾದ ಯೋಜನೆ ರೂಪಿಸುತ್ತಾರೆ. ತಾಯಿಯನ್ನು ಗೌರವಿಸುವವರು ಆ ದಿನ ವಿಶೇಷ ಊಟ, ಉಡುಗೊರೆ ವ್ಯವಸ್ಥೆ ಮಾಡ್ತಾರೆ. ಮತ್ತೆ ಕೆಲವರಿಗೆ ತಾಯಿ ಮಾಡಿದ ಕೆಲಸ ಮರೆತು ಹೋಗಿರುತ್ತದೆ. ತಾಯಂದಿರ ದಿನಕ್ಕೆ ಶುಭ ಕೋರದೆ,ಉಡುಗೊರೆ ನೀಡದೆ ಆಕೆಯನ್ನು ಹೊರ ಹಾಕಿದ ಉದಾಹರಣೆಗಳು ಸಾಕಷ್ಟಿವೆ.

ಲಂಡನ್‌ನಲ್ಲಿ ತಾಯಂದಿರ ದಿನವನ್ನು ಮಾರ್ಚ್ ತಿಂಗಳ ನಾಲ್ಕನೇ ಭಾನುವಾರದಂದು ಆಚರಿಸಲಾಗುತ್ತದೆ. ಗ್ರೀಸ್ ದೇಶದಲ್ಲಿ ಫೆಬ್ರವರಿ 2ರಂದು ಆಚರಿಸಲಾಗುತ್ತದೆ. ಭಾರತ ಸೇರಿ ಹಲವಾರು ದೇಶಗಳಲ್ಲಿ ಪ್ರತಿ ವರ್ಷ ಮೇ ತಿಂಗಳ 2ನೇ ಭಾನುವಾರದಂದು ತಾಯಂದಿರ ದಿನ ಆಚರಿಸಲಾಗುತ್ತದೆ. ಈ ವರ್ಷ ಮೇ 12ರಂದು ತಾಯಂದಿರ ದಿನ ಆಚರಿಸಲಾಗುತ್ತದೆ. ॐ

ಕಾರ್ಮಿಕರ ದಿನ

ಮೇ 1 ರಂದು ಸಮಾಜಕ್ಕಾಗಿ ಕಾರ್ಮಿಕರ ಕೊಡುಗೆ ಹಾಗೂ ತ್ಯಾಗವನ್ನು ಸ್ಮರಿಸಲಾಗುತ್ತದೆ. ಭಾರತದಲ್ಲಿ ಇದನ್ನು 'ಮೇ ದಿನ' ಅಥವಾ ಕಾರ್ಮಿಕರ ದಿನ ಎಂದು ಕರೆಯುತ್ತಾರೆ. ದೇಶದಲ್ಲಿ ಮೊದಲ ಕಾರ್ಮಿಕ ದಿನವನ್ನು ಮೇ 1, 1923 ರಂದು ಮದ್ರಾಸಿನಲ್ಲಿ ಆಚರಿಸಲಾಯಿತು. ಇದನ್ನು ಕಾಮ್ರೇಡ್ ಸಿಂಗರವೇಲರ್ ನೇತೃತ್ವದ ಲೇಬರ್ ಕಿಸಾನ್ ಪಾರ್ಟಿ ಆಫ್ ಹಿಂದೂಸ್ತಾನ್ ಆರಂಭಿಸಿತ್ತು.

ಶ್ರಮಜೀವಿಗಳ ಕೆಲಸವನ್ನು ಗೌರವಿಸುವ ಹಾಗೂ ಅವರ ಕಷ್ಟಗಳನ್ನು ಸ್ಮರಿಸುವ ಸಲುವಾಗಿ ಮೇ 1 ರಂದು ಜಾಗತಿಕವಾಗಿ 'ಅಂತಾರಾಷ್ಟ್ರೀಯ ಕಾರ್ಮಿಕರ ದಿನ'ವನ್ನಾಗಿ ಆಚರಿಸಲಾಗುತ್ತದೆ. ಇದನ್ನು ಮೇ ಡೇ, ಲೇಬರ್ ಡೇ ಹಾಗೂ ವರ್ಕರ್ಸ್ ಡೇ ಎಂತಲೂ ಕರೆಯಲಾಗುತ್ತದೆ. ಕಾರ್ಮಿಕ ವರ್ಗದ ಶ್ರಮ ಮತ್ತು ಸಮರ್ಪಣೆಯನ್ನು ಗುರುತಿಸುವುದು, ಕಾರ್ಮಿಕರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಶೋಷಣೆಯಿಂದ ರಕ್ಷಿಸುವುದು ಕಾರ್ಮಿಕ ದಿನದ ಉದ್ದೇಶ.

1886ರಲ್ಲಿ ಅಮೆರಿಕದಲ್ಲಿ ಮೊದಲ ಬಾರಿಗೆ ಕಾರ್ಮಿಕರ ದಿನ ಆಚರಿಸಲಾಯಿತು. ದಿನಕ್ಕೆ ಕಾರ್ಮಿಕರಿಗೆ 8 ಗಂಟೆ ಕೆಲಸದ ಅವಧಿಯನ್ನು ನಿಗದಿ ಮಾಡಬೇಕು ಎಂಬ ಆಗ್ರಹದೊಂದಿಗೆ ಶುರುವಾದ ಚಳವಳಿಗೆ ಯಶಸ್ಸು ಸಿಕ್ಕಿತ್ತು. ಇದೇ ಹೋರಾಟದ ಕಿಚ್ಚಿನಲ್ಲಿ ಉದಯಿಸಿದ್ದೇ ಕಾರ್ಮಿಕರ ದಿನಾಚರಣೆ. ಭಾರತದಲ್ಲಿ ಈ ಆಚರಣೆ ಆರಂಭವಾಗಿದ್ದು 1923 ರಲ್ಲಿ. ವಿಶ್ವದ ನಾನಾ ಭಾಗಗಳಲ್ಲಿ ಕಾರ್ಮಿಕರ ದಿನಾಚರಣೆಯನ್ನು ಆಚರಿಸುವ ಮೂಲಕ ಶ್ರಮಜೀವಿಗಳಿಗೆ ಕೃತಜ್ಞತೆ ಸಲ್ಲಿಸಲಾಗುತ್ತದೆ.

ಮೇ 1 ರಂದು ಸಮಾಜಕ್ಕಾಗಿ ಕಾರ್ಮಿಕರ ಕೊಡುಗೆ ಹಾಗೂ ತ್ಯಾಗವನ್ನು ಸ್ಮರಿಸಲಾಗುತ್ತದೆ. ಭಾರತದಲ್ಲಿ ಇದನ್ನು 'ಮೇ ದಿನ' ಎಂದು ಕರೆಯುತ್ತಾರೆ. ದೇಶದಲ್ಲಿ ಮೊದಲ ಕಾರ್ಮಿಕ ದಿನವನ್ನು ಮೇ 1, 1923 ರಂದು ಮದ್ರಾಸಿನಲ್ಲಿ ಆಚರಿಸಲಾಯಿತು. ಇದನ್ನು ಕಾಮ್ರೇಡ್ ಸಿಂಗರವೇಲರ್ ನೇತೃತ್ವದ ಲೇಬರ್ ಕಿಸಾನ್ ಪಾರ್ಟಿ ಆಫ್ ಹಿಂದೂಸ್ತಾನ್ ಆರಂಭಿಸಿತ್ತು. ಅಂದಿನಿಂದ ಈವರೆಗೆ ಭಾರತದಲ್ಲಿ ಕಾರ್ಮಿಕರ ದಿನವನ್ನು ಆಚರಿಸಲಾಗುತ್ತಿದೆ ಮತ್ತು ರಾಷ್ಟ್ರೀಯ ರಜೆ ಘೋಷಿಸಲಾಗಿದೆ. ಇದು 141ನೇ ವರ್ಷದ ಅಂತಾರಾಷ್ಟ್ರೀಯ ಕಾರ್ಮಿಕರ ದಿನವಾಗಿದೆ.

ಭಾರತದ ವಿವಿಧ ರಾಜ್ಯಗಳಲ್ಲಿ ವಿವಿಧ ಹೆಸರುಗಳಲ್ಲಿ ಕಾರ್ಮಿಕ ದಿನವನ್ನು ಆಚರಿಸಲಾಗುತ್ತದೆ. ಉದಾಹರಣೆಗೆ ಹಿಂದಿಯಲ್ಲಿ 'ಅಂತಾರಾಷ್ಟ್ರೀಯ ಶ್ರಮಿಕ್ ದಿವಸ್', ಕಾರ್ಮಿಕ ದಿನಚರಣೆ (ಕನ್ನಡ), ಕಾರ್ಮಿಕ ದಿನೋತ್ಸವಮ್

(ತೆಲುಗು), ಕಮ್‌ಗರ್ ದಿವಸ್ (ಮರಾಠಿ), ಉಜ್ಜೈಪಾಲರ್ ದೀನಂ (ತಮಿಳು), ತೊಝಿಲಾಲಿ ದಿನಂ (ಮಲಯಾಳಂ), ಮತ್ತು ಶ್ರೋಮಿಕ್ ದಿಬೋಶ್ (ಬಂಗಾಳಿ) ಎಂದು ಕರೆಯುತ್ತಾರೆ.

ಅಮೆರಿಕದ ಕಾರ್ಮಿಕರು, ಕಠೋರ ಕಾರ್ಮಿಕ ನಿಯಮ, ಕಾರ್ಮಿಕರ ಹಕ್ಕುಗಳ ಉಲ್ಲಂಘನೆ ಮತ್ತು ಭಯಾನಕ ಕೆಲಸದ ವೇಳೆಯ ವಿರುದ್ಧ ಪ್ರತಿಭಟನೆ ಆರಂಭಿಸಿದರು. ದಿನಕ್ಕೆ 8 ಗಂಟೆ ಕೆಲಸ ನಿಗದಿಗೊಳಿಸಬೇಕೆಂಬ ಈ ಚಳವಳಿ 1860ರಿಂದ ಆರಂಭವಾಯಿತು. ಚಳವಳಿಗಾಗಿ ಅಮೆರಿಕ ಹಾಗೂ ಕೆನಡಾದಲ್ಲಿ ಹಲವು ಕಾರ್ಮಿಕ ಸಂಘಟನೆಗಳು ಅಸ್ತಿತ್ವಕ್ಕೆ ಬಂದವು.

ದಿನಕ್ಕೆ 10 ರಿಂದ 14 ಗಂಟೆಗಳ ಕಾಲ ಬಲವಂತವಾಗಿ ದುಡಿಸಿಕೊಳ್ಳುವುಕ್ಕೆ ವಿವಿಧ ಸಂಘಟನೆಗಳು ತೀವ್ರ ವಿರೋಧ ವ್ಯಕ್ತಪಡಿಸಿದವು. ಷಿಕಾಗೋ ನಗರ ಸಾವಿರಾರು ಕಾರ್ಮಿಕ ಸಂಘಟನೆಗಳ ಕೇಂದ್ರವಾಗಿ ಮಾರ್ಪಟ್ಟಿತು. 1886 ಮೇ 1 ಕಾರ್ಮಿಕ ಹೋರಾಟದ ಇತಿಹಾಸದಲ್ಲಿ ಒಂದು ಮಹತ್ವದ ಘಟ್ಟ. ಲಕ್ಷಾಂತರ ಮಂದಿ ಕಾರ್ಮಿಕರು 8 ಗಂಟೆಗಳ ಕೆಲಸದ ನಿಗದಿಗೆ ಪ್ರತಿಭಟನೆ ಪ್ರಾರಂಭಿಸಿದ್ದರು. ಈ ಹೋರಾಟದಲ್ಲಿ ಎಷ್ಟೋ ಕಾರ್ಮಿಕರು ಪ್ರಾಣ ತ್ಯಾಗ ಮಾಡಬೇಕಾಯಿತು. ಹೀಗಾಗಿ 1916 ರವರೆಗೂ ಅಮೆರಿಕ 8 ಗಂಟೆಗಳ ಕೆಲಸ ಸಮಯವನ್ನು ನಿಗದಿಗೊಳಿಸಿತು. ಕಾರ್ಮಿಕ ಹೋರಾಟಕ್ಕೆ ಸಿಕ್ಕ ಯಶಸ್ಸಿನ ನೆನಪಿಗಾಗಿ ಹಾಗೂ ಮೃತ ಕಾರ್ಮಿಕರ ಗೌರವಾರ್ಥವಾಗಿ ಮೇ 1 ರಂದು ಕಾರ್ಮಿಕರ ದಿನವಾಗಿ ಆಚರಿಸಲಾಗುತ್ತಿದೆ. ಈ ಬಲಿದಾನಗಳ ಫಲವಾಗಿ ಕೆಲಸದ ಅವಧಿ ಇಂದು ವಿಶ್ವದ ಅನೇಕ ದೇಶಗಳಲ್ಲಿ 8 ಗಂಟೆಗಳಿಗೆ ಮಿತಿಗೊಂಡಿದೆ.

ಕಾರ್ಮಿಕರ ದಿನದ ಹಿನ್ನೆಲೆ ಮತ್ತು ಮಹತ್ವ:

ದಿನದ 15 ಗಂಟೆಗಳ ಕಾಲ ಇದ್ದ ಕೆಲಸದ ಸಮಯದ ಮಿತಿಯನ್ನು 8 ಗಂಟೆಗಳ ಅವಧಿಗೆ ತರಬೇಕು ಎಂಬ ಬೇಡಿಕೆಯನ್ನು ಮುಂದಿಟ್ಟು ಕಾರ್ಮಿಕರು ಅಮೆರಿಕದ ಚಿಕಾಗೋ ನಗರದಲ್ಲಿ ಮೇ 1, 1886 ರಂದು ಪ್ರತಿಭಟನೆ ನಡೆಸಲು ಮುಂದಾದರು. ಹೋರಾಟ ತೀವ್ರ ಸ್ವರೂಪ ಪಡಿದಿದ್ದರಿಂದ ಇದನ್ನು ಹತ್ತಿಕ್ಕಲು ಮೇ 4 ರಂದು ಪೋಲಿಸರು ಕಾರ್ಮಿಕರ ಮೇಲೆ ಗುಂಡಿನ ದಾಳಿ ನಡೆಸಿದರು. ಈ ದಮನಕಾರಿ ನೀತಿಯನ್ನು ಖಂಡಿಸಿ ಅಲ್ಲಿನ ಜನರು ಪ್ರತೀ ವರ್ಷ ಮೇ 1 ರಂದು ಕಾರ್ಮಿಕ ದಿನವನ್ನಾಗಿ ಆಚರಿಸುವಂತೆ ಒತ್ತಾಯಿಸಿದರು. ಇದರ ಫಲವಾಗಿ 1916 ರ ಇಸವಿಯಲ್ಲಿ ಅಮೆರಿಕ ಸರ್ಕಾರ ಕೆಲಸದ ಕಾಲಮಿತಿಯನ್ನು ಕಡಿತಗೊಳಿಸಿ 8 ಗಂಟೆಗಳ ಕಾಲ ಕೆಲಸ ಎಂದು ಆದೇಶ ನೀಡಿತು. ಜೊತೆಗೆ ಮೇ ಒಂದರಂದು ಕಾರ್ಮಿಕ ದಿನಾಚರಣೆಯನ್ನಾಗಿ ಆಚರಿಸಲು ಮುಂದಾಯಿತು.

ಭಾರತ ಮತ್ತು ಕಾರ್ಮಿಕರ ದಿನ:

ಅಮೆರಿಕಾದಲ್ಲಿ ಕಾರ್ಮಿಕರ ದಿನ 1916 ರಲ್ಲಿಯೇ ಜಾರಿಗೆ ಬಂದಿದೆ. ಆದರೆ ಭಾರತದಲ್ಲಿ 1923 ನೇ ಇಸವಿಯ ಮೇ 1 ರಂದು ಲೇಬರ್ ಕಿಸಾನ್ ಪಾರ್ಟಿ ಆಫ್ ಹಿಂದುಸ್ತಾನ್ ಸ್ಥಾಪನೆಗೊಂಡ ದಿನದಿಂದ ಆಚರಣೆ ಮಾಡಲಾಗುತ್ತದೆ. ಕಾರ್ಮಿಕರ ದಿನಾಚರಣೆಯಂದು ರಾಷ್ಟ್ರೀಯ ರಜಾ ದಿನವನ್ನಾಗಿ ಘೋಷಣೆ ಮಾಡಬೇಕೆಂದು ಮತ್ತು ಕಾರ್ಮಿಕರಿಗೆ ಅಂದಿನ ದಿನ ರಜೆ ನೀಡಬೇಕೆಂದು ಸದನದಲ್ಲಿ ಮಸೂದೆ ಮಂಡಿಸಲಾಯಿತು. ಅಂದಿನಿಂದ ಇಂದಿನವರೆಗೂ ಪ್ರತಿ ವರ್ಷ ಮೇ 1 ರಂದು ಕಾರ್ಮಿಕರ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ.

ಎರಡನೇ ಮಹಾಯುದ್ಧದ ಬಳಿಕ ಈ ದಿನವನ್ನು ಜಗತ್ತಿನಾದ್ಯಂತ ಹೆಚ್ಚಾಗಿ ಆಚರಿಸಲು ಪ್ರಾರಂಭಿಸಲಾಗಿದೆ. ಕಾರ್ಮಿಕರು ಸೇರಿ ಸಂಘಟನೆಗಳು ಈ ಆಚರಣೆಯಲ್ಲಿ ಹೆಚ್ಚಾಗಿ ಭಾಗವಹಿಸಿದವು. 1969 ರಲ್ಲಿ ಭಾರತ ರಾಷ್ಟ್ರೀಯ ಕಾರ್ಮಿಕ ಸಂಘಗಳ ಕಾಂಗ್ರೆಸ್ ಒಂದನ್ನು ಬಿಟ್ಟು ಉಳಿದೆಲ್ಲ ಕಾರ್ಮಿಕ ಸಂಘಗಳೂ ಒಟ್ಟಾಗಿ, ತಮ್ಮ ಹಕ್ಕುಗಳನ್ನು ಸಾಧಿಸಲು ಭಾರಿ ಮೆರವಣಿಗೆಯಲ್ಲಿ ಪಾರ್ಲಿಮೆಂಟ್ ಭವನದ ಬಳಿಗೆ ಮೆರವಣಿಗೆಯಲ್ಲಿ ಹೋಗಿ ಪ್ರದರ್ಶನ ನಡೆಸಿದ್ದವು.

ॐ

ರವೀಂದ್ರನಾಥ ಠಾಗೋರ್

ರವೀಂದ್ರನಾಥ ಠಾಗೋರ್ ಅವರು (7 ಮೇ 1861 – 7 ಆಗಸ್ಟ್ 1941), ಅವರು ಬಂಗಾಳಿ ಮಹಾ ವಿದ್ವಾಂಸ. ಕವಿಗಳಾಗಿ, ಕಾದಂಬರಿಕಾರರಾಗಿ, ಸಂಗೀತಕಾರರಾಗಿ ಮತ್ತು ನಾಟಕ ರಚಿಸುವ ಮೂಲಕ ಅವರು 19ನೇ ಶತಮಾನದ ಕೊನೆಯಲ್ಲಿ ಮತ್ತು 20ನೇ ಶತಮಾನದ ಆರಂಭದಲ್ಲಿ ಬಂಗಾಳಿ ಸಾಹಿತ್ಯ ಮತ್ತು ಸಂಗೀತಕ್ಕೆ ಹೊಸ ರೂಪ ಕೊಟ್ಟರು. ಅವರು ರಚಿಸಿದ "ಸೂಕ್ಷ್ಮ ಸಂವೇದನೆಯ, ನವನವೀನವೂ ಮತ್ತು ಸುಂದರವೂ ಆದ ಪದ್ಯ" ಗೀತಾಂಜಲಿ ಕಾವ್ಯಕ್ಕೆ 1913ರ ನೊಬೆಲ್ ಸಾಹಿತ್ಯ ಪ್ರಶಸ್ತಿ ದಕ್ಕಿತು. ಈ ಮೂಲಕ ಅವರು ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ಏಷ್ಯಾದ ಮೊದಲಿಗರು ಎಂಬ ಗೌರವಕ್ಕೆ ಪಾತ್ರರಾದರು.



ಕಲ್ಕತ್ತಾದ ಪಿರಾಲಿ ಬ್ರಾಹ್ಮಣ ಕುಟುಂಬಕ್ಕೆ ಸೇರಿದ ಟಾಗೋರ್ ತಮ್ಮ ಎಂಟನೇ ವಯಸ್ಸಿನಲ್ಲಿ ಪದ್ಯ ರಚನೆ ಆರಂಭಿಸಿದರು. ಹದಿನಾರನೇ ವಯಸ್ಸಿನಲ್ಲಿ ಅವರು ಭಾನುಶಿಂಫೊ ("ಸೂರ್ಯ ಸಿಂಹ") ಎಂಬ ಗುಪ್ತನಾಮದಡಿ ಮೊದಲ ಮಹತ್ವದ ಕವನವನ್ನು ಪ್ರಕಟಿಸಿದರು ಮತ್ತು ಅವರು ಮೊದಲು ಸಣ್ಣ ಕಥೆಗಳು ಮತ್ತು ನಾಟಕಗಳನ್ನು 1877 ರಲ್ಲಿ ಬರೆದರು. ಬ್ರಿಟಿಷ್ ಆಡಳಿತವನ್ನು ಬಹಿರಂಗವಾಗಿ ಖಂಡಿಸಿದ ಟಾಗೋರ್ ಭಾರತೀಯ ಸ್ವಾತಂತ್ರ್ಯ ಚಳವಳಿಯನ್ನು ಬೆಂಬಲಿಸಿದರು. ಅವರು ಜಗತ್ತಿಗೆ ನೀಡಿದ ಬಹುದೊಡ್ಡ ಗ್ರಂಥಮಾಲೆ ಮತ್ತು ಅವರು ಸ್ಥಾಪಿಸಿದ ಸಂಸ್ಥೆ ವಿಶ್ವ–ಭಾರತಿ ವಿಶ್ವಾವಿದ್ಯಾನಿಲಯ–ಇವು ಅವರ ಪ್ರಮುಖ ಕೊಡುಗೆ.

ಭಾರತೀಯ ಸಾಂಪ್ರದಾಯಕ ಶಾಸ್ತ್ರೀಯ ಕಠೋರತೆಯ ಚೌಕಟ್ಟಿನಿಂದ ಹೊರ ಬಂದ ಟಾಗೋರ್ ಬಂಗಾಳಿ ಕಲಾ ಪ್ರಕಾರಕ್ಕೆ ಹೊಸ ಮೆರಗು ನೀಡಿದರು. ಅವರ ಕಾದಂಬರಿಗಳು, ಸಣ್ಣ ಕಥೆಗಳು, ಕವನಗಳು, ನೃತ್ಯ–ನಾಟಕಗಳು, ಮತ್ತು ಪ್ರಬಂಧಗಳು ರಾಜಕೀಯ ಮತ್ತು ವೈಯಕ್ತಿಕ ವಿಷಯಗಳನ್ನೆಲ್ಲಾ ಅನುರಣಿಸಿವೆ. ಗೀತಾಂಜಲಿ (ಗೀತೆಗಳು), ಗೋರ (ಸುಂದರ ಮುಖಿ) ಮತ್ತು ಘರೇ ಬೈರೆ (ಮನೆ ಮತ್ತು ಪ್ರಪಂಚ)) ಇವರ ಹಸರಾಂತ ಕೃತಿಗಳು. ಅವರು ರಚಿಸಿದ ಕವನಗಳು, ಸಣ್ಣ ಕಥೆಗಳು, ಮತ್ತು ಕಾದಂಬರಿಗಳು ಅವುಗಳ ಸಾಹಿತ್ಯಕ್ಕೆ, ಆಡುಮಾತಿನ ಪ್ರಯೋಗಕ್ಕೆ, ವಿಚಾರಶೀಲ ವಾಸ್ತವಿಕತೆಗೆ, ಮತ್ತು ತತ್ವಶಾಸ್ತ್ರದ ಅವಲೋಕನಕ್ಕೆ ಪ್ರಶಂಸನೀಯವಾಗಿವೆ. ಟಾಗೋರ್ ರಚಿಸಿದ ಎರಡು ಗೀತೆಗಳಿಗೆ ರಾಷ್ಟ್ರ ಮನ್ನಣೆ ಸಿಕ್ಕಿದೆ. 'ಜನ ಗಣ ಮನ' ಭಾರತದ ರಾಷ್ಟ್ರ ಗೀತೆಯಾಗಿ ಅಂಗೀಕರಿಸಲಾದರೆ 'ಅಮರ್ ಶೋನರ್ ಬಾಂಗ್ಲಾ' ಬಾಂಗ್ಲಾದೇಶದ್ದು.

ದೇಬೇಂದ್ರನಾಥ ಟಾಗೋರ್ (1817–1905)ಮತ್ತು ಶಾರದಾ ದೇವಿ (1830–1875) ದಂಪತಿಗಳಿಗೆ ಕೊಲ್ಕೊತದ ಜೊರಸಂಕೊ ಭವನದಲ್ಲಿ ರವೀಂದ್ರನಾಥ್ ಜನಿಸಿದರು. ಬದುಕುಳಿದ ಹದಿಮೂರು ಮಕ್ಕಳಲ್ಲಿ ಈತನೇ ಅತ್ಯಂತ ಕಿರಿಯರು. ಠಾಗೋರ್ ಕುಟುಂಬದ ಪೂರ್ವಜರು ಆದಿ ಧರ್ಮದ ಬ್ರಾಹ್ಮೊ ಸಂಸ್ಥಾಪಕರು. ತಾಯಿಯನ್ನು ಬಾಲ್ಯದಲ್ಲೇ ಕಳೆದುಕೊಂಡ, ತಂದೆಯದು ವ್ಯಾಪಕ ಪ್ರವಾಸ – ಹೀಗಾಗಿ ಬಾಲಕ ಟಾಗೋರ್ ಹೆಚ್ಚಾಗಿ ಮನೆಯಾಳುಗಳ ದೇಖರೇಖಿಯಲ್ಲಿ ಬೆಳೆದು ಬಂದರು. ನಾಲ್ಕು ಗೋಡೆಗಳ ನಡುವಿನ ಶಾಲಾ ಪದ್ಧತಿಯನ್ನು ಇಚ್ಛಿಸದ ಟಾಗೋರ್, ಭವನದೊಳಗೆಲ್ಲ ಸುತ್ತಾಡುತ್ತಿದ್ದರು. ಬೋಲ್ಪುರ್, ಪನಿಹಟಿ ಹಾಗೂ ಇನ್ನಿತರ ಊರುಗಳನ್ನು ಸುತ್ತುವುದು ಅಥವಾ ಗ್ರಾಮೀಣ ಪ್ರದೇಶದ ಸರಳ ಸುಂದರ ಪರಿಸರದಲ್ಲಿರುವುದನ್ನು ಇಷ್ಟಪಡುತ್ತಿದ್ದರು. ಹನ್ನೊಂದನೇ ವಯಸ್ಸಿನಲ್ಲಿ ಅವರ ಉಪನಯನ ಸಂಸ್ಕಾರ ನೆರವೇರಿತು. ಇದಾದ ನಂತರ ಟಾಗೋರ್ ತಮ್ಮ ತಂದೆಯೊಂದಿಗೆ ಭಾರತ ಪರ್ಯಟನೆ ಆರಂಭಿಸಿದರು. 1873ರ ಫೆಬ್ರುವರಿ 14 ರಲ್ಲಿ ಕಲ್ಕತ್ತಾವನ್ನು ಬಿಟ್ಟ ಇವರು ಅನೇಕ ತಿಂಗಳುಗಳ ಕಾಲ ಭಾರತವನ್ನು ಸುತ್ತಿದರು. ತಂದೆಯವರ ಶಾಂತಿನಿಕೇತನ ಎಸ್ಟೇಟಿಗೆ ಭೇಟಿ ನೀಡಿದ ಇವರು ಡಾಲ್‌ಹೌಸಿ ಹಿಮಾಲಯ ಗಿರಿಧಾಮವನ್ನು ತಲುಪುವ ಮೊದಲು ಅಮೃತ್‌ಸರದಲ್ಲಿ ತಂಗಿದರು. ಅಲ್ಲಿ ಕಿರಿಯ "ರಬೀ" ಜೀವನ ಚರಿತ್ರೆಗಳನ್ನು ಓದಿದ, ಇತಿಹಾಸ, ಖಗೋಳ ವಿಜ್ಞಾನ, ಆಧುನಿಕ ವಿಜ್ಞಾನ, ಮತ್ತು ಸಂಸ್ಕೃತದ ಬಗ್ಗೆ ಅಧ್ಯಯನ ಮಾಡಿದ್ದಲ್ಲದೇ ಕಾಳಿದಾಸ ಶಾಸ್ತ್ರೀಯ ಕಾವ್ಯಗಳ ಒಳ ಹೊಕ್ಕು ನೋಡಿದರು.

ಮೈಥಿಲಿ ಶೈಲಿಯಲ್ಲಿ ರಚಿಸಿದ ದೀರ್ಘ ಪದ್ಯ ಸಂಗ್ರಹವನ್ನೂ ಒಳಗೊಂಡು, ಹಲವಾರು ಪ್ರಮುಖ ಕಾವ್ಯಗಳನ್ನು 1877 ರಲ್ಲಿ ಅವರು ರಚಿಸಿದರು. ವಿದ್ಯಾಪತಿ ಎಂಬ ಕವಿ ಮೈಥಿಲಿ ಶೈಲಿಯ ರೂವಾರಿಯಾದರು. ಕಳೆದು ಹೋಗಿದ್ದ 17ನೇ ಶತಮಾನದ ವೈಷ್ಣವ ಕವಿಯ ಕೃತಿಗಳು ಭಾನುಸಿಂಹ ಇವು ಎಂದು ತಮಾಷೆಗಾಗಿ ಹೇಳುತ್ತಿದ್ದರು. "ಭಿಕಾರಿಣಿ" (1877; " ಭಿಕ್ಷುಕಿ"–ಬಂಗಾಳಿ ಭಾಷೆಯ ಮೊದಲ ಸಣ್ಣ ಕಥೆ) ಮತ್ತು ಸಂಧ್ಯಾ ಸಂಗೀತ (1882) ಪ್ರಸಿದ್ಧ ಪದ್ಯ "ನಿರ್ಝರೇರ್ ಸ್ವಪ್ನಭಂಗ" ("ಜಲಪಾತದ ಭೋರ್ಗರೆತ")ವನ್ನೂ ಒಳಗೊಂಡಂತೆ ಕೆಲವು (1882) ಕೃತಿಗಳನ್ನು ಬರೆದರು. ಸುಂದರವಾಗಿ ಅಲಂಕೃತಗೊಂಡ ಪುರುಷ ಮತ್ತು ಮಹಿಳೆಯ ಕಪ್ಪು–ಬಿಳುಪು ಛಾಯಾಚಿತ್ರ: ನಗುತ್ತಿರುವ, ಬೆಂಚಿನ ಹಿಂದೆ ಹೆಗಲಲ್ಲಿ ಶಾಲು ಹೊದ್ದುಕೊಂಡ ಸೊಂಟಕ್ಕೆ ಕೈಇಟ್ಟುಕೊಂಡ ಮತ್ತು ಬಂಗಾಳಿ ಸಾಂಪ್ರದಾಯಿಕ ಉಡುಗೆಯಲ್ಲಿರುವ ಪುರುಷ. ಬೆಂಚಿನಲ್ಲಿ ಕುಳಿತ, ಭಾರತೀಯ ಉಡುಗೆ ಮತ್ತು ಶಾಲಿನಲ್ಲಿರುವ ಮಹಿಳೆ; ಅವರು ಹೂದಾನಿ ಮತ್ತು ಹರಿವ ಎಲೆಗಳಿಂದ ರೂಪಿಸಿದ ಆಧಾರಕ್ಕೆ ಒರಗಿನಿಂತಿದ್ದಾರೆ.

ಟಾಗೋರ್ ಮತ್ತು ಮೃನಾಲಿನಿ ದೇವಿ, 1883

ಇಂಗ್ಲೆಂಡ್‌ನ ಪೂರ್ವ ಸಸ್ಸೆಕ್ಸ್‌ನ ಬ್ರಿಘ್ಟನ್‌ನಲ್ಲಿ 1878ರಲ್ಲಿ ಸಾರ್ವಜನಿಕ ಶಾಲೆಗೆ ಭಾವಿ ನ್ಯಾಯವಾದಿ ಟಾಗೋರ್ ಸೇರಿದರು. ಅವರು ಯೂನಿವರ್ಸಿಟಿ ಕಾಲೇಜ್ ಲಂಡನ್ ನಲ್ಲಿ ಕಾನೂನನ್ನು ಅಭ್ಯಸಿಸಿದರು, ಆದರೆ ಶೇಕ್ಸ್‌ಪಿಯರ್ ಮತ್ತು ರೆಲಿಜಿಯೊ ಮೆಡಿಸಿ, ಕೊರಿಯೊಲನಸ್, ಮತ್ತು ಆಂಟೊನಿ ಮತ್ತು ಕ್ಲಿಯೊಪಾತ್ರ ಮೊದಲಾದವುಗಳ ಪರಿಪೂರ್ಣ ಅಧ್ಯಯನ ಮಾಡುವ ಉದ್ದೇಶದಿಂದ ಶಾಲೆಯನ್ನು ಬಿಟ್ಟರು. ಅವರು 1880 ರಲ್ಲಿ ಪದವಿ–ಪಡೆಯದೆ ಬಂಗಾಳಕ್ಕೆ ಹಿಂದಿರುಗಿದರು. ಮೃಣಾಲಿನಿ ದೇವಿ (ಭಬತಾರಿಣಿ ತೌರು ಮನೆಯಲ್ಲಿಟ್ಟ ಹೆಸರು. 1873–1900) ಅವರನ್ನು 1883ರ ಡಿಸೆಂಬರ್ 9 ರಂದು ಅವರು ಮದುವೆಯಾದರು. ಜನಿಸಿದ ಐವರು ಮಕ್ಕಳಲ್ಲಿ ಇಬ್ಬರು ಪ್ರೌಢರಾಗುವ ಮುನ್ನವೇ ಸಾವನ್ನಪ್ಪಿದರು. 1890 ರಲ್ಲಿ ಟಾಗೋರ್, ಈಗ ಬಾಂಗ್ಲಾದೇಶದಲ್ಲಿರುವ, ಶಿಲೈದಾಹದಲ್ಲಿರುವ ಅವರ ಕುಟುಂಬದ ವಿಸ್ತಾರವಾದ ಎಸ್ಟೇಟಿನ ನಿರ್ವಹಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. 1898ರಲ್ಲಿ ಅವರ ಪತ್ನಿ ಮತ್ತು ಪುತ್ರರೂ ಅವರನ್ನು ಸೇರಿ ಕೊಂಡರು."ಜಮೀನ್ದಾರ್ ಬಾಬು" ಟಾಗೋರ್ ಕುಟುಂಬದ ಐಷಾರಾಮಿ ನೌಕಾಗೃಹ ಪದ್ಮ ದಿಂದ

ದೂರವಾಗಿ ಜೀವಿಸುತ್ತಿದ್ದ ಸಂದರ್ಭದಲ್ಲಿ ಕರಗಳನ್ನು (ಹೆಚ್ಚಿನವು ಸಾಂಕೇತಿಕ) ಸಂಗ್ರಹಿಸಲು ಮತ್ತು ಅವರ ಗೌರವಾರ್ಥವಾಗಿ ಔತಣಕೂಟಗಳನ್ನು ಏರ್ಪಡಿಸಿದ ಗ್ರಾಮಸ್ಥರನ್ನು ಆಶೀರ್ವದಿಸಲು ತಮ್ಮ ಜಮೀನಿನಾದ್ಯಂತ ಓಡಾಡಿದರು.

1891 ರಿಂದ 1895 ಇದನ್ನು ಟ್ಯಾಗೋರ್‌ರ ಸಾಧನಾ ಅವಧಿ ಎನ್ನುತ್ತಾರೆ. ಅವರ ಪತ್ರಿಕೆಗಳಲ್ಲಿ ಒಂದಕ್ಕೆ ಸಾಧನಾ ಎಂದು ಹೆಸರಿಡಲಾಗಿದೆ. ಈ ಅವಧಿಯು ಹೆಚ್ಚು ಸೃಜನಶೀಲವಾಗಿತ್ತು. ಮೂರು–ಸಂಪುಟಗಳ ಅರ್ಧಕ್ಕಿಂತ ಹೆಚ್ಚಿನ ಕಥೆಗಳನ್ನು ಮತ್ತು ಎಂಭತ್ತನಾಲ್ಕು ಕಥೆಗಳ ಸಂಗ್ರಹ ಗಲ್ಪಗುಚ್ಛ ವನ್ನೂ ಈ ಅವಧಿಯಲ್ಲಿಯೇ ಅವರು ಬರೆದುದು. ಬಂಗಾಳಿ ಜೀವನಶೈಲಿಯ ವಿಶೇಷವಾಗಿ ಗ್ರಾಮೀಣ ಜೀವನದ ವಿಸ್ತಾರವಾದ ವ್ಯಾಪ್ತಿಯನ್ನು ಅವರು ವ್ಯಂಗ್ಯ ಮತ್ತು ಭಾವನಾತ್ಮಕ ಪ್ರಭಾವದಿಂದ ಚಿತ್ರಿಸಿದ್ದಾರೆ.

ಶಾಂತಿನಿಕೇತನ

1901 ರಲ್ಲಿ ಟಾಗೋರ್ ಶಿಲೈದಾಹವನ್ನು ಬಿಟ್ಟು ಶಾಂತಿನಿಕೇತನಕ್ಕೆ ಬಂದರು. ಅಲ್ಲೊಂದು ಆಶ್ರಮ ಸ್ಥಾಪಿಸಿದರು. ಅಮೃತ ಶಿಲೆಯ ನೆಲದ ಪ್ರಾರ್ಥನಾ ಮಂದಿರ ಅಲ್ಲಿ ತಲೆ ಎತ್ತಿತು. ಗಿಡ ಮರಗಳ ತೋಪು, ಉದ್ಯಾನ, ಗ್ರಂಥಾಲಯ ಜೊತೆಗೊಂದು ಪ್ರಾಯೋಗಿಕ ಶಾಲೆ–ಇವೆಲ್ಲ ಸಿದ್ಧವಾದವು. ಟಾಗೋರ್‌ರ ಪತ್ನಿ ಮತ್ತು ಇಬ್ಬರು ಮಕ್ಕಳು ಇಲ್ಲಿ ಕೊನೆಯುಸಿರೆಳೆದರು. 1905ರ ಜನವರಿ 19ರಂದು ಅವರ ತಂದೆ ವಿಧಿವಶರಾದರು. ಪಿತ್ರಾರ್ಜಿತವಾಗಿ ಇವರಿಗೆ ಸಂದಾಯವಾಗಬೇಕಿದ್ದನ್ನು ಪ್ರತಿ ತಿಂಗಳೂ ಅವರು ಪಡೆಯಲಾರಂಭಿಸಿದರು. ತ್ರಿಪುರದ ಮಹಾರಾಜನಿಂದ ಒಂದಷ್ಟು ಹಣ ಪಡೆದರು. ಕುಟುಂಬದ ಆಭರಣಗಳ ಮಾರಾಟದಿಂದ ಸ್ವಲ್ಪ ಬಂತು, ಪುರಿಯಲ್ಲಿನ ಸುಮುದ್ರತೀರದ ಬಂಗಲೆಯಿಂದ ಇನ್ನಷ್ಟು ಕೈ ಸೇರಿತು, ಇಷ್ಟಲ್ಲದೆ ಅವರ ಬರಹಗಳಿಗೆ ಸಿಕ್ಕಿದ ಸಾಧಾರಣ ರಾಯ ಧನಗಳಿಂದ (Rs. 2,000/–) ಸಿಗುತ್ತಿದ್ದುದು ಅವರ ಮತ್ತೊಂದು ಆದಾಯ ಮೂಲವಾಯಿತು.

ಈ ಹೊತ್ತಿಗೆ ಅವರ ಬರಹಗಳು ಅವರಿಗೆ ಹೆಚ್ಚಿನ ಬಂಗಾಳಿ ಅಭಿಮಾನಿಗಳನ್ನು ಮತ್ತು ವಿದೇಶಿ ಓದುಗರನ್ನು ತಂದು ಕೊಟ್ಟಿತು. ನೈವೇದ್ಯ (1901) ಮತ್ತು ಖೇಯ (1906) ಪುಸ್ತಕಗಳನ್ನು ಪ್ರಕಟಿಸಿದರು. ಇದೇ ಸಮಯದಲ್ಲಿ ಅವರು ತಮ್ಮ ಗೀತೆಗಳನ್ನು ಮುಕ್ತ ಛಂದಸ್ಸಿನ ಪದ್ಯಗಳನ್ನಾಗಿ ಅನುವಾದಿಸುವ ಕಾಯಕದಲ್ಲಿ ತೊಡಗಿದರು. 1913ರ ಸಾಹಿತ್ಯ ಕ್ಷೇತ್ರದ ನೊಬೆಲ್ ಪ್ರಶಸ್ತಿ ತಮ್ಮ ಪಾಲಿಗೆ ಸಂದಿದ್ದು ಟಾಗೋರ್‌ಗೆ 1913ರ ನವೆಂಬರ್ 14ರಂದು ಗೊತ್ತಾಯಿತು. ಗೀತಾಂಜಲಿ: ಪದ್ಯಾರ್ಪಣೆಗಳು ಹಾಗೂ ಇನ್ನಿತರ ಅವರ ಅನುವಾದಿತ ಸಾಹಿತ್ಯ ಪಾಶ್ಚಾತ್ಯ ಓದುಗರಿಗೆ ಸಣ್ಣ ಪ್ರಮಾಣದಲ್ಲಿ ದೊರೆಯುವಂತಾದದ್ದನ್ನು ಹಾಗೂ ಅದರ ಆದರ್ಶವಾದವನ್ನು ಸ್ವಿಡಿಶ್ ಅಕಾಡೆಮಿ ಮೆಚ್ಚಿಕೊಂಡಿತು. 1915ರಲ್ಲಿ ಬ್ರಿಟಿಷ್ ಚಕ್ರಾಧಿಪತ್ಯ ಟಾಗೋರ್‌ಗೆ ನೈಟ್ ಬಿರುದನ್ನು ನೀಡಿ ಗೌರವಿಸಿತು.

ಟಾಗೋರ್ ಮತ್ತು ಕೃಷಿ ಅರ್ಥಶಾಸ್ತ್ರಜ್ಞ ಲಿಯೊನಾರ್ಡ್ ಎಲ್ಮ್‌ಸ್ಟ್‌ರಿಕೊಂಡು ಶಾಂತಿನಿಕೇತನದ ಆಶ್ರಮದ ಹತ್ತಿರದ ಹಳ್ಳಿ ಸುರುಲ್‌ನಲ್ಲಿ 1921 ರಲ್ಲಿ ಗ್ರಾಮೀಣ ಪುನರುತ್ಥಾನಕ್ಕಾಗಿ ಸಂಸ್ಥೆಯೊಂದನ್ನು (ಟಾಗೋರ್ ಇದಕ್ಕೆ ಶ್ರೀನಿಕೇತನ "ಸಂಪತ್ತಿನ ನೆಲೆ" ಎಂದು ಮರುಹೆಸರಿಸಿದರು) ಪ್ರಾರಂಭಿಸಿದರು. ಗಾಂಧಿ ನೇತೃತ್ವದ ಪ್ರತೀಕಕ್ಕೆ, ಸ್ವರಾಜ್ ಚಳವಳಿಗೆ ಬೆಂಬಲ ನೀಡಿ ಪರ್ಯಾಯವೊಂದನ್ನು ಟಾಗೋರ್ ಒದಗಿಸಲು ಯತ್ನಿಸಿದರು. "ಅಸಹಾಯಕತೆ ಮತ್ತು ಅಜ್ಞಾನದ ತೊಳಲಾಟದಿಂದ ನರಳುತ್ತಿರುವ ಹಳ್ಳಿಗಳನ್ನು" 'ಜ್ಞಾನಾಭಿವೃದ್ಧಿ'ಯಿಂದ ಮುಕ್ತವಾಗಿಸುವ, ಮತ್ತು ಇದಕ್ಕಾಗಿ ಸಂಸ್ಥೆಗೆ ನೆರವಾಗುವ ಉದ್ದೇಶದಿಂದ ವಿದ್ವಾಂಸರು, ದಾನಿಗಳು ಮತ್ತು ಅಧಿಕಾರಿಗಳನ್ನು ಬೇರೆ ಬೇರೆ ರಾಷ್ಟ್ರಗಳಿಂದ ನಿಯೋಜಿಸಿದರು. ಭಾರತದ "ಜಾತಿ ಪದ್ಧತಿಯ ಕಾಠಿಣ್ಯ" ಮತ್ತು ಅಸ್ಪೃಶ್ಯತೆಯ ಆಚರಣೆಯನ್ನು 1930ರ ಆರಂಭದಲ್ಲಿ ಅವರು ಖಂಡಿಸಿದರು.ಈ ಎಲ್ಲ ಅನಿಷ್ಟಗಳ ವಿರುದ್ಧ ದನಿ ಎತ್ತಿದರು, ನಾಟಕ ಮತ್ತು ಕವನಗಳನ್ನು ರಚಿಸಿದರು, ಯಶಸ್ವಿ ಆಂದೋಲನದ ಮೂಲಕ ಗುರುವಾಯೂರ್ ದೇವಾಲಯವನ್ನು ದಲಿತರ ಪ್ರವೇಶಕ್ಕಾಗಿ ಮುಕ್ತಗೊಳಿಸಿದರು.

ಕೊನೆಯಲ್ಲಿ ಟಾಗೋರ್ ಸಾಂಪ್ರದಾಯಿಕತೆಯನ್ನು ಒರೆ ಹಚ್ಚಿ ನೋಡಿದರು. ಸಾವಿರಾರು ಮಂದಿಯನ್ನು ಬಲಿತೆಗೆದುಕೊಂಡ 1934 ರ ಜನವರಿ 15ರಂದು ಬಿಹಾರ್‌ನಲ್ಲಿ ಸಂಭವಿಸಿದ ಭಾರಿ ಭೂಕಂಪವನ್ನು ದಲಿತರ ದಬ್ಬಾಳಿಕೆಯಿಂದಾದ ದೈವದತ್ತ ಪ್ರತಿಫಲ ಎಂಬ ಗಾಂಧಿ ಮಾತಿಗೆ ಅವರು ಛೀಮಾರಿ ಹಾಕಿದರು. ಕಲ್ಕತ್ತಾದ ಸ್ಥಳೀಯ ಬಡತನದ ಬಗ್ಗೆ ಮತ್ತು ಬಂಗಾಳದ ಸಮಾಜಾರ್ಥಿಕ ಪರಿಸ್ಥಿತಿ ಕ್ಷೀಣಿಸಿದ ಬಗ್ಗೆ ಅವರು ಖೇದ ವ್ಯಕ್ತಪಡಿಸಿದರು. ಇದರಿಂದುಂಟಾದ ದುಃಖವನ್ನು ಪ್ರಾಸಬದ್ಧವಲ್ಲದ ನೂರು–ಸಾಲುಗಳ ಪದ್ಯದಲ್ಲಿ ತೋಡಿಕೊಂಡಿದ್ದಾರೆ. ಸತ್ಯಜಿತ್ ರೈ ಅವರ ಅಪೂರ್ ಸಂಸಾರ್ ಚಿತ್ರಕ್ಕೆ ಇದು ಪೂರ್ವ ಭೂಮಿಕೆ ಒದಗಿಸಿತು. ಟಾಗೋರ್‌ರ ಬರಹಗಳನ್ನೊಳಗೊಂಡ ಹದಿನೈದು ಹೊಸ ಸಂಪುಟಗಳು ಹೊರ ಬಂದವು. ಅವುಗಳಲ್ಲಿ ಪುನಶ್ಚ (1932), ಶೇಸ್ ಸಪ್ತಕ್ (1935), ಮತ್ತು ಪತ್ರಾಪುಟ್ (1936) ಗದ್ಯ–ಪದ್ಯ ರೂಪದ ಕೃತಿಗಳು. ಪ್ರಯೋಗ ಹೀಗೇ ಮುಂದುವರಿಯಿತು: ಅವರು ಗದ್ಯ ರೂಪದ ಹಾಡುಗಳನ್ನೂ ಹಾಗೂ ನೃತ್ಯನಾಟಕಗಳನ್ನೂ ಬರೆದು ಹೊಸ ಹಾದಿ ಹಾಕಿದರು. ಚಿತ್ರಾಂಗದ (1914), ಶ್ಯಾಮ (1939), ಮತ್ತು ಚಂಡಾಲಿಕಾ (1938) ಮುಂತಾದ ಅನೇಕ ನೃತ್ಯ–ನಾಟಕಗಳನ್ನು ಬರೆದರು ಮತ್ತು ದುಯ್ ಬೋನ್ (1933), ಮಲಂಚ (1934), ಮತ್ತು ಚಾರ್ ಅಧ್ಯಾಯ್ (1934) ಕಾಂದಬರಿ ಗಳನ್ನು ರಚಿಸಿದರು. ಜೀವಿತದ ಕೊನೆಯ ವರ್ಷಗಳಲ್ಲಿ ಟಾಗೋರ್ ವಿಜ್ಞಾನ ವಿಷಯದಲ್ಲಿ ಆಸಕ್ತಿ ತಾಳಿ ವಿಶ್ವ–ಪರಿಚಯ್ (1937) ಕೃತಿ ನೀಡಿದರು (ಪ್ರಬಂಧಗಳ ಸಂಗ್ರಹ). ಜೀವಶಾಸ್ತ್ರ, ಭೌತಶಾಸ್ತ್ರ, ಮತ್ತು ಖಗೋಳಶಾಸ್ತ್ರದ ಬಗೆಗಿನ ಅಧ್ಯಯನ ಅವರ ಕಾವ್ಯದ ಮೇಲೆ ಪ್ರಭಾವ ಬೀರಿದವು. ನಿಸರ್ಗವಾದವನ್ನು ವ್ಯಾಪಕವಾಗಿ ಹೊಂದಿದ್ದರಿಂದಾಗಿ ವೈಜ್ಞಾನಿಕ ನಿಯಮಗಳ ಬಗ್ಗೆ ಅವರಿಗಿದ್ದ ಅಪಾರ ಆದರವನ್ನು ಎತ್ತಿ ತೋರುತ್ತದೆ. ವಿಜ್ಞಾನಿಗಳ ಕಥನವನ್ನೂ ಒಳಗೊಂಡಂತೆ, ಸೆ (1937), ತೀನ್ ಸಂಗಿ (1940), ಮತ್ತು ಗಲ್ಪಸಲ್ಪ (1941) ದಂತಹ ಸಂಪುಟಗಳಲ್ಲಿ ಅನೇಕ ಕಥೆಗಳ ಮೂಲಕ ಅವರು ವಿಜ್ಞಾನ ಪ್ರಕ್ರಿಯೆಯನ್ನು ನಿರೂಪಿಸಿದರು.

ಕೊನೆಯ ನಾಲ್ಕು ವರ್ಷ ಟಾಗೋರ್ ದೀರ್ಘಕಾಲದ ನೋವಿನಿಂದ ಬಳಲಿದರು ಮತ್ತು ಎರಡು ಬಾರಿ ದೀರ್ಘ ಅಸ್ವಸ್ಥತೆಯಿಂದ ನರಳಿದರು. 1937ರ ಕೊನೆಯಲ್ಲಿ ಟಾಗೋರ್ ಸ್ಮರಣೆ ಕಳೆದುಕೊಂಡು ಕೋಮ ಸ್ಥಿತಿ ತಲಪಿ ಸಾವಿನಂಚನ್ನು ತಲಪಿದರು. ಅದರಿಂದ ಗುಣಮುಖರಾಗದ ಅವರನ್ನು 1940ರ ಕೊನೆಯವರೆಗೆ ಸತಾಯಿಸಿತು. ಮೃತ್ಯು ದವಡೆಯಲ್ಲಿ ಇದ್ದುಕೊಂಡೇ ಬರೆದ ಈ ಅವಧಿಯಲ್ಲಿನ ಅವರ ಸಾಹಿತ್ಯ ವಿಭಿನ್ನ, ಉತ್ಕೃಷ್ಟ ಮಟ್ಟದ್ದು ಎಂದು ಪರಿಗಣಿಸಲಾಗಿದೆ. ದೀರ್ಘ ಕಾಲೀನ ಅಸ್ವಸ್ಥತೆಯಿಂದ ನರಳಿದ ಟಾಗೋರ್ ತಾವು ಬೆಳೆದುಬಂದ ಜೊರಸಂಕೊ ಭವನದ ಮೇಲ್ಮಹಡಿಯಲ್ಲಿ 1941 ರ ಆಗಸ್ಟ್ 7ರಂದು (22 ಶ್ರಾವಣ 1348) ಕೊನೆಯುಸಿರೆಳೆದರು. ಬೆಂಗಾಲೀ ಭಾಷಿಕ ಜಗತ್ತು ದುಃಖ ಸಾಗರದಲ್ಲಿ ಮುಳುಗಿತು ॐ



ಬುದ್ಧ ಪೂರ್ಣಿಮಾ

ಡಾ. ಗುರುರಾಜ ಪೋಶೆಟ್ಟಿಹಳ್ಳಿ,
ಸಂಸ್ಕೃತಿ ಚಿಂತಕರು

ಬುದ್ದಂ ಶರಣಂ ಗಚ್ಛಾಮಿ

ನನ್ನ ಧರ್ಮವೊಂದೇ ಶ್ರೇಷ್ಠ ಎಂದು ನಾನು ಹೇಳುವುದಿಲ್ಲ ನೀನು ಹೋಗಿ ಇತರ ಧರ್ಮಗಳನ್ನು ಕೇಳಿ ಬಾ, ಆಮೇಲೆ ನನ್ನನ್ನು ಕೇಳು. ಯಾವ ಧರ್ಮ ಅತ್ಯುತ್ತಮ ಎಂದು ನಿನಗೆ ತೋರುತ್ತದೋ ಅದನ್ನು ಅನುಸರಿಸು.

–ಇದು ಬುದ್ಧನು ಮಾತು. ಬುದ್ಧನ ಚಿಂತನೆ ಎಂಥದ್ದು ಎಂಬ ಪ್ರಶ್ನೆಗೆ ಈ ಕೆಲವು ಸಾಲುಗಳೇ ಉತ್ತರ ಹೇಳುತ್ತವೆ. ಬುದ್ಧ ಚಿಂತನೆಯೇ ಹಾಗೆ. ಅದು ಯಾವುದನ್ನು ಹೇರುವುದಿಲ್ಲ. ಆಯ್ಕೆಯ ಸ್ವಾತಂತ್ರ್ಯವನ್ನು ನೀಡುವುದು. ಬುದ್ಧನ ಧರ್ಮವೇ ಸ್ವಾತಂತ್ರ್ಯ ಅನ್ನಬಹುದೇನೋ. ಬುದ್ಧ ಹೇಳುತ್ತಿದ್ದ ಮುಕ್ತಿ ಎಲ್ಲ ಬಗೆಯ ಮುಕ್ತಿ, ಎಲ್ಲದರಿಂದ ಮುಕ್ತಿ. ಸ್ವಯಂ ಅರಿವು ಹಂಚುವ ಮಹತ್ಕಾರ್ಯಕ್ಕೆಂದೇ ಬೋಧಿಸತ್ವವೊಂದು ಸಿದ್ಧಾರ್ಥನ ರೂಪದಲ್ಲಿ ಭೂಮಿಗೆ ಬಂದಿತ್ತು. ಅಂದು ವೈಶಾಖ ಹುಣ್ಣಿಮೆಯಾಗಿತ್ತು. ಸುಮಾರು ಎರಡು ಸಾವಿರ ವರ್ಷಗಳಾಚೆ ಒಂದು ನಟ್ಟಿರುಳಲ್ಲಿ ರಾಜಕುಮಾರ ಸಿದ್ಧಾರ್ಥ ಎಚ್ಚರಗೊಂಡ. ಅವನೇನೂ ನಿದ್ರಿಸುತ್ತಿರಲಿಲ್ಲ, ಆತನ ಎಚ್ಚರ ಆತ್ಮಜಾಗೃತಿಯಾಗಿತ್ತು. ಈ ಜಾಗೃತಿ ಒಂದು ಮಿಂಚಿನ ಘಳಿಗೆಯಲ್ಲಿ ಘಟಿಸಿತ್ತು. ಆದರೆ ಅದಕ್ಕೆ ಪೂರ್ವ ಸಿದ್ಧತೆ ಅನೇಕ ದಿನಗಳಿಂದ ನಡೆಯುತ್ತಲೇ ಇತ್ತು ಮತ್ತು ಸಿದ್ಧಾರ್ಥ ಆ ಎಚ್ಚರವನ್ನು ಅರಿಯಲು ಅಣಿಯಾಗುತ್ತಿದ್ದ.

ಇತಿಹಾಸ ಬುದ್ಧನ ಬಾಲ್ಯದ ಕತೆಗಳನ್ನು ದಾಖಲಿಸುತ್ತದೆ. ಅವುಗಳಲ್ಲಿ ಪುಟ್ಟ ಸಿದ್ಧಾರ್ಥನೂ ಅವನ ದಾಯಾದಿ ದೇವದತ್ತನೂ ಒಂದು ಹಕ್ಕಿಯನ್ನು ಕುರಿತು ನಡೆಸುವ ವಾಗ್ವದವೂ ಒಂದು. ದೇವದತ್ತ ಬೆಳ್ಳಕ್ಕಿಯೊಂದಕ್ಕೆ ಬಾಣ ಬಿಟ್ಟು ಉರುಳಿಸುತ್ತಾನೆ. ಅದು ಗಾಯಗೊಂಡು ಸಿದ್ಧಾರ್ಥನ ತೆಕ್ಕೆಯಲ್ಲಿ ಬೀಳುತ್ತದೆ. ಅದನ್ನು ಹೊಡೆದವನು ತಾನಾದ್ದರಿಂದ ಅದು ತನಗೆ ಸೇರಬೇಕೆಂದು ದೇವದತ್ತನೂ, ತನ್ನ ತೆಕ್ಕೆಯಲ್ಲಿ ಬಿದ್ದುದರಿಂದ ತನ್ನದೆಂದು ಸಿದ್ಧಾರ್ಥನೂ ವಾದ ಹೂಡುತ್ತಾರೆ. ವಿಷಯ ಶುದ್ಧೋಧನ ಮಹಾರಾಜನ ಬಳಿ ಹೋಗುತ್ತದೆ. ಆ ಹಕ್ಕಿಯನ್ನು ತೆಗೆದುಕೊಂಡು ಏನು ಮಾಡುತ್ತೀರಿ ಅನ್ನುವ ಮಹಾರಾಜನ ಬಳಿ ಹೋಗುತ್ತದೆ. ಆ ಹಕ್ಕಿಯನ್ನು ತೆಗೆದುಕೊಂಡು ಏನು ಮಾಡುತ್ತೀರಿ ಅನ್ನುವ ಮಹಾರಾಜನ ಪ್ರಶ್ನೆಗೆ ದೇವದತ್ತ 'ನನಗೆ ಬೇಕಾದ್ದು ಮಾಡಿಕೊಳ್ತೀನಿ, ಅದು ನನ್ನ ಹಕ್ಕಿ' ಅನ್ನುತ್ತಾನೆ. ಸಿದ್ಧಾರ್ಥನ ಈ ಉತ್ತರ ಗೌತಮ ಬುದ್ಧನಾಗಿ ಟಿಸಿಲೊಡೆದ ಮೊಳಕೆ ಅನ್ನಬಹುದು. ಸಿದ್ಧಾರ್ಥ ಹಕ್ಕಿಗೆ ಆರೈಕೆ ಮಾಡಿ ಜೀವ ಹಾನಿಯನ್ನು ತಪ್ಪಿಸುವಲ್ಲಿ ಮಾತ್ರ ಉತ್ಸುಕನೇ ಹೊರತು ಅದನ್ನು ಸಾಕಿಕೊಂಡು ಅದರ ಸ್ವಾತಂತ್ರ್ಯ ಹರಣ ಮಾಡಲಿಕ್ಕಲ್ಲ. ಆ ಹಕ್ಕಿಯ ಮೇಲೆ ಒಡೆತನ ಸಾಧಿಸುವುದು ಅವನ ಉದ್ದೇಶವಾಗಿರಲೇ ಇಲ್ಲ. ಅಷ್ಟಾಗಿಯೂ ಆ ಹಕ್ಕಿ ತನ್ನ ಜೊತೆ ಇರುವುದಾದರೆ ಇರಲಿ, ಹಾರಿ ಹೋದರೆ ಬೇಸರವಂತೂ ಇಲ್ಲ!

ಪುಟ್ಟ ಸಿದ್ಧಾರ್ಥ ರಾಜಕುಮಾರನಾಗಿ ಬೆಳೆದುನಿಂತಾಗ ಎಲ್ಲ ವಿಧೇಯ ಮಕ್ಕಳಂತೆ ತಾಯ್ತಂದೆಯರ ಬಯಕೆಯನ್ನೊಪ್ಪಿ ಮದುವೆಯಾಗುತ್ತಾನೆ. ಯಶೋಧರೆಯ ಜೊತೆ ಅವನದ್ದು ಸಮರೂಪದ ದಾಂಪತ್ಯ. ರಾಹುಲನೆಂಬ ಮಗನೂ ಹುಟ್ಟುತ್ತಾನೆ. ಬದುಕು ಯಾವ ಏರಿಳಿತಗಳೂ ಇಲ್ಲದೆ ಸಾವಧಾನ ಗತಿಯಲ್ಲಿ ಸಾಗಿರುವಾಗ ಸಿದ್ಧಾರ್ಥನಲ್ಲಿ ಬದುಕಿನ ಸಾರ್ಥಕತೆಯ ಬಗ್ಗೆ ಜಿಜ್ಞಾಸೆ ಮೂಡತೊಡಗುತ್ತದೆ. ಯಾವಾಗ ವ್ಯಕ್ತಿಯೊಬ್ಬ ಉತ್ಕಟ ಪ್ರೇಮವನ್ನು ಅನುಭವಿಸತೊಡಗುತ್ತಾನೋ ಆಗ ಅದರ ಉಳಿಗಾಲದ ಕುರಿತು ಆತಂಕಗೊಳ್ಳುವುದು ಸಹಜ. ಆ ಪ್ರೇಮವನ್ನು ಉಳಿಸಿಕೊಳ್ಳಲೇಬೇಕೆಂದು ಹಟಕ್ಕೆ ಬೀಳುವುದೂ ಸಹಜ. ತನಗೆ ಮಗುವಾದರೂ ಇನ್ನೂ ತುತ್ತಿಡುವ ತಾಯಿ, ಅಂಗೈ ಮೇಲೆ ನಡೆಸುವಂಥ ತಂದೆ, ಸದಾ ಕಣ್ರೆಪ್ಪೆಯಲ್ಲೇ ಇರಿಸಿಕೊಳ್ಳುವ ಹೆಂಡತಿ, ಜೀವದ ತುಣುಕೇ ಆದ ಮಗ– ಈ ಎಲ್ಲರೂ ಒಟ್ಟು ಸೇರಿ ತಾನು ರೂಪಗೊಂಡಿದ್ದೇನೆ ಅನ್ನುವಷ್ಟು ಅನುರಾಗ ಸಿದ್ಧಾರ್ಥನದು. ಹಾಗಾದರೆ, ಈ ಇಷ್ಟರಲ್ಲಿ ಯಾವುದಾದರೊಂದಕ್ಕೆ ಊನ ಬಂದರೂ ತಾನು ಅಪರಿಪೂರ್ಣನಾಗಿ ಬಿಡುವೆನೇ? ಸಿದ್ಧಾರ್ಥ ಅರ್ಥ ಕಳೆದುಕೊಳ್ಳುವನೆ? ಹಾಗಾದರೆ ವ್ಯಕ್ತಿಯೊಬ್ಬ ಯಾವೆಲ್ಲದರಿಂದ ರೂಪುಗೊಳ್ಳುತ್ತಾನೆ? ಯಾವುದರಿಂದ ಪರಿಪೂರ್ಣನಾಗುತ್ತಾನೆ? ಎಂದಿಗೂ ಆತನನ್ನು ಬಿಟ್ಟು ಹೋಗದ, ಆತನ ಪೂರ್ಣತೆಗೆ ಭಂಗ ತರದೆ ಇರುವಂಥ ವಸ್ತುವೇನಾದರೂ ಇದೆಯೇ? ಅದು ಏನು? ಅದನ್ನು ಹೊಂದುವುದು ಹೇಗೆ?

ಈ ಪ್ರಶ್ನೆಗಳು ಸಿದ್ಧಾರ್ಥನನ್ನು ಮುತ್ತಿಕೊಂಡಿದ್ದು ನಗರ ಸಂಚಾರದ ಸಮಯದಲ್ಲಿ.

ಸಿದ್ಧಾರ್ಥನ ಈ ಸಂಚಾರ ಎರಡು ಸಂಗತಿಗಳನ್ನು ಸೂಚ್ಯವಾಗಿ ಹೇಳುತ್ತದೆ. ಮೊದಲನೆಯದಾಗಿ, ಗೋಡೆಗಳ ಮುಚ್ಚಟೆಯಾಚೆ ನಿಜದ ಬದುಕು ತೆರೆದುಕೊಳ್ಳುವುದನ್ನು; ಎರಡನೆಯದಾಗಿ, ಚಲನೆಯಲ್ಲಿ ಮಾತ್ರ ನಿರಂತರವೂ ಆದ ಶಾಶ್ವತ ಸತ್ಯದ ಭೇಟಿ ಸಾಧ್ಯ ಅನ್ನುವುದನ್ನು, ಗೋಡೆಗಳ ಸ್ವಯಂವಿಧಿತ ಬಂಧನದಲ್ಲಿ ಬೆಳೆದ ಸಿದ್ಧಾರ್ಥ ಲೋಕಾರೂಢಿಗೆ ಪರಿಚಿತನಲ್ಲ. ಅವನು ಮುಕ್ತವಾಗಿ ಸಂಚರಿಸಿದ್ದೂ ಅವರೆಗೆ ಇಲ್ಲ. ಅವನು ಬಯಲಿಗೆ ಬಂದೊಡನೆ, ಚಲನೆಗೆ ಹೊಂದಿಕೊಂಡ ಒಡನೆ ಬದುಕಿನ ನಿತ್ಯ ಸತ್ಯಗಳು ಗೋಚರವಾಗುತ್ತವೆ. ಹಾಗಂತ ಸಿದ್ಧಾರ್ಥ ನೋಡಿದ ರೋಗ, ಮುಪ್ಪು, ಸಾವುಗಳೆಲ್ಲವೂ ಅವನಿಗೆ ಮಾತ್ರ ಕಂಡದ್ದೇ? ಅದೆಷ್ಟು ಮಂದಿ ನಿತ್ಯವೂ ಅವಕ್ಕೆ ಸಾಕ್ಷಿಯಾಗಿಲ್ಲ? ನಿಜ. ಎಲ್ಲರೂ ಜೀವನದ ನಾಲ್ಕು ಸತ್ಯಗಳನ್ನು ನೋಡುತ್ತಿದ್ದರು, ಸಿದ್ಧಾರ್ಥ ಕಾಣತೊಡಗಿದ. ನೋಟಕ್ಕೂ ಕಾಣ್ಕೆಗೂ ವ್ಯತ್ಯಾಸವಿದೆ. ನೋಟ, ಹೊರಗಣ್ಣಿಗೆ ದಕ್ಕಿ ಉಳಿಯುವ ಪ್ರಕ್ರಿಯೆ. ಸಿದ್ಧಾರ್ಥ ಜೀವನದ ನಾಲ್ಕು ಸತ್ಯಗಳನ್ನು ಕಂಡ. ಬಯಲಲ್ಲಿ ದಕ್ಕಿದ್ದು, ಗೋಡೆಗಳ ಒಳಗೆ ಅವನನ್ನು ಇರಗೊಡದಾಯಿತು. ತನ್ನ ಹೆಂಡತಿಯನ್ನು ನೋಡಿದ. ತಾಯಿ, ತಂದೆ, ಮಗು, ಎಲ್ಲರಲ್ಲೂ ನಾಲ್ಕು ಸತ್ಯಗಳ ಪರಿಣಾಮವನ್ನು ಕಂಡ. ಚಡಪಡಿಸತೊಡಗಿದ.

ಸಿದ್ಧಾರ್ಥ ಅರಮನೆಯಿಂದ ಯಾರಿಗೂ ತಿಳಿಸದಂತೆ ಹೊರಟುಬಂದುದರ ಕಾರಣ ತನ್ನ ಕಾಣ್ಕೆಯ ಮುಂದೆ ಏನಿದೆ ಅನ್ನುವುದನ್ನು ಅರಿತುಕೊಳ್ಳುವುದೇ ಆಗಿತ್ತು. ಜೀವನದ ನಾಲ್ಕು ಸತ್ಯಗಳೇ ಅಂತಿಮವಲ್ಲ. ಅವು ಯಾವುದೇ ಜೀವಿಯ ಆತ್ಯಂತಿಕ ಗತಿಯನ್ನು ಹೇಳುವುದಿಲ್ಲ. ಈ ಕಾಣ್ಕೆಯಾಚೆಗೂ ಮತ್ತೇನೂ ಇದೆ. ಅವು ಹುಟ್ಟಿಸುವ ಆತಂಕಗಳಿಗೆ ಪರಿಹಾರವೊಂದಿದೆ. ಆ ಆತಂಕಗಳೇ ಹುಟ್ಟದಂತೆ ಸಂಭಾಳಿಸಬಲ್ಲ ತಿಳಿವೊಂದಿದೆ ಅನ್ನುವುದು ಸಿದ್ಧಾರ್ಥನಿಗೆ ಮನವರಿಕೆಯಾಗಿತ್ತು. ಮನೆ ಬಿಟ್ಟು ಹೊರಟವನೇ ತನ್ನ ಸಾರಥಿಯನ್ನೂ ಕುದುರೆ ಕಂಥಕನನ್ನೂ ಮರಳಿ ಕಳುಹಿಸಿದ. ದಿನಗಟ್ಟಲೆ, ವಾರಗಟ್ಟಲೆ ಅನ್ನಾಹಾರಗಳಿಲ್ಲದೆ ತಪೋನಿರತನಾದ. ಅವನ ಪ್ರಯತ್ನದ ಪ್ರಮಾಣವರಿಯುವ ಪರೀಕ್ಷೆಗಳೂ ಬಂದವು. ಎಲ್ಲವನ್ನೂ ಗೆದ್ದ ಗೌತಮ ಮಹಾಬೋಧಿಯ ಕೆಳಗೆ ಜ್ಞಾನವನ್ನು ಪಡೆದ. ಯಾವ ಜ್ಞಾನವನ್ನು ಪಡೆಯುವುದರಿಂದ ಆತ ಎಲ್ಲ ದುಃಖ ಕ್ಲೇಶಗಳನ್ನು ಮೀರಿ ಕೇವಲ ಆನಂದ ಮಾತ್ರದಲ್ಲಿ ಸ್ಥಾಯಿಯಾಗಿರಬಲ್ಲನೋ ಆ ಜ್ಞಾನವನ್ನು ಪಡೆದ. ಅದು ಕೂಡ ವೈಶಾಖ ಹುಣ್ಣಿಮೆಯ ದಿನವಾಗಿತ್ತು. ಸಿದ್ಧಾರ್ಥ ಬುದ್ಧನಾದ. ಬೋಧೆ ಪಡೆದವನು

ಬುದ್ಧ. ಬುದ್ಧರು ಎಂದಿಗೂ ಬದ್ಧರಲ್ಲ. ಅವರು ಯಾವ ಸುಖದಲ್ಲೂ ಸವಲತ್ತಿನಲ್ಲೂ ಬಂಧಿಯಾಗಿರುವುದಿಲ್ಲ. ಅವರು ಎಲ್ಲದರಿಂದಲೂ – ಜನನಮರಣ ಚಕ್ರದಿಂದಲೂ ಮುಕ್ತರು. ಅವರು ರಾಗದ್ವೇಷಗಳಿಂದಲೂ ಮುಕ್ತರು. ಅಂತೆಯೇ ಬುದ್ಧ ತಾನು ಪಡೆದ ತಿಳಿವಿನ ಆನಂದಕ್ಕೆ ಬದ್ಧನಾಗಿ ಉಳಿದುಬಿಡಲಿಲ್ಲ. ಆತ ಅದನ್ನೂ ಮೀರಿ ಚಲಿಸತೊಡಗಿದ. ಪಡೆದದ್ದನ್ನು ಹಂಚಿದಾಗಲಷ್ಟೇ ಅದು ನಮ್ಮೊಡನೆ ಉಳಿದುಕೊಳ್ಳುತ್ತದೆ. ಹಾಗೆಯೇ ಇರಿಸಿಕೊಂಡರೆ ಅದಕ್ಕೆ ಮಹತ್ವವೇ ಬರುವುದಲ್ಲವಾದ್ದರಿಂದ ವ್ಯರ್ಥವಾಗಿ ಹೋಗುತ್ತದೆ.

ಬುದ್ಧ ಯಾವುದನ್ನೂ ಒಂದು ಗೊತ್ತುವಳಿ ಇಟ್ಟುಕೊಂಡು ಮಾಡಲಿಲ್ಲ. 'ಸುಧಾರಣೆ' ಮಾಡುತ್ತೇನೆಂದು ಆತ ಹೇಳಿಕೊಳ್ಳಲೂ ಇಲ್ಲ. ದಾರಿಯಲ್ಲಿ ನಡೆದು ಹೋಗುವಾಗ ಬೆಸ್ತನೊಬ್ಬ ಬಲೆ ಎಸೆಯುತ್ತಿದ್ದುದನ್ನು ಕಂಡ, 'ನನ್ನ ಜೊತೆ ಬಾ' ಅಂದ. ಇದು ಬಹಳ ಸರಳವಾಗಿದೆ. ಬುದ್ಧ ಮತ್ತೇನೂ ಹೇಳಲಿಲ್ಲ. ಆಗಿನ ಕಾಲಮಾನದಲ್ಲಿ ಬೆಸ್ತರು ತಳವರ್ಗದವರಾಗಿ ಪರಿಗಣಿಸಲ್ಪಟ್ಟಿದ್ದರು. ಅವರನ್ನು ಸಮಾಜ ಮುಖ್ಯವಾಹಿನಿಯಲ್ಲಿ ಸೇರಿಸಿಕೊಳ್ಳುತ್ತಿರಲಿಲ್ಲ. ವಿದ್ಯಾಬುದ್ಧಿಗಳಾಗಲೀ ಧರ್ಮಾಧ್ಯಾತ್ಮಗಳಾಗಲೀ ಅವರಿಗೆ ಸಲ್ಲುವ ಸಂಗತಿಗಳೇ ಆಗಿರಲಿಲ್ಲ. ಬುದ್ಧ ವಿಶೇಷವಾಗಿ ಏನನ್ನೂ ಮಾಡಲಿಲ್ಲ. ಜೊತೆಯಲ್ಲಿ ಬಾ ಎಂದ. ಬಂದವನ ಹೆಗಲ ಮೇಲೆ ಕೈಹಾಕಿ ತನ್ನವನನ್ನಾಗಿಸಿಕೊಂಡ. ನಾಲ್ಕು ಸತ್ಯಗಳಲ್ಲಿ ಯಾವುದೊಂದರ ಅನುಭವದ ಹೊಡೆತಕ್ಕೋ ನೋಡಕ್ಕೋ ಸಿಕ್ಕು ಜರ್ಝರಿತರಾದವರನ್ನು ಕಂಡು ಸಹಾನುಭೂತಿ ತೋರಿಸಿದ. ತಾನು ಅದರ ಕಾಣ್ಕೆಯಾಚೆಯ ಬೆಳಕನ್ನು ಹೊಂದಿರುವನೆಂದು ಹೇಳಿ, ಅವರೂ ಅದನ್ನು ಪಡೆಯುವ ಭರವಸೆಯಿತ್ತ. ಬೆಳಕಿನ ಬಯಕೆ ಯಾರಿಗೆ ಇರುವುದಿಲ್ಲ ಹೇಳಿ!? ಸಾಗರದಂತೆ ಜನ ನೆರೆದರು. 'ಸಂಘ'ವಾಯ್ತು. ತಮ್ಮನ್ನು ಬುದ್ಧಾನುಯಾಯಿಗಳೆಂದು ಗುರುತಿಸಿಕೊಳ್ಳುವ ಕಾವಿ ಉಡುಗೆಗಳು ಅರಳಿಕೊಂಡವು. ಬಿಕ್ಕುಗಳು ನಡೆದಾಡುವ ಸೂರ್ಯರಂತೆ ಕಂಗೊಳಿಸತೊಡಗಿದರು. ಬುದ್ಧ ತನ್ನ ಬೋಧನೆಗಳ ಮೂಲಕ ಬೆಳಕನ್ನು ಬಿತ್ತಿದ. ಈ ಬೆಳಕು ಹಬ್ಬಿ ಶತಶತಮಾನಗಳನ್ನು ದಾಟುತ್ತ ಪೂರ್ವ–ಪಶ್ಚಿಮ–ಉತ್ತರ–ದಕ್ಷಿಣಗಳನ್ನೆಲ್ಲ ತಬ್ಬಿಕೊಂಡವು.

ಬಾಕ್ಸ್

ಇಷ್ಟಕ್ಕೂ ಬುದ್ಧ ಹೇಳಿದ್ದು ಇಷ್ಟೇ; 'ಹಿಂಸೆ ಮಾಡಬೇಡಿ, ಆಸೆ ಪಡಬೇಡಿ, ಶಾಂತಿಯಿಂದಿರಿ. ಸಾಕ್ಷಿಯಾಗಿರಿ'. ಎಷ್ಟು ಸರಳ ಮತ್ತು ಸುಲಭ! ಬುದ್ಧ ಯಾಗ ಯಜ್ಞಗಳನ್ನಾಗಲೀ ಯಮನಿಯಮಗಳನ್ನಾಗಲೀ ಪೂಜೆಪುನಸ್ಕಾರಗಳನ್ನಾಗಲೀ ಮಾಡಿರೆಂದು ತಾಕೀತು ಮಾಡಲಿಲ್ಲ. ಅವೆಲ್ಲವನ್ನೂ ನಿಲ್ಲಿಸಿ, ನಿಮ್ಮನ್ನು ನೀವು ನೋಡಿಕೊಳ್ಳಿ, ಸೃಷ್ಟಿಯಲ್ಲಿ ನೀವೇನೆಂದು ಅರಿತುಕೊಳ್ಳಿ ಸಾಕು ಎಂದ. ಅವನ ಪ್ರೇಮಕಾರುಣ್ಯ ಝರಿಯಲ್ಲಿ ಆಧ್ಯಾತ್ಮ ನಿರಾಕರಿಸಲ್ಪಟ್ಟಿದ್ದ ದಲಿತರೂ ಹೆಣ್ಣುಗಳೂ ಸರ್ವಸಮಾನವಾಗಿ ಮಿಂದರು. ಬುದ್ಧನ ವಿಶಾಲ ಎದೆಯಾಂಗಳದಲ್ಲಿ ತಾವಿಲ್ಲದೆ ಇದ್ದುದು ಒಂದೇ ಸಂಗತಿಗೆ. ಹೌದು, ಸಕಲ ನಕಾರಾತ್ಮಕ ಚಿಂತನೆಗೂ ಮೂಲಬೀಜವಾದ 'ಭೇದ'ಕ್ಕೆ ಅಲ್ಲಿ ಜಾಗವಿರಲಿಲ್ಲ. ಆತ ಕಣ್ಮುಚ್ಚಿದ ದಿನವೂ ವೈಶಾಖ ಹುಣ್ಣಿಮೆಯೇ ಆತತ್ತು. ॐ

ಸಮೃದ್ಧಿ ಸುಜ್ಞಾನ

"ಎಲ್ಲಿ ಹುಟ್ಟಬೇಕು ಅನ್ನೋದು ನಮ್ಮ ಕೈಯಲ್ಲಿ ಇರುವುದಿಲ್ಲ
ಆದರೆ ಎಲ್ಲಿಗೆ ಮುಟ್ಟಬೇಕು ಅನ್ನೋದು ಮಾತ್ರ ನಮ್ಮ ಕೈಯಲ್ಲಿ ಇರುತ್ತೆ,
ಬದುಕಿನ ಕಷ್ಟ ಕಾಟಣ್ಯತೆಗಳನ್ನು ಪ್ರತಿಭಟಿಸುವುದಕ್ಕಿಂತ ಅವುಗಳ
ವಿರುದ್ಧ ಹೋರಾಡಿದರೆ ಶ್ರೇಯಸ್ಸು ಎನ್ನುವುದು ಕಟ್ಟಿಟ್ಟ ಬುತ್ತಿ."

ಗಿರೀಶ್ ಕಾರ್ನಾಡ್

ಗಿರೀಶ್ ಕಾರ್ನಾಡ್ (19 ಮೇ 1938 – 10 ಜೂನ್ 2019) ಭಾರತದ ನಾಟಕಕಾರರು, ಲೇಖಕರು, ರಂಗಕರ್ಮಿ, ಸಿನಿಮಾನಟ, ನಿರ್ದೇಶಕ, ಚಿಂತಕ ಹಾಗೂ ಹೋರಾಟಗಾರರು. ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಅವರು ತಮ್ಮ ಸಾಹಿತ್ಯ ಮತ್ತು ಇತರ ಕೃತಿಗಳನ್ನು ರಚಿಸಿದ್ದಾರೆ.

ಜೀವನ

ಗಿರೀಶ ಕಾರ್ನಾಡ್‌ರು 1938 ಮೇ 19ರಂದು ಮಹಾರಾಷ್ಟ್ರದ ಮಾಥೇರಾನದಲ್ಲಿ ಜನಿಸಿದರು. ತಂದೆ ಡಾ॥ ರಘುನಾಥ್ ಕಾರ್ನಾಡ್, ತಾಯಿ ಕೃಷ್ಣಾ ಬಾಯಿ. ಪ್ರಗತಿಶೀಲ ಮನೋಭಾವದ ಡಾ॥ ರಘುನಾಥ ಕಾರ್ನಾಡರು ಮದುವೆಯಾದ ಹೊಸತರಲ್ಲೇ ಪತ್ನಿಯನ್ನು ಕಳೆದುಕೊಂಡರು.

ಬಾಲ್ಯದಲ್ಲೇ ಮದುವೆಯಾಗಿ ಪತಿಯನ್ನು ಕಳೆದುಕೊಂಡಿದ್ದ 5 ವರ್ಷದ ಮಗ ವಸಂತನ ತಾಯಿ ಕೃಷ್ಣಾಬಾಯಿಯನ್ನು, ಸಮಾಜದ ವಿರೋಧದ ನಡುವೆಯೂ ದಿಟ್ಟತನದಿಂದ ಕೈ ಹಿಡಿದರು. ಸಮಾಜ ಏನೆನ್ನುತ್ತದೆ ಅನ್ನುವುದಕ್ಕಿಂತ ಆದರ್ಶ ಹಾಗೂ ಪ್ರಗತಿಪರತೆ ರಘುನಾಥ್ ಕಾರ್ನಾಡರಲ್ಲಿ ಕಂಡು ಬರುತ್ತದೆ.

ಮುಂದೆ ಕಾರ್ನಾಡರಿಗೆ ಇಂಥ ಪ್ರಗತಿಪರ ವಾತಾವರಣವೇ ಅವರ ಬೆಳವಣಿಗೆಯಲ್ಲಿ ಸಹಾಯಕವಾಯಿತು. ಗಿರೀಶರ ಪ್ರಾಥಮಿಕ ಶಿಕ್ಷಣ ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ, ಪ್ರೌಢಶಿಕ್ಷಣ ಧಾರವಾಡದ ಬಾಸೆಲ್ ಮಿಷನ್ ಹೈಸ್ಕೂಲಿನಲ್ಲಿ ಹಾಗೂ ಪದವಿ ಶಿಕ್ಷಣ ಕರ್ನಾಟಕ ಕಾಲೇಜಿನಲ್ಲಿ ಆಯಿತು.

ಆ ಬಳಿಕ ಹೊರ್ಡ್ಸ್ ಸ್ಕಾಲರ್ಶಿಪ್ ಪಡೆದುಕೊಂಡು ಆಕ್ಸ್‌ಫರ್ಡ್‌ನಲ್ಲಿ ಹೆಚ್ಚಿನ ವ್ಯಾಸಂಗಕ್ಕೆ ತೆರಳಿದರು. ಗಿರೀಶ ಕಾರ್ನಾಡರು ಆಕ್ಸ್‌ಫರ್ಡ್ ಡಿಬೇಟ ಕ್ಲಬ್ ಗೆ ಅಧ್ಯಕ್ಷರಾಗಿ ಆಯ್ಕೆಯಾದ ಪ್ರಥಮ ಏಷಿಯನ್ ಆಗಿದ್ದಾರೆ. ತಮ್ಮ ಓದು, ಚರ್ಚೆಯನ್ನು ದೇಶ ವಿದೇಶದಲ್ಲೂ ಹರಡಿ ವಿದ್ವಾಂಸರ ಸಖ್ಯದಲ್ಲಿ, ಕಲಾಸೇವಕರ ಸಹವಾಸದಲ್ಲಿ ಗುರ್ತಿಸಿಕೊಂಡ ಕಾರ್ನಾಡ್ ಬುದ್ಧಿಜೀವಿ ಎನಿಸಿಕೊಂಡರು. ಬಹುಭಾಷಾ ಪಂಡಿತರೆಂಬ ಹಿರಿಮೆಗೆ ಪಾತ್ರರಾಗಿ, ಷಿಕಾಗೋ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ನಾಡ್ ಸೇವೆ ಸಲ್ಲಿಸಿದರು.

ವಿದೇಶದಲ್ಲಿದ್ದಾಗಲೇ ಕನ್ನಡ ನಾಟಕಗಳನ್ನು ಬರೆದು ಇಲ್ಲಿಗೆ ಬಂದು ಹೊಸ ನಾಟಕಗಳ ಓದು, ಪ್ರದರ್ಶನಕ್ಕೆ ದಾರಿ ಮಾಡಿಕೊಂಡರು. ಇವರು ಕನ್ನಡವಲ್ಲದೆ ಹಿಂದಿ, ಪಂಜಾಬಿ, ಮರಾಠಿ ಹಾಗೂ ಭಾರತೀಯ ಹಲವು ಭಾಷೆಗಳಿಗೆ ತಮ್ಮ ನಾಟಕಗಳು ಅನುವಾದಗೊಂಡು, ಪ್ರದರ್ಶನಗೊಂಡವು.

ಆಕ್ಸ್‌ಫರ್ಡ್‌ನಿಂದ ಬಂದ ನಂತರ ಮದ್ರಾಸ್‌ನಲ್ಲಿ ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ ನಲ್ಲಿ ಸಂಪಾದಕರಾಗಿ ನೌಕರಿಯಲ್ಲಿದ್ದು, ಅದನ್ನು ತೊರೆದು ಧಾರವಾಡಕ್ಕೆ ವಾಪಾಸಾಗಿ ನಾಟಕ ಕ್ಷೇತ್ರದಲ್ಲಿ ಕೃಷಿ ನಡೆಸಿದರು.

ನಾಟಕ ರಚನೆ

ಇಂಗ್ಲೆಂಡಿಗೆ ತೆರಳುವ ಮೊದಲೆ ಗಿರೀಶ ಕಾರ್ನಾಡರ ಮೊದಲ ಸಾಹಿತ್ಯ ಕೃತಿ ಯಯಾತಿ ನಾಟಕ ಧಾರವಾಡದ ಮನೋಹರ ಗ್ರಂಥಮಾಲೆಯಲ್ಲಿ ಪ್ರಕಟವಾಯಿತು. ಇಂಗ್ಲೆಂಡಿನಿಂದ ಮರಳಿದ ಬಳಿಕ ತುಘಲಕ್ ಹಾಗೂ ಹಯವದನ ಪ್ರಕಟವಾದವು. ಈ ನಡುವೆ ಪುಣೆ ಫಿಲ್ಮ್ ಇನ್ಸ್ಟಿಟ್ಯೂಟ್‌ನ ನಿರ್ದೇಶಕರಾಗಿದ್ದು, ಮತ್ತೆ ಅದನ್ನು ಬಿಟ್ಟು ಮುಂಬಯಿಗೆ ಬಂದ ಕಾರ್ನಾಡರು ಕೆಲವು ಚಲನಚಿತ್ರಗಳಲ್ಲಿ ನಟಿಸಿದರು. ಆ ರಂಗವನ್ನೂ ತ್ಯಜಿಸಿ ಮತ್ತೆ ಬೆಂಗಳೂರಿಗೆ ಬಂದರು. ಅಲ್ಲಿಂದ ರಚಿತವಾದ ಅವರ ನಾಟಕಗಳು–ಅಂಜು ಮಲ್ಲಿಗೆ, ನಾಗಮಂಡಲ, ತಲೆದಂಡ ಹಾಗೂ ಅಗ್ನಿ ಮತ್ತು ಮಳೆ.

ನಾಟಕಗಳು

ಮಾ ನಿಷಾಧ – ಏಕಾಂಕ ನಾಟಕ, ಯಯಾತಿ – 1961, ತುಘಲಕ್ – 1964, ಹಯವದನ – 1972 (ನಾಟ್ಯರಂಗ ಪ್ರಶಸ್ತಿ), ಅಂಜುಮಲ್ಲಿಗೆ – 1977, ಹಿಟ್ಟಿನ ಹುಂಜ ಅಥವಾ ಬಲಿ – 1980, ನಾಗಮಂಡಲ – 1990, ತಲೆದಂಡ – 1993, ಅಗ್ನಿ ಮತ್ತು ಮಳೆ – 1995, ಟಿಪ್ಪುವಿನ ಕನಸುಗಳು – 1997, ಒಡಕಲು ಬಿಂಬ – 2005, ಮದುವೆ ಅಲ್ಬಮ್, ಫ್ಲಾವರ್ಸ – 2012, ಬೆಂದ ಕಾಳು ಆನ್ ಟೋಸ್ಟ– 2012, ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್‌ಗಾಗಿ ಭಾರತದ ಸ್ವಾತಂತ್ರ್ಯೋತ್ಸವದ 50 ವರ್ಷದ ನೆನಪಿನ ಕಾರ್ಯಕ್ರಮಕ್ಕಾಗಿ ಬರೆದುಕೊಟ್ಟ ನಾಟಕ–ಟಿಪ್ಪುವಿನ ಕನಸುಗಳು.

ಚಿತ್ರರಂಗ

'ಸಂಸ್ಕಾರ' (1970) ಚಲನಚಿತ್ರವು ಕನ್ನಡದ ಪ್ರಥಮ ಕಲಾತ್ಮಕ ಚಲನಚಿತ್ರ. ಯು.ಆರ್.ಅನಂತಮೂರ್ತಿಯವರ ಕಾದಂಬರಿಯನ್ನು ಆಧರಿಸಿದ ಈ ಚಲನಚಿತ್ರದಲ್ಲಿ ಗಿರೀಶ ಕಾರ್ನಾಡರದು ಪ್ರಮುಖ ಪಾತ್ರ–ಪ್ರಾಣೇಶಾಚಾರ್ಯರದು. ಪಿ. ಲಂಕೇಶ ಅವರದು ವಿರುದ್ಧ ವ್ಯಕ್ತಿತ್ವದ ಪಾತ್ರ–ನಾರಣಪ್ಪನದು. ಈ ಚಿತ್ರದ ನಿರ್ದೇಶಕರು ಪಟ್ಟಾಭಿರಾಮರೆಡ್ಡಿ ಅವರು ಮತ್ತು ಚಿತ್ರಕಥೆ ಗಿರೀಶ ಕಾರ್ನಾಡರದ್ದು. ಇದು ಕನ್ನಡಕ್ಕೆ ಪ್ರಥಮ ಸ್ವರ್ಣಕಮಲವನ್ನು ತಂದು ಕೊಟ್ಟ ಚಿತ್ರ.

ಆ ನಂತರ ಎಸ್.ಎಲ್. ಭೈರಪ್ಪನವರ ವಂಶವೃಕ್ಷ ಕಾದಂಬರಿಯನ್ನು ಆಧರಿಸಿ, ಬಿ. ವಿ. ಕಾರಂತರ ಜೊತೆಗೂಡಿ ವಂಶವೃಕ್ಷ (1972) ಚಿತ್ರವನ್ನು ನಿರ್ದೇಶನ ಮಾಡಿದರು. ಇದು ಹಲವಾರು ರಾಷ್ಟ್ರೀಯ, ಅಂತರರಾಷ್ಟ್ರೀಯ ಪುರಸ್ಕಾರ ಪಡೆಯಿತು. ನಿರ್ಮಾಣ: ಜಿ.ವಿ.ಅಯ್ಯರ್.

ಮುಂದೆ 'ತಬ್ಬಲಿಯು ನೀನಾದೆ ಮಗನೆ'(1977), 'ಕಾಡು'(1974), 'ಒಂದಾನೊಂದು ಕಾಲದಲ್ಲಿ'(1978) ಚಿತ್ರಗಳನ್ನು ನಿರ್ದೇಶಿಸಿದರು. 'ಕಾಡು' ಹಲವಾರು ಪ್ರಶಸ್ತಿ ಪುರಸ್ಕಾರ ಪಡೆಯಿತು. ನಂತರ ಉತ್ಸವ್, ಗೋಧೂಳಿ ಎಂಬ ಹಿಂದಿ ಚಿತ್ರಗಳನ್ನು ನಿರ್ದೇಶಿಸಿದರು.

ಬಳಿಕ ರಾಷ್ಟ್ರಕವಿ ಕುವೆಂಪು ಅವರ ಕಾನೂರು ಸುಬ್ಬಮ್ಮ ಹೆಗ್ಗಡಿತಿ ಕಾದಂಬರಿಯನ್ನು ಆಧರಿಸಿ "ಕಾನೂರು ಹೆಗ್ಗಡಿತಿ" (1999) ಚಿತ್ರವನ್ನು ನಿರ್ದೇಶಿಸಿದ್ದಾರೆ. ಈ ಚಿತ್ರವು ರಾಜ್ಯ ಪ್ರಶಸ್ತಿ, ರಾಷ್ಟ್ರೀಯ ಪುರಸ್ಕಾರ ಪಡೆದು, ಪನೋರಮಕ್ಕೂ ಆಯ್ಕೆಯಾಯಿತು. ಇದಲ್ಲದೆ ಕನಕ ಪುರಂದರ, ದ.ರಾ.ಬೇಂದ್ರೆ ಹಾಗು ಸೂಫಿ ಪಂಥ ಸಾಕ್ಷ್ಯಚಿತ್ರಗಳನ್ನು ನಿರ್ದೇಶಿಸಿದರು. ಪರಿಸರ ವಿನಾಶ ಕುರಿತು ಚೆಲುವಿ ಎಂಬ ಕಿರುಚಿತ್ರವನ್ನು ನಿರ್ದೇಶಿಸಿದರು. 2007ರಲ್ಲಿ ತೆರೆಕಂಡ ಆ ದಿನಗಳು ಚಿತ್ರಕ್ಕೆ ಅಗ್ನಿ ಶ್ರೀಧರ ಅವರ ಜೊತೆಗೂಡಿ ಚಿತ್ರಕಥೆಯನ್ನು ಬರೆದಿದ್ದಾರೆ.

ಕಾರ್ನಾಡ್ ಅವರಿಗೆ ಪ್ರಶಸ್ತಿ ಬಂದಾಗ ಸೌಜನ್ಯದಿಂದಲೇ ಮರಾಠಿಯ ವಿಜಯತೆಂಡೂಲ್ಕರ್ ಅವರಂಥವರಿಗೆ ಈ ಪ್ರಶಸ್ತಿ ಬರಬೇಕಿತ್ತು ಎಂದು ಹೇಳಿ ದೊಡ್ಡತನ ಮೆರೆದಿದ್ದರು. ಇಬ್ಬರು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಕಾದಂಬರಿಗಳನ್ನು ಕುವೆಂಪುರ ಕಾನೂರು ಸುಬ್ಬಮ್ಮ ಹೆಗ್ಗಡತಿ ಮತ್ತು ಯು ಆರ್ ಅನಂತಮೂರ್ತಿಯವರ ಸಂಸ್ಕಾರ ಸಿನಿಮಾ ಮಾಡಿದ ಏಕೈಕ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರೆಂಬ ಗೌರವಕ್ಕೆ ಕಾರ್ನಾಡ್ ಪಾತ್ರರಾಗಿದ್ದಾರೆ.

ತಮ್ಮ 42ರ ವಯಸ್ಸಿನಲ್ಲಿ ಕೊಡಗಿನ ವೀರಯೋಧ ಕೋದಂಡೇರ ಗಣಪತಿಯವರ ಪುತ್ರಿ, ಡಾ. ಸರಸ್ವತಿ ಗಣಪತಿಯವರನ್ನು ಅಧಿಕೃತವಾಗಿ ಮದುವೆಯಾದ ಗಿರೀಶರಿಗೆ 2 ಮಕ್ಕಳು, ಶಾಲ್ಮಲಿ ರಾಧಾ ಮತ್ತು ರಘು ಅಮಯ್. 10 ವರ್ಷಗಳ ಕಾಲ, ಲಿವ್–ಇನ್ ಆಗಿ ಸಂಸಾರ ನಡೆಸಿದ ಹಿರಿಮೆ ಕಾರ್ನಾಡರದು.

ತುಘಲಕ್ ನಾಟಕವನ್ನು ತಮ್ಮ ಮಿತ್ರ ಮತ್ತು ಸಹಾಯಕ ನಿರ್ದೇಶಕ ಕೃಷ್ಣ ಬಸರೂರುರೊಡಗೂಡಿ ಬರೆದಿದ್ದಾಗಿ, ಆ ನಾಟಕದ ಅರ್ಪಣೆಯಲ್ಲಿ ಹೇಳಿದ್ದಾರೆ. ಒಂದಾನೊಂದು ಕಾಲದಲ್ಲಿ ಚಿತ್ರವನ್ನು 1977ರಲ್ಲಿ ನಿರ್ದೇಶಿಸುವಾಗ ಕಳರಿಪಯಟ್ಟು ಮತ್ತು ಮುಂತಾದ ಸಾಹಸಕಲೆಗಳನ್ನು ಮೊದಲ ಬಾರಿ ಕನ್ನಡ ತೆರೆಯಲ್ಲಿ ಅಳವಡಿಸಿದ ಹಿರಿಮೆ ಕಾರ್ನಾಡರದ್ದು.

"ಕಾರ್ನಾಡರು ವಸ್ತುವನ್ನು ಗ್ರಹಿಸುವ ಕ್ರಮದಲ್ಲೇ ಅವರ ಅನನ್ಯತೆ ಇದೆ. ಈ ಗ್ರಹಿಕೆಗೆ ಪೂರಕವಾದ ರಚನಾಕ್ರಮವನ್ನು ಅವರು ಕಂಡುಕೊಂಡಿದ್ದಾರೆ. ಒಂದು ಸಮಸ್ಯೆಯನ್ನು ನಾಟಕ ರೂಪಕ್ಕೆ ಒಗ್ಗಿಸಿಕೊಂಡು ಅದಕ್ಕೊಂದು structure ಕೊಟ್ಟು ಜನರ ಮುಂದಿಡುವುದರಲ್ಲೇ ನಾಟಕಕಾರನ ಸೋಲು ಗೆಲುವು ಎರಡೂ ಅಡಗಿದೆ." ಎಂದು ಕಾರ್ನಾಡರ ನಾಟಕಗಳ ವಸ್ತು, ಗ್ರಹಿಕೆ ಬಗ್ಗೆ ಭಾರತೀಯ ರಂಗಭೂಮಿಯ ಹಿರಿಯ ನಿರ್ದೇಶಕ ಬಿ. ವಿ. ಕಾರಂತರು ದಾಖಲಿಸುತ್ತಾರೆ. ॐ

ಗೋಪಾಲ ಕೃಷ್ಣ ಗೋಖಲೆ

ಗೋಪಾಲ ಕೃಷ್ಣ ಗೋಖಲೆ (ಮೇ 9, 1866) ಭಾರತೀಯ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹತ್ವದ ಪಾತ್ರವಹಿಸುವುದರ ಜೊತೆಗೆ ಬ್ರಿಟಿಷರ ಆಡಳಿತ ಕಾಲದಲ್ಲಿ ಭಾರತದಲ್ಲಿ ಮಹತ್ವದ ಸುಧಾರಣೆಗಳನ್ನು ತಂದವರಾಗಿದ್ದಾರೆ.

ಜೀವನ

ಸ್ವಾತಂತ್ರ್ಯಪೂರ್ವ ಭಾರತದ ಮಹಾನ್ ರಾಜಕೀಯ ನಾಯಕರೂ ಮತ್ತು ಸಮಾಜ ಸುಧಾರಕರಾಗಿ ಭಾರತೀಯರಿಗೆ ಗೌರವಯುತವಾದ ಉತ್ತಮ ಬದುಕನ್ನು ತಂದುಕೊಡಲು ಶ್ರಮಿಸಿದ ಗೋಪಾಲಕೃಷ್ಣ ಗೋಖಲೆಯವರು ಮೇ 9, 1866 ರಂದು ಕೊಲ್ಹಾಪುರದಲ್ಲಿ ಜನಿಸಿದರು.

ಗೋಖಲೆಯವರು ಸಾಮಾನ್ಯ ಕುಟುಂಬಕ್ಕೆ ಸೇರಿದವರಾಗಿದ್ದರೂ ಅವರ ಹಿರಿಯರು ಅವರಿಗೆ ಇಂಗ್ಲಿಷ್ ಶಿಕ್ಷಣ ದೊರಕುವಂತೆ ಮಾಡಿದರು. ಪದವಿ ಶಿಕ್ಷಣ ಪಡೆದ ಪ್ರಥಮ ಭಾರತೀಯ ತಲೆಮಾರಿಗೆ ಸೇರಿದ ಗೋಖಲೆಯವರು ಪಾಶ್ಚಾತ್ಯ ರಾಜಕೀಯ ಚಿಂತನೆಗಳಿಂದ ಪ್ರಭಾವಿತರಾಗಿದ್ದರು. ಬ್ರಿಟಿಷರ ವಸಾಹತುಶಾಹಿ ಆಡಳಿತವ್ಯವಸ್ಥೆಗಳನ್ನು ಅವರು ವಿರೋಧಿಸುತ್ತಿದ್ದಾಗ್ಯೂ ಇಂಗ್ಲಿಷರ ರಾಜಕೀಯ ಸಿದ್ಧಾಂತಗಳ ಕುರಿತಾಗಿ ಗೌರವವುಳ್ಳ ನಿಲುವು ತಾಳಿದ್ದರು.

ಸಮಾಜ ಸುಧಾರಣಾ ಗುರಿ

ಭಾರತೀಯರಿಗೆ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆಯುವುದು ಮಾತ್ರವಲ್ಲದೆ, ಸಮಾಜ ಸುಧಾರಣೆ ಅವಶ್ಯಕತೆಯು ಮುಖ್ಯ ಎಂದು ಮನಗಂಡವರು ಗೋಖಲೆ. ಈ ಉದ್ದೇಶಕ್ಕಾಗಿ ಅವರು ಸೂಚಿಸಿದ ಪ್ರಮುಖ ಕಾರ್ಯವಿಧಾನಗಳೆಂದರೆ, ಅಹಿಂಸೆ ಮತ್ತು ಅಸ್ತಿತ್ವದಲ್ಲಿರುವ ಸರ್ಕಾರಿ ಸಂಸ್ಥೆಗಳ ಆಡಳಿತದಲ್ಲಿ ಮೌಲ್ಯಯುತ ಕಾರ್ಯನಿರ್ವಹಣಾ ವಿಧಾನದ ಅನುಸರಣೆ.

ಗೋಪಾಲಕೃಷ್ಣ ಗೋಖಲೆಯವರನ್ನು ತಮ್ಮ ಆದರ್ಶವೆಂದು ಪರಿಗಣಿಸಿದ್ದ ಡಿ. ವಿ. ಜಿಯವರು ಹೇಳುತ್ತಾರೆ "ಜನರಿಗೆ ಬದುಕು ಸಹ್ಯವೂ ಪ್ರಿಯವೂ ಅರ್ಥಪೂರಿತವೂ ಆಗಬೇಕೆಂಬ ಮಹೋದ್ದೇಶಕ್ಕೆ ಸಾರ್ವಜನಿಕ ಕ್ಷೇತ್ರದೊಳಗಿದ್ದು ಅಪರಿಮಿತವಾಗಿ ಶ್ರಮಿಸಿದವರು ಗೋಪಾಲಕೃಷ್ಣ ಗೋಖಲೆಯವರು. ಅವರೊಬ್ಬ ಪೂರ್ಣಾಕಾರಿಗಳು" ಎಚಿದು.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನಲ್ಲಿ

ಗೋಖಲೆಯವರು 1889ರ ವರ್ಷದಲ್ಲಿ ಮಹಾನ್ ಸಮಾಜ ಸುಧಾರಕರಾದ ಮಹಾದೇವ ಗೋವಿಂದ ರಾನಡೆಯವರಿಂದ ಪ್ರಭಾವಿತರಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಸದಸ್ಯರಾದರು. ತಮ್ಮ ಸಮಕಾಲೀನರಾದ ಬಾಲ

ಮನೆ ಮದ್ದು :

ಮಲಬದ್ಧತೆ: ನೀವು ಎಳ್ಳು ಬೆಣ್ಣೆ ಮತ್ತು ಕಲ್ಲು ಸಕ್ಕರೆಯನ್ನು ಒಟ್ಟಿಗೆ ಸೇವಿಸಿದರೆ, ಸರಿಯಾಗಿ ಮಲ ನಿರ್ಮಿತಿಯಾಗುತ್ತದೆ ಮತ್ತು ಮಲವು ಗಟ್ಟಿ ಅಥವಾ ಶುಷ್ಕವಾಗುವುದಿಲ್ಲ.

ಗಂಗಾಧರ ತಿಲಕ್, ದಾದಾಬಾಯ್ ನವರೋಜಿ, ಬಿಪಿನ್ ಚಂದ್ರ ಪಾಲ್, ಲಾಲಾ ಲಜಪತ್ ರಾಯ್ ಮತ್ತು ಅನ್ನಿ ಬೆಸೆಂಟ್ ಮುಂತಾದವರ ಜೊತೆಗೂಡಿ ಹಲವಾರು ವರ್ಷಗಳ ಕಾಲ ಬ್ರಿಟಿಷ್ ರಾಜಕೀಯ ವ್ಯವಸ್ಥೆಯಲ್ಲಿ ಭಾರತೀಯರಿಗೆ ಹೆಚ್ಚಿನ ಪ್ರಾತಿನಿಧ್ಯ ದೊರಕಿಸಿಕೊಡಲು ಹೋರಾಡಿದರು. ಬ್ರಿಟಿಷರೊಡನೆ ಸೌಹಾರ್ದಯುತವಾಗಿ ಸಮಸ್ಯೆಗಳನ್ನು ಇತ್ಯರ್ಥಪಡಿಸಿಕೊಳ್ಳಬೇಕು ಎಂಬುದು ಗೋಖಲೆಯವರ ಸಹನಶೀಲ ನಡೆಯಾಗಿತ್ತು. ಐರ್ ಲ್ಯಾಂಡ್ ದೇಶಕ್ಕೆ ಭೇಟಿಕೊಟ್ಟ ಗೋಖಲೆಯವರು ಆ ದೇಶದ ಆಲ್ಫೆಡ್ ಎಂಬಾತನನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಕೆಲಸ ಮಾಡುವ ಏರ್ಪಾಡು ಮಾಡಿದ್ದರು. ಅದರ ಮುಂದಿನ ವರ್ಷದಲ್ಲಿ ಬಾಲ ಗಂಗಾಧರ ತಿಲಕ್ಕರ ಜೊತೆಗೆ ಕಾಂಗ್ರೆಸ್ಸಿನ ಜಂಟಿ ಕಾರ್ಯದರ್ಶಿಯಾದರು. ತಿಲಕ್ ಮತ್ತು ಗೋಖಲೆಯವರು ಒಂದೇ ರೀತಿಯ ಕೌಟುಂಬಿಕ ಹಿನ್ನಲೆಯಿಂದ ಬಂದರು. ಇಬ್ಬರೂ ವಿದ್ಯಾಭ್ಯಾಸದಲ್ಲಿ ಸಮಾನ ಸಾಧಕರು. ಗಣಿತ ಶಾಸ್ತ್ರದ ಮಹಾನ್ ವಿದ್ವಾಂಸರು. ಇಬ್ಬರೂ ಡೆಕ್ಕನ್ ಎಜುಕೇಶನ್ ಸೊಸೈಟಿಯ ಪ್ರಮುಖ ಸದಸ್ಯರಾಗಿದ್ದರು. ಇಷ್ಟಾದರೂ ಕಾಂಗ್ರೆಸ್ಸಿನಲ್ಲಿ ಈ ಈರ್ವರೂ ನಾಯಕರಾದಾಗ, ಭಾರತೀಯ ಸಮುದಾಯಕ್ಕೆ ಯಾವ ರೀತಿಯಲ್ಲಿ ಉಪಯುಕ್ತತೆ ದೊರಕಿಸಿಕೊಡಬಹುದು ಎಂಬ ನಿಲುವಿನಲ್ಲಿ ತೀವ್ರಸ್ವರೂಪದ ಭಿನ್ನಾಭಿಪ್ರಾಯಗಳನ್ನು ತಳೆದವರಾಗಿದ್ದರು. 1905ರ ವರ್ಷದಲ್ಲಿ ಗೋಖಲೆಯವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾದರು.

ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ

ಈ ಸಮಯದಲ್ಲಿ ಅವರು ತಮ್ಮ ಹೃದಯಕ್ಕೆ ಆಪ್ತವಾಗಿದ್ದ ಸಮಾಜ ಸುಧಾರಣಾ ಚಟುವಟಿಕೆಗಳಿಗಾಗಿ 'ಸರ್ವೆಂಟ್ಸ್ ಆಫ್ ಇಂಡಿಯನ್ ಸೊಸೈಟಿ' ಯನ್ನು ಸ್ಥಾಪಿಸಿದರು. ಈ ಸಂಸ್ಥೆಯ ಮೂಲ ಉದ್ದೇಶ ಹೆಚ್ಚು ಹೆಚ್ಚು ಭಾರತೀಯರನ್ನು ವಿದ್ಯಾವಂತರನ್ನಾಗಿ ಮಾಡುವುದಾಗಿತ್ತು. "ಭಾರತದಲ್ಲಿ ಹೆಚ್ಚು ಹೆಚ್ಚು ಭಾರತೀಯರು ವಿದ್ಯಾವಂತರಾಗಿ ದೇಶಕ್ಕಾಗಿ, ಸಮಾಜಕ್ಕೆ ಮತ್ತು ಪಾರಸ್ಪರಿಕವಾಗಿ ದುಡಿಯುವಂತಾದ ಮಾತ್ರ ನಿಜವಾದ ರಾಜಕೀಯ ಬದಲಾವಣೆ ಸಾಧ್ಯ" ಎಂಬುದು ಅವರ ಬಲವಾದ ನಂಬಿಕೆಯಾಗಿತ್ತು. ಅಂದಿನ ದಿನಗಳಲ್ಲಿ ಭಾರತದಲ್ಲಿ ಅಸ್ತಿತ್ವದಲ್ಲಿದ್ದ ಇಂಡಿಯನ್ ಸಿವಿಲ್ ಸರ್ವಿಸಸ್ ವ್ಯವಸ್ಥೆಯು ಹೆಚ್ಚು ಜನರಿಗೆ ವಿದ್ಯಾಭ್ಯಾಸದ ಸೌಲಭ್ಯಗಳನ್ನು ಒದಗಿಸಲು ಅಸಮರ್ಥವಾಗಿದ್ದ ಹಿನ್ನಲೆಯಲ್ಲಿ, ಆ ಕಾರ್ಯವನ್ನು 'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ' ಮೂಲಕ ಸಾಧ್ಯವಾಗಿಸುವುದು ಅವರ ಧ್ಯೇಯವಾಗಿತ್ತು. ಈ ಧ್ಯೇಯ ಸಾಧನೆಗಾಗಿ ಅವರು ಅಹರ್ನಿಶಿ ದುಡಿದರು.

ಬ್ರಿಟಿಷರೊಂದಿಗೆ ಸೌಹಾರ್ದ ನಡೆ

ಗೋಖಲೆಯವರು ಭಾರತೀಯ ಸ್ವತಂತ್ರ ಚಳುವಳಿಯ ನಾಯಕರಾಗಿದ್ದಾಗಿಯೂ ಅವರ ಧ್ಯೇಯ ಸ್ವಾತಂತ್ರ್ಯಕ್ಕಿಂತ ಹೆಚ್ಚಿನದಾಗಿ ಸಮಾಜ ಸುಧಾರಣೆಯ ಕುರಿತಾಗಿತ್ತು. ಇಂಥಹ ಸಮಾಜ ಸುಧಾರಣೆಗಾಗಿ ಬ್ರಿಟಿಷ್ ಆಡಳಿತ ವ್ಯವಸ್ಥೆಯೊಂದಿಗೆ ಸೌಹಾರ್ದಯುತವಾಗಿ ನಡೆಯುವುದೇ ಉತ್ತಮವಾದ ದಾರಿ ಎಂಬ ನಿಲುವು ಅವರದಾಗಿತ್ತು. ಈ ಕಾರಣದಿಂದಾಗಿ ಗೋಖಲೆ ಮತ್ತು ತಿಲಕ್ಕರಂತಹ ಸ್ವಾತಂತ್ರ್ಯಪರ ಚಿಂತಕರ ನಡುವೆ ತೀವ್ರ ಭಿನ್ನಾಭಿಪ್ರಾಯಗಳಿದ್ದವು. ಈ ವಿರೋಧಗಳ್ಯಾವುವನ್ನೂ ಲೆಖ್ಖಿಸದ ಗೋಖಲೆಯವರು ತಾವು ಬಯಸಿದ್ದ ಸಮಾಜ ಸುಧಾರಣೆಗಳನ್ನು ಕಾರ್ಯರೂಪಕ್ಕೆ ತರುವ ಸಲುವಾಗಿ ತಮ್ಮ ಕೊನೆಯವರೆಗೆ ಬ್ರಿಟಿಷ್ ಸರ್ಕಾರದ ಜೊತೆ ಜೊತೆಗೆ ಸೌಹಾರ್ದಯುತವಾಗಿಯೇ ಕಾರ್ಯನಿರ್ವಹಿಸಿದರು.

1899ರ ವರ್ಷದಲ್ಲಿ ಗೋಖಲೆಯವರು ಬಾಂಬೆ ಲೆಜಿಸ್ಲೇಟಿವ್ ಕೌನ್ಸಿಲ್ಲಿಗೆ ಆಯ್ಕೆಗೊಂಡರು. 1903ರ ವರ್ಷದಲ್ಲಿ ಅವರು ಭಾರತದ ಗೌರ್ನರ್ ಜನರಲ್ ಅವರ 'ಕೌನ್ಸಿಲ್ ಆಫ್ ಇಂಡಿಯಾ'ಗೆ ಮುಂಬಯಿ ಪ್ರಾಂತ್ಯದ ಪ್ರತಿನಿಧಿಯಾಗಿ

ಆಯ್ಕೆಗೊಂಡರು. 1909ರ ವರ್ಷದಲ್ಲಿ ಅವರು ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲ್ಲಿನಲ್ಲಿ ಸೇವೆ ಸಲ್ಲಿಸಿದರು. ಆ ಸಮಯದಲ್ಲಿ ಅವರು ಅತ್ಯಂತ ಮಹಾನ್ ಮೇಧಾವಿಗಳೆಂದು ಪ್ರಖ್ಯಾತಿ ಪಡೆದರು. ವಾರ್ಷಿಕ ಆಯವ್ಯಯಗಳ ಕುರಿತಾದ ಚರ್ಚೆಯಲ್ಲಿ ಅವರ ಪಾಂಡಿತ್ಯಕ್ಕೆ ಮಾರುಹೋದ ಬ್ರಿಟಿಷ್ ಅಧಿಕಾರಿಗಳು ಅವರಿಗೆ ಅಪಾರವಾದ ಗೌರವ ನೀಡತೊಡಗಿದರು. ಹೀಗಾಗಿ ಅವರನ್ನು ಬ್ರಿಟಿಷ್ ಸರ್ಕಾರದ ಕಾರ್ಯದರ್ಶಿಗಳಾದ ಲಾರ್ಡ್ ಜಾನ್ ಮಾರ್ಲೇ ಅವರು ಲಂಡನ್ನಿಗೆ ಆಹ್ವಾನಿಸಿದರು. ಮಾರ್ಲೇ ಅವರೊಂದಿಗೆ ಗೋಖಲೆಯವರು ಉತ್ತಮವಾದ ಬಾಂಧವ್ಯ ಹೊಂದಿದ್ದರು. ಈ ಸೌಹಾರ್ದಯುತ ಸಂಬಂಧದಿಂದಾಗಿ 1909ರ ವರ್ಷದಲ್ಲಿ ಮಾರ್ಲೇ–ಮಿಂಟೋ ಸುಧಾರಣೆಗಳು ಜಾರಿಗೆ ಬರುವಂತಾದವು. 1904ರಲ್ಲಿ ಗೋಖಲೆಯವರನ್ನು ಬ್ರಿಟಿಷ್ ಸರ್ಕಾರವು ಸಿ ಐ ಇ ಅಂದರೆ ಕಂಪಾನಿಯನ್ ಆಫ್ ದಿ ಆರ್ಡರ್ ಆಫ್ ಇಂಡಿಯನ್ ಎಂಪೈರ್ ಎಂದು ನಿಯೋಜಿಸಿ ಅತ್ಯಂತ ಗೌರವಾನ್ವಿತ ಮಹನೀಯರ ಪಟ್ಟಿಯಲ್ಲಿ ಹೆಸರಿಸಿತು. ಇದು ಗೋಪಾಲಕೃಷ್ಣ ಗೋಖಲೆಯವರ ಪರಿಶ್ರಮ ಮತ್ತು ಕಾರ್ಯಗಳಿಗೆ ಸಂದ ಗೌರವವಾಗಿತ್ತು.

ಮಹಾತ್ಮ ಗಾಂಧಿಯವರಿಗೆ ಮಾರ್ಗದರ್ಶಕ

ಗೋಪಾಲಕೃಷ್ಣ ಗೋಖಲೆಯವರು ಮಹಾತ್ಮ ಗಾಂಧಿಯವರಿಗೆ ಭಾರತೀಯ ರಾಜಕೀಯ ಜೀವನದ ಪ್ರಾರಂಭಿಕ ವರ್ಷಗಳ ಮಾರ್ಗದರ್ಶಕರಾಗಿದ್ದರು. 1912ರ ವರ್ಷದಲ್ಲಿ ಗೋಖಲೆಯವರು ಗಾಂಧಿಯವರ ಆಹ್ವಾನದ ಮೇರೆಗೆ ದಕ್ಷಿಣ ಆಫ್ರಿಕಾಗೆ ಭೇಟಿ ನೀಡಿದರು. ಯುವ ಬ್ಯಾರಿಸ್ಟರ್ ಆಗಿ ದಕ್ಷಿಣ ಆಫ್ರಿಕಾದ ಹೋರಾಟಗಳ ನಂತರ ಭಾರತಕ್ಕೆ ಬಂದ ಗಾಂಧೀಜಿಯವರಿಗೆ ಸ್ವಯಂ ಗೋಖಲೆಯವರೇ ಜೊತೆ ನಿಂತು ಕೈಹಿಡಿದು ಮಾರ್ಗದರ್ಶನ ಮಾಡಿದರು. ಈ ನಿಟ್ಟಿನಲ್ಲಿ ಅವರು ಮಾಡಿದ ಪ್ರಮುಖ ಕಾರ್ಯವೆಂದರೆ ಗಾಂಧಿಯವರಲ್ಲಿ ಭಾರತದ ಕುರಿತಾಗಿ ನೀಡಿದ ಸಂಪೂರ್ಣ ಚಿತ್ರಣ ಮತ್ತು ಭಾರತವನ್ನು ಕಾಡುತ್ತಿರುವ ಸಮಸ್ಯೆಗಳ ಕುರಿತಾಗಿ ನೀಡಿದ ಸಮಗ್ರ ತಿಳುವಳಿಕೆ. 1920ರ ವೇಳೆಗೆ ಗಾಂಧೀಜಿ ಭಾರತೀಯ ಸ್ವಾತಂತ್ರ್ಯ ಹೋರಾಟದ ನಾಯಕರಾಗಿದ್ದರು. ತಮ್ಮ ಆತ್ಮ ಚರಿತ್ರೆಯಲ್ಲಿ ಗಾಂಧೀಜಿಯವರು ಗೋಪಾಲ ಕೃಷ್ಣ ಗೋಖಲೆಯವರನ್ನು ತಮ್ಮ ಗುರು ಮತ್ತು ಮಾರ್ಗದರ್ಶಕ ಎಂದು ಬಣ್ಣಿಸಿದ್ದಾರೆ. ಗೋಖಲೆಯವರ ಕುರಿತಾಗಿ ಗಾಂಧೀಜಿ "ಅವರೊಬ್ಬ ಶ್ರೇಷ್ಠ ನಾಯಕ, ರಾಜಕೀಯ ಮುತ್ಸದ್ದಿ, ಸ್ಫಟಿಕದಂತೆ ಸ್ವಚ್ಛ, ಕುರಿಯಂತೆ ಮೆದು, ಸಿಂಹದಂತೆ ಧೈರ್ಯಸ್ಥ, ತಪ್ಪು ಮಾಡಿದಾಗ ಸಹನಶೀಲ ಮತ್ತು ರಾಜಕೀಯ ಕ್ಷೇತ್ರದ ಸತ್ಪಾತ್ರರು" ಎಂದು ಕೊಂಡಾಡಿದ್ದಾರೆ. ಹಾಗಿದ್ದಾಗ್ಯೂ ಗಾಂಧೀಜಿಯವರು ಗೋಖಲೆಯವರಿಗಿದ್ದ ಪಾಶ್ಚಾತ್ಯ ಸಂಸ್ಥೆಗಳ ಕುರಿತಾಗಿದ್ದ ನಂಬುಗೆಗಳು ತಮಗೆ ಒಪ್ಪಿಗೆಯಾಗಿಲ್ಲ ಎಂದು ತಿಳಿಸುತ್ತಾರೆ.

ವಿದಾಯ

ತಮ್ಮ ಜೀವಿತಾವಧಿಯ ಕೊನೆಯವರೆಗೆ ನಿರಂತರ ಕಾರ್ಯಶೀಲರಾಗಿದ್ದ ಗೋಪಾಲ ಕೃಷ್ಣ ಗೋಖಲೆಯವರು ಫೆಬ್ರುವರಿ 19, 1915ರ ವರ್ಷದಲ್ಲಿ ಕೇವಲ ತಮ್ಮ 49ನೆಯ ವಯಸ್ಸಿನಲ್ಲಿ ನಿಧನರಾದರು. ॐ

ಸಮೃದ್ಧಿ ಸುಜ್ಞಾನ

"ದೇವಾಲಯಕ್ಕೆ ಹೋದರೆ ಕಣ್ಣು ಮುಚ್ಚಿ ಬೇಡಬೇಕು,
ಗ್ರಂಥಾಲಯಕ್ಕೆ ಹೋದರೆ ಕಣ್ಣು ತೆರೆದು ಓದಬೇಕು,
ಕಣ್ಣುಮುಚ್ಚಿಸುವುದು ದೇವಾಲಯ, ಕಣ್ಣು ತೆರೆಸುವುದು ಗ್ರಂಥಾಲಯ,
ಗ್ರಂಥಾಲಯವನ್ನು ನಿಮ್ಮ ಮನೆ ಮಾಡಿಕೊಳ್ಳಿ,
ಆಗ ಇಡೀ ಜಗತ್ತು ನಿಮ್ಮ ಮುಂದೆ ತಲೆಬಾಗುತ್ತದೆ".

ಪ್ರವಚನ ಚಿಂತನ :-

"ಯಾವದೇ ಸತ್ಪುರುಷರಿಗೆ ಆದರೂ ನಾವು ಅವರ ಕಾಲಿಗೆ ನಮಸ್ಕಾರ ಮಾಡತೀವಿ ತಲಿಗೆ ಅಥವಾ ಕೈಗೆ ಅಲ್ಲಾ. ಸತ್ಪುರುಷರ ಪಾದುಕಾ ಅಂದರ ಸಾಮಾನ್ಯ ಅಲ್ಲಾ. ಅದರೊಳಗ ಅವರ ತೇಜ ಅಂದರ ಶಕ್ತಿ ಇರತದ.ನೀವು ಎಷ್ಟು ಶ್ರದ್ಧಾ ಭಕ್ತಿ ಇಂದ ಅವುನ್ನ ಪೂಜಿ ಮತ್ತ ಉಪಾಸನಾ ಮಾಡತೀರೋ ಹಂಗ ಅವು ನಿಮಗ ಫಲ ಕೊಡತಾವ. ಇನ್ನ ನಮ್ಮ ಮಹಾರಾಜರ ಪಾದುಕಾ ಅಂದರ ಅವರ ಸ್ವರೂಪನೇ. ಅವು ನಮ್ಮ ಮನಿಗೆ ಬರೋದು ಅಂದರ ಪ್ರತ್ಯಕ್ಷ ಮಹಾರಾಜರೇ ನಮ್ಮ ಮನಿಗೆ ಬಂದಾಂಗ. ಪಾದುಕಾ ಸಂಚಾರ ಅಂದರ ಸಾಮಾನ್ಯ ಅಲ್ಲಾ.

ಬರೇ ಅವುಗಳ ದರ್ಶನ ಮಾತ್ರದಿಂದ ನಮ್ಮ ಪಾಪ ನಷ್ಟ ಆಗುತ್ತವೆ. ಇನ್ನ ಅವು ಮನಿಗೆ ಬಂದರ ಮನಿ ಒಳಗಿನ ವಾತಾವರಣ ನೇ ಬ್ಯಾರೆ ಅಣತದ. ಸತ್ವಗುಣ ವೃದ್ಧಿ ಆಗುತ್ತದೆ. ಒಂದು ರೀತಿ ಸಮಾಧಾನ ನಮ್ಮೊಳಗ ಉಕ್ಕತದ. ಆನಂದ ಮತ್ತ ಸಂತೋಷ ಅನಿಸತದ. ಮಹಾರಾಜರ ಪಾದುಕೆ ಮನಿಗೆ ಬರೋದು ಅಂದರ ನಮ್ಮ ಜನ್ಮ ಜನ್ಮಾಂತರದ ಪುಣ್ಯವಿಶೇಷ ಇರತದ. ಪ್ರತಿ ಒಬ್ಬರಿಗೂ ಅವನ್ನ ನೋಡಿದರ ಪೂಜಿ ಮಾಡಸಬೇಕು ಅಂತ ಅನಿಸತದ. ಆದರ ಅದು ಶಕ್ಯ ಆಗೋದು ಸ್ವಲ್ಪ ಕಠಿಣ. ಈಗ ಇಂಥಾ ಪಾದುಕಾ ಸಂಚಾರ ನಡೀತು ಅಂದರ ಆಗ ಇದು ಸಾಧಕರಿಗೆ, ಭಕ್ತರಿಗೆ ಒಂದು ಸುವರ್ಣಾವಕಾಶ.

ಪ್ರತಿ ಒಂದು ಭಕ್ತರ ಮನಿಗೆ ಹೋಗೋದು ಅದರ ಕಾಲಾವಕಾಶ ಸಾಲೋದಿಲ್ಲ. ಅದಕ್ ಅಂತ ಒಂದು ಗುರುದಕ್ಷಿಣಿ ಮಾಡಿರತದ. ಹಂಗ ಯಾರು ಆಮಂತ್ರಣ ಮಾಡತಾರೊ ಆವಾಗ ಆಜು ಬಾಜು ಇರೋರು, ಅನಾನುಕೂಲ ಇರೋರು ಅಲ್ಲೆ ಹೋಗಿ ದರ್ಶನ ಮಾಡಕೊಂಡು ತಮ್ಮ ಅನುಕೂಲ ಆದಷ್ಟು ಕಾಣಿಕೆ ಕೊಡಬಹುದು. ಇಂಥ ದಿವ್ಯ ಪಾದುಕೆಗಳ ಸಂಚಾರದಿಂದ ಬರಿ ಮನೆಯ ವಾತಾವರಣ ಅಷ್ಟ ಅಲ್ಲಾ ಸುತ್ತಮುತ್ತ ವಾತಾವರಣದಾಗೂ ಅದರ ಪರಿಣಾಮ ಆಗುತದ. ಜನರೊಳಗ ಭಕ್ತಿ ಶ್ರದ್ಧಾ ನಮ್ಮ ಸಂಸ್ಕಾರ ಎಲ್ಲಾ ಬೆಳಿತಾವ. ಇನ್ನ ಅದರ ಜೋಡಿ ಇದ್ದ ಸಾಧಕರಿಗೆ, ಪ್ರಪಂಚದೊಳಗ ಇದ್ದು ಪರಮಾರ್ಥ ಮಾಡೊ ಭಕ್ತರ ದರ್ಶನ ಆಗುತದ. ಜನ ಸಾಮಾನ್ಯರಲ್ಲಿ ಭಕ್ತಿಯ ಜಾಗೃತಿ ಆಗುತದ. ನಿಜವಾಗಿಯೂ ಶ್ರೀ ಮಹಾರಾಜರ ದಿವ್ಯ ಪಾದುಕೆಗಳ ಸಂಚಾರ ಒಂದು ಸುವರ್ಣಾವಕಾಶ ಅದ. ಮಹಾರಾಜರ ದಿವ್ಯ ಅನುಗ್ರಹ ಇದ್ದಲ್ಲೆ ಪಡೀಲಿಕ್ಕೆ. ॐ

ಡೆಂಗ್ಯೂ ಏನೇನು ಆಹಾರ ಸ್ವೀಕರಿಸಬೇಕು ?

ಡಾ॥ ರವಿಕಿರಣ ಪಟವರ್ಧನ
ಆಯುರ್ವೇದ ವೈದ್ಯ ಶಿರಸಿ.

ಡೆಂಗ್ಯೂದಲ್ಲಿ ಈ ಮುಂದೆ ಹೇಳಿದ ಆಹಾರವನ್ನು ಸ್ವೀಕರಿದರೆ ರೋಗದ ನಂತರದ ಹಲವು ತೊಂದರೆಗಳು ಸುಲಭ ನಿವಾರಣೆಯಾಗಬಹುದು. ಡೆಂಗ್ಯೂನಲ್ಲಿ ಬದಲಾದಂತಹ ಪರಿಸ್ಥಿತಿ ಸಹಜವಾಗಲು ಈ ಕೆಳಗಿನ ಕೆಲವು ಉಪಾಯಗಳು ರೋಗೊತ್ತರ ಉತ್ತಮ.

* ವಿಟಮಿನ್ ಸಿ–ಭರಿತ ಆಹಾರಗಳಾದ ನೆಲ್ಲಿಕಾಯಿ ಮತ್ತು ಕಿತ್ತಳೆ ರಸವು ಚಟಿಣುಭಠಜುಞಗಳನ್ನು ಉತ್ತೇಜಿಸುತ್ತದೆ, ಬೇಯಿಸಿದ ಹಸಿರು ತರಕಾರಿಗಳು, ಸೇಬು, ಬಾಳೆಹಣ್ಣುಗಳು, ಸೂಪ್ಗಳು ಮತ್ತು ಸುಲಭವಾಗಿ ಜೀರ್ಣವಾಗುವ ಆಹಾರ ಸೇವಿಸಬೇಕು
* ಪ್ಲೇಟ್ಲೆಟ್ ಸಂಖ್ಯೆಯನ್ನು ಹೆಚ್ಚಿಸುವ ಆಹಾರಗಳಲ್ಲಿ ತಾಜಾ ಹಣ್ಣುಗಳು, ದಾಳಿಂಬೆ ಅಥವಾ ಕಪ್ಪು ದ್ರಾಕ್ಷಿ ರಸ, ಬೇಯಿಸಿದ ಹಸಿರು ಎಲೆಗಳ ತರಕಾರಿಗಳು, ಕಾಡ್ ಲಿವರ್ ಎಣ್ಣೆ, ಅಗಸೆಬೀಜದ ಎಣ್ಣೆ ಸೇರಿವೆ.
* ಡೆಂಗ್ಯೂ ರೋಗಿ ಮಸಾಲೆಯುಕ್ತ ಆಹಾರಗಳು, ಸ್ಯಾಚುರೇಟೆಡ್ ಕೊಬ್ಬಿನಂಶವಿರುವ ಆಹಾರಗಳು, ಸಂಸ್ಕರಿಸಿದ ಆಹಾರಗಳು ಮತ್ತು ಕೃತಕ ಸಿಹಿ ಇರುವ ಪಾನೀಯಗಳಿಂದ ದೂರವಿರಬೇಕು ಮತ್ತು ಬೇಯಿಸದ ತರಕಾರಿಗಳಿಂದ ದೂರವಿರಬೇಕು.
* ನಿರ್ಜಲೀಕರಣವನ್ನು ನಿಲ್ಲಿಸಲು ಸಾಕಷ್ಟು ನೀರು ಕುಡಿಯಿರಿ. ತೆಂಗಿನ ನೀರು, ತಾಜಾ ರಸಗಳು ಮತ್ತು ಪುನರ್ಜಲೀಕರಣ (ORS)
* ದಿನವಿಡೀ ನೀರನ್ನು ಕುಡಿಯುವುದು ಕಷ್ಟ ಆದ್ದರಿಂದ ಎಳನೀರನ್ನು ಸೇವಿಸಿ,ಇದು ಅಗತ್ಯವಾದ ಖನಿಜಗಳು ಮತ್ತು ಎಲೆಕ್ಟ್ರೋಲೈಟ್ಗಳಲ್ಲಿ ಸಮೃದ್ಧವಾಗಿರುವ ನೀರಿನ ನೈಸರ್ಗಿಕ ಆಗರವಾಗಿದೆ. ನೀರು ಅಥವಾ ಎಳನೀರನ್ನು ಕುಡಿಯಿರಿ ಮತ್ತು ನಿಮ್ಮನ್ನು ಪುನರ್ಜಲೀಕರಣ ಆಗುವಂತೆ ನೋಡಿಕೊಳ್ಳಿ.
* ಬಿಳಿ ಎಳ್ಳು, ಚಿಯಾ, ಅಗಸೆ, ಕುಂಬಳಕಾಯಿ, ಸೂರ್ಯಕಾಂತಿ ಬೀಜ ಬೀಜಗಳು ಪ್ಲೇಟ್ಲೆಟ್ಗಳ ಉತ್ಪಾದನೆಗೆ ಅಗತ್ಯವಾದ ವಿಟಮಿನ್ಗಳು ಮತ್ತು ಅಮೈನೋ ಆಮ್ಲಗಳನ್ನು ಹೊಂದಿರುತ್ತವೆ. ಈ ಸಣ್ಣ ಕೋಶಗಳ ರಚನೆಯಲ್ಲಿ ಒಳಗೊಂಡಿರುವ ಪ್ರೋಟೀನ್ಗಳು ಮತ್ತು ವಿಟಮಿನ್ ಎ, ನಿಯಮಿತವಾಗಿ ಸೇವಿಸಿದಾಗ ಉತ್ತಮವಾಗಿ ಹೀರಲ್ಪಡುತ್ತದೆ. ಹೆಚ್ಚುವರಿಯಾಗಿ, ಬೀಜಗಳು ಪ್ರಬಲವಾದ ಉತ್ಕರ್ಷಣ ನಿರೋಧಕಗಳನ್ನು ಹೊಂದಿರುವುದರಿಂದ ಮತ್ತು ಸ್ವತಂತ್ರ ರಾಡಿಕಲ್ಗಳ ಹಾನಿಕಾರಕ ಪರಿಣಾಮಗಳನ್ನು ಕಡಿಮೆ ಮಾಡಲು ಅವು ಅತ್ಯುತ್ತಮವಾಗಿವೆ.
* ನಿಮ್ಮ ಪ್ಲೇಟ್ಲೆಟ್ ಮಟ್ಟವನ್ನು ಕಾಪಾಡಲು ಪಾಲಕ, ಕುಂಬಳಕಾಯಿ, ಕೆಂಪುಮೆಣಸು, ಕ್ಯಾರೆಟ್, ಎಲೆಕೋಸು, ಕೋಸುಗಡ್ಡೆ ಮತ್ತು ಬೀಟ್ರೂಟ್ನಂತಹ ತರಕಾರಿಗಳಿಂದ ಉತ್ತೇಜಿಸುತ್ತದೆ, ಅನೇಕ ವಿಧಗಳಲ್ಲಿ ಆರೋಗ್ಯವನ್ನು ಬೆಂಬಲಿಸುವ ಆಹಾರವೆಂದರೆ ಪಾಲಕ್. ಇದು ಪ್ರೋಟೀನ್ ಮತ್ತು ವಿಟಮಿನ್ ಕೆ ಯ ಮೂಲವಾಗಿದೆ. ಇದು ಅಧಿಕ ರಕ್ತಸ್ರಾವದ ಅಪಾಯವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಮತ್ತು ಹೆಪ್ಪುಗಟ್ಟುವಿಕೆಗೆ ಸಹಾಯ ಮಾಡುತ್ತದೆ.
* ಮೊಸರು ಗಣನೀಯ ಪ್ರಮಾಣದ ಪ್ರೋಬಯಾಟಿಕ್ಗಳನ್ನು ಹೊಂದಿರುತ್ತದೆ, ಇದನ್ನು ಸಾಮಾನ್ಯವಾಗಿ ಸಕ್ರಿಯ ಬ್ಯಾಕ್ಟೀರಿಯಾ ಎಂದು ಕರೆಯಲಾಗುತ್ತದೆ. ರೋಗಕಾರಕ ಬ್ಯಾಕ್ಟೀರಿಯಾಗಳು ಮತ್ತು ರೋಗಗಳನ್ನು ಉಂಟುಮಾಡುವ ಸೂಕ್ಷ್ಮಜೀವಿಗಳಿಂದ ಕರುಳನ್ನು ಮುಕ್ತವಾಗಿಡಲು ಇವು ಹೆಚ್ಚು ಸಹಾಯಕವಾಗಿವೆ. ನಿಯಮಿತ ಸೇವನೆಯು ಬಲವಾದ ರಕ್ಷಣೆಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ.

ಕಳಲೆ (ಬಾಂಬೂ ಶೂಟ್) ಅನಾನಸ್, ನುಗ್ಗೇಕಾಯಿ ಉಪಯೋಗ ಬೇಡ.

ಈ ಎಲ್ಲ ಮೇಲಿನ ಉಪಾಯಗಳನ್ನ ನಿಮ್ಮ ವೈದ್ಯರ ಸಲಹೆ ಸೂಚನೆಯಂತೆ ಇತಿಮಿತಿಯಲ್ಲಿ ಉಪಯೋಗಿಸಿ. ॐ

ಹಗಲು ಕನಸಿನ ಅಪಾಯ

ಕೃಪೆ: ಈಶ್ವರಾನಂದ ಸ್ವಾಮೀಜಿ
ಸಂಗ್ರಹ : ಮಲ್ಲಿಕಾರ್ಜುನ ಬಿರಾದಾರ

ಒಂದು ಹಳ್ಳಿಯಲ್ಲಿ ಒಬ್ಬ ಯುವಕನಿದ್ದ. ಹೆಸರು ರಮೇಶ್. ಗಟ್ಟಿಮುಟ್ಟಾದ ದೇಹವಿದ್ದರೂ ದುಡಿಯುವುದರಲ್ಲಿ ಅವನಿಗೆ ಆಸಕ್ತಿಯಿರಲಿಲ್ಲ. ತಾಯಿ ದುಡಿದು ತಂದುದನ್ನೇ ಹೊಟ್ಟೆ ತುಂಬ ಊಟ ಮಾಡಿ ಹಗಲಲ್ಲೇ ಚೆನ್ನಾಗಿ ನಿದ್ರೆ ಮಾಡುತ್ತಿದ್ದ. ನಿದ್ರೆಯಿಂದ ಎದ್ದ ಮೇಲೆ ತಾಯಿಯೊಂದಿಗೆ, 'ಅಮ್ಮ, ನಾನೊಂದು ಕನಸು ಕಂಡೆ. ಅದರಲ್ಲಿ ರಾಜಕುಮಾರಿ ನನ್ನ ಕೈ ಹಿಡಿದುಕೊಂಡಿದ್ದಳು" ಎನ್ನುತ್ತಿದ್ದ. ಇನ್ನೊಂದು ದಿನ ತಾನು ದೊಡ್ಡ ಅರಮನೆ ಕಟ್ಟಿಸಿದಂತೆ ಕನಸು ಕಂಡೆನೆಂದು ಹೇಳುತ್ತಿದ್ದ. ದಿನವೂ ಅವನ ಕನಸಿನ ಕಥೆ ಕೇಳಿ ಬೇಸತ್ತು ತಾಯಿ, ಮಗನೇ, ಕನಸಿನಲ್ಲಿ ಬರುವ ಸಿರಿವಂತಿಕೆ ಎಚ್ಚರವಾದಾಗ ಇರುವುದಿಲ್ಲ. ಹಗಲು ನಿದ್ರೆ ಮಾಡಿದರೆ ಇಂತಹ ಕನಸು ಬೀಳುವುದು ಸಹಜ. ಹಗಲು ದೇಹದ ಶ್ರಮದಿಂದ ಸಂಪಾದಿಸಿ ಸಿರಿವಂತನಾಗಿ ಕನಸುಗಳನ್ನೆಲ್ಲ ನನಸು ಮಾಡಿಕೊಳ್ಳಬೇಕು ಎಂದು ಹೇಳಿದಳು. "ಸರಿ, ನಾಳೆಯಿಂದಲೇ ಕನಸು ಕಾಣುವುದನ್ನು ನಿಲ್ಲಿಸಿ ಕೆಲಸಕ್ಕೆ ಹೋಗಿ ನಿಜವಾಗಿಯೂ ಶ್ರೀಮಂತನಾಗಿ ಸುಖವಾಗಿರುತ್ತೇನೆ" ಎಂದು ಹೇಳಿದ.

ಮರುದಿನ ರಮೇಶ್ ಕೆಲಸ ಹುಡುಕಿಕೊಂಡು ಹೊರಟ. ಒಬ್ಬ ರೈತ, "ನನ್ನಲ್ಲಿ ಐವತ್ತು ತೆಂಗಿನ ಮರಗಳಿವೆ. ಎಲ್ಲ ಮರಗಳನ್ನೇರಿ ತೆಂಗಿನಕಾಯಿ ತೆಗೆದುಕೊಟ್ಟರೆ ಮರಕ್ಕೊಂದು ಕಾಯಿಯಂತೆ ಐವತ್ತು ತೆಂಗಿನಕಾಯಿ ಕೂಲಿ ಕೊಡುತ್ತೇನೆ" ಎಂದು ಹೇಳಿದ. ಅವನು ಒಪ್ಪಿಕೊಂಡು ಕೆಲವು ಮರಗಳಿಂದ ತೆಂಗಿನಕಾಯಿ ತೆಗೆದು ಹಾಕಿದ. ತುಂಬ ಆಯಾಸವಾಯಿತು. ಒಂದು ಮರದ ಮೇಲೆ ಗರಿಯಲ್ಲಿ ಕುಳಿತುಕೊಂಡೇ ನಿದ್ರೆಗಾರಂಭಿಸಿದ.

ನಿದ್ರೆಯಲ್ಲಿ ರಮೇಶ್ ಒಂದು ಕನಸು ಕಂಡ. ರೈತನು ಕೊಟ್ಟ ತೆಂಗಿನಕಾಯಿಗಳನ್ನು ಮಾರಾಟ ಮಾಡಿ ಬಂದ ಹಣದಲ್ಲಿ ಹಾಲು ಕೊಡುವ ಹಸುಗಳನ್ನು ತೆಗೆದುಕೊಂಡು ಹಾಲಿನ ಮಾರಾಟದಲ್ಲಿ ಬಂದ ಹಣ ಮನೆಯೊಳಗೆ ತುಂಬಿ ಹೊರಗೆ ಬಂದಿತು. ಹೀಗೆ ಹೊರಗೆ ಬಂದ ಹಣವನ್ನು ಮಾತ್ರ ಕೊಟ್ಟು ಆಡುಗಳನ್ನು ಖರೀದಿಸಿದ, ಆಡಿನ ಮರಿಗಳ ಮಾರಾಟದಿಂದ ಬಂದ ಲಾಭದ ಹಣ ಆಕಾಶದ ತನಕ ರಾಶಿ ಬಿದ್ದು ಇನ್ನೂ ಉಳಿಯಿತು. ಉಳಿಕೆಯ ಹಣದಿಂದ ಕೋಳಿಗಳನ್ನು ತಂದ, ಈ ಕೋಳಿಗಳು ಬಂಗಾರದ ಮೊಟ್ಟೆಯನ್ನಿಟ್ಟವು, ಬಂಗಾರದ ಮೊಟ್ಟೆ ಮಾರಲು ಪೇಟೆಗೆ ಹೋದಾಗ ಒಬ್ಬ ವ್ಯಾಪಾರಿ ಒಂದು ವಿಚಿತ್ರ ಕುದುರೆಯನ್ನು ಮಾರುವುದರಲ್ಲಿದ್ದ. ರೆಕ್ಕೆಗಳಿದ್ದ ಈ ಕುದುರೆಯ ಬೆನ್ನೇರಿ ಕುಳಿತರೆ ಆಕಾಶಮಾರ್ಗದಲ್ಲಿ ಹಾರಿಕೊಂಡು ಹೋಗುತ್ತಿತ್ತು.

ರಮೇಶ್ ವ್ಯಾಪಾರಿ ಹೇಳಿದ ಬೆಲೆ ಕೊಟ್ಟು ಕುದುರೆಯನ್ನು ಕೊಂಡುಕೊಂಡ. ಅದರ ಮೇಲೆ ಕುಳಿತು ಗಗನ ಮಾರ್ಗದಲ್ಲಿ ಹಾರುತ್ತ ಬರುವಾಗ ದೇಶದ ರಾಜಕುಮಾರಿ ಉದ್ಯಾನದಲ್ಲಿ ನಿಂತುಕೊಂಡಿದ್ದಳು. ಹಾರುವ ಕುದುರೆಯ ಮೇಲೆ ಕುಳಿತಿರುವ ಯುವಕನನ್ನು ನೋಡಿ ಕುತೂಹಲದಿಂದ ಕೈ ಬೀಸಿ ಬಳಿಗೆ ಕರೆದಳು. ಕೆಳಗಿಳಿದು ಬಂದ ರಮೇಶನೊಂದಿಗೆ, "ನಿನ್ನಂತಹ ಸಾಹಸಿ ನನಗೆ ಗಂಡನಾಗಬೇಕು. ನನ್ನನ್ನು ವಿವಾಹವಾಗು" ಎಂದು ಕೋರಿದಳು. ಅವಳನ್ನು ಕುದುರೆಯ ಮೇಲೆ ಕೂರಿಸಿಕೊಂಡು ಹಾರುತ್ತಿದ್ದಾಗ ಅದೇಕೋ ಕುದುರೆ ಮುಗ್ಗರಿಸಿತು. ಕೆಳಗೆ ಬೀಳುತ್ತಿರುವ ರಾಜಕುಮಾರಿಯನ್ನು ಎತ್ತಿಕೊಳ್ಳಲು ರಮೇಶ್ ಕುದುರೆಯಿಂದ ಕೆಳಗೆ ಬಾಗಿದ. ಅಷ್ಟರಲ್ಲಿ ಅವನಿಗೆ ಎಚ್ಚರವಾಯಿತು. ಕುದುರೆಯೂ ಇಲ್ಲ, ರಾಜಕುಮಾರಿಯೂ ಇರಲಿಲ್ಲ. ತೆಂಗಿನ ಗರಿಯಿಂದ ಕೆಳಗೆ ಬಿದ್ದು ತನ್ನ ಕಾಲೊಂದು ಮುರಿದಿರುವುದನ್ನು ಅವನು ಗಮನಿಸಿದ.

ಅಯ್ಯೋ ದೇವರೇ, ದುಡಿಮೆಯಲ್ಲಿ ದೊಡ್ಡವನಾಗುವ ವಿಶ್ವಾಸವಿಲ್ಲದೆ ಅಮ್ಮ ಬೇಡವೆಂದರೂ ಹಗಲು ನಿದ್ರೆ ಮಾಡಿ ಕನಸು ಕಂಡೆ. ಇದರಿಂದ ದುಡಿದು ತಿನ್ನಲಾಗದ ಸ್ಥಿತಿಗೆ ತಲಪಿದೆನಲ್ಲ ಎಂದು ರಮೇಶ್ ದುಖದಿಂದ ಹೇಳಿಕೊಂಡ. ॐ

ಪ್ರಕೃತಿ, ವಿಕೃತಿ, ಸಂಸ್ಕೃತಿ

ಕಣ್ಣು ಪ್ರಕೃತಿ, ಕೆಂಗಣ್ಣು ವಿಕೃತಿ,
ಕರುಣಾ ದೃಷ್ಟಿಯ ಕಣ್ಣು ಸಂಸ್ಕೃತಿ.

ಜೇನುನೊಣ

ಪರಾಗಸ್ಪರ್ಶಕಗಳ ಪ್ರಾಮುಖ್ಯತೆ, ಅವರು ಎದುರಿಸುತ್ತಿರುವ ಬೆದರಿಕೆಗಳು ಮತ್ತು ಸುಸ್ಥಿರ ಅಭಿವೃದ್ಧಿಗೆ ಅವುಗಳ ಕೊಡುಗೆಯ ಬಗ್ಗೆ ಜಾಗೃತಿ ಮೂಡಿಸಲು, ಗಓ ಮೇ 20 ನ್ನು ವಿಶ್ವ ಜೇನುನೊಣ ದಿನ ಎಂದು ಗೊತ್ತುಪಡಿಸಿತು.

ಜೇನುನೊಣಗಳು ಮತ್ತು ಇತರ ಪರಾಗಸ್ಪರ್ಶಕಗಳಾದ ಚಿಟ್ಟೆಗಳು, ಬಾವಲಿಗಳು ಮತ್ತು ಹಮ್ಮಿಂಗ್ ಬರ್ಡ್ಸ್, ಮಾನವ ಚಟುವಟಿಕೆಗಳಿಂದ ಹೆಚ್ಚುತ್ತಿರುವ ಅಪಾಯಕ್ಕೆ ಒಳಗಾಗುತ್ತಿವೆ. ಆದಾಗ್ಯೂ, ಪರಾಗಸ್ಪರ್ಶವು ನಮ್ಮ ಪರಿಸರ ವ್ಯವಸ್ಥೆಗಳ ಉಳಿವಿಗೆ ಒಂದು ಮೂಲಭೂತ ಪ್ರಕ್ರಿಯೆಯಾಗಿದೆ. ಪ್ರಪಂಚದ ಸುಮಾರು 90% ಕಾಡು ಹೂ ಬಿಡುವ ಸಸ್ಯ ಪ್ರಭೇದಗಳು ಸಂಪೂರ್ಣವಾಗಿ ಅಥವಾ ಕನಿಷ್ಠ ಭಾಗಶಃ ಪ್ರಾಣಿಗಳ ಪರಾಗಸ್ಪರ್ಶವನ್ನು ಅವಲಂಬಿಸಿವೆ, ಜೊತೆಗೆ ವಿಶ್ವದ ಆಹಾರ ಬೆಳೆಗಳಲ್ಲಿ 75% ಕ್ಕಿಂತ ಹೆಚ್ಚು ಮತ್ತು ಜಾಗತಿಕ ಕೃಷಿ ಭೂಮಿಯ 35% ಅನ್ನು ಅವಲಂಬಿಸಿವೆ. ಪರಾಗಸ್ಪರ್ಶಕಗಳು ಆಹಾರ ಭದ್ರತೆಗೆ ನೇರವಾಗಿ ಕೊಡುಗೆ ನೀಡುವುದಲ್ಲದೆ, ಜೀವವೈವಿಧ್ಯತೆಯನ್ನು ಸಂರಕ್ಷಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ಪರಾಗಸ್ಪರ್ಶಕಗಳ ಪ್ರಾಮುಖ್ಯತೆ, ಅವು ಎದುರಿಸುತ್ತಿರುವ ಬೆದರಿಕೆಗಳು ಮತ್ತು ಸುಸ್ಥಿರ ಅಭಿವೃದ್ಧಿಗೆ ಅವುಗಳ ಕೊಡುಗೆಯ ಬಗ್ಗೆ ಜಾಗೃತಿ ಮೂಡಿಸಲು, ವಿಶ್ವಸಂಸ್ಥೆಯು ಮೇ 20 ಅನ್ನು ವಿಶ್ವ ಜೇನುನೊಣ ದಿನವೆಂದು ಘೋಷಿಸಿತು.

ಜೇನುನೊಣಗಳು ಮತ್ತು ಇತರ ಪರಾಗಸ್ಪರ್ಶಕಗಳನ್ನು ರಕ್ಷಿಸುವ ಗುರಿಯನ್ನು ಹೊಂದಿರುವ ಕ್ರಮಗಳನ್ನು ಬಲಪಡಿಸುವುದು ಇದರ ಗುರಿಯಾಗಿದೆ, ಇದು ಜಾಗತಿಕ ಆಹಾರ ಪೂರೈಕೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿನ ಹಸಿವನ್ನು ನಿವಾರಿಸಲು ಗಮನಾರ್ಹವಾಗಿ ಕೊಡುಗೆ ನೀಡುತ್ತದೆ. ನಾವೆಲ್ಲರೂ ಪರಾಗಸ್ಪರ್ಶಕಗಳ ಮೇಲೆ ಅವಲಂಬಿತರಾಗಿದ್ದೇವೆ ಮತ್ತು ಆದ್ದರಿಂದ ಅವುಗಳ ಅವನತಿಯನ್ನು ಮೇಲ್ವಿಚಾರಣೆ ಮಾಡುವುದು ಮತ್ತು ಜೀವವೈವಿಧ್ಯದ ನಷ್ಟವನ್ನು ತಡೆಯುವುದು ಬಹಳ ಮುಖ್ಯವಾಗಿದೆ.

ಪ್ರಕೃತಿಯಿಂದ ಪ್ರೇರಿತವಾದ ಜೇನುನೊಣಗಳು ನಮ್ಮೆಲ್ಲರನ್ನೂ ಪೋಷಿಸುತ್ತವೆ", ಕೃಷಿ ಆಹಾರ ವ್ಯವಸ್ಥೆಗಳು ಮತ್ತು ನಮ್ಮ ಗ್ರಹದ ಪರಿಸರ ವ್ಯವಸ್ಥೆಗಳ ಆರೋಗ್ಯದಲ್ಲಿ ಜೇನುನೊಣಗಳು ಮತ್ತು ಇತರ ಪರಾಗಸ್ಪರ್ಶಕಗಳು ವಹಿಸುವ ನಿರ್ಣಾಯಕ ಪಾತ್ರಗಳನ್ನು ಎತ್ತಿ ತೋರಿಸುತ್ತದೆ. ವಾಸ್ತವವಾಗಿ, ಪರಾಗಸ್ಪರ್ಶಕಗಳು ಆವಾಸಸ್ಥಾನ ನಷ್ಟ, ಸಮರ್ಥನೀಯವಲ್ಲದ ಕೃಷಿ ಪದ್ಧತಿಗಳು, ಹವಾಮಾನ ಬದಲಾವಣೆ ಮತ್ತು ಮಾಲಿನ್ಯದಿಂದ ಹೆಚ್ಚಾಗಿ ಬೆದರಿಕೆಗೆ

ಒಳಗಾಗುತ್ತಿವೆ. ಅವುಗಳ ಕುಸಿತವು ವಿಶೇಷವಾಗಿ ಗ್ರಾಮೀಣ ಸಮುದಾಯಗಳಿಗೆ ಆಹಾರ ಉತ್ಪಾದನೆಯನ್ನು ಅಪಾಯಕ್ಕೆ ಸಿಲುಕಿಸುತ್ತದೆ, ವೆಚ್ಚವನ್ನು ಹೆಚ್ಚಿಸುತ್ತದೆ ಮತ್ತು ಆಹಾರ ಅಭದ್ರತೆಯನ್ನು ಉಲ್ಬಣಗೊಳಿಸುತ್ತದೆ.

ಪರಾಗಸ್ಪರ್ಶವು ಕೃಷಿ–ಆಹಾರ ವ್ಯವಸ್ಥೆಗಳಿಗೆ ಅತ್ಯಗತ್ಯವಾಗಿದ್ದು, ಹಣ್ಣುಗಳು, ತರಕಾರಿಗಳು, ಬೀಜಗಳು ಮತ್ತು ಬೀಜಗಳು ಸೇರಿದಂತೆ ವಿಶ್ವದ 75 ಪ್ರತಿಶತಕ್ಕೂ ಹೆಚ್ಚು ಬೆಳೆಗಳ ಉತ್ಪಾದನೆಯನ್ನು ಬೆಂಬಲಿಸುತ್ತದೆ. ಬೆಳೆ ಇಳುವರಿಯನ್ನು ಹೆಚ್ಚಿಸುವುದರ ಜೊತೆಗೆ, ಪರಾಗಸ್ಪರ್ಶಕಗಳು ಆಹಾರದ ಗುಣಮಟ್ಟ ಮತ್ತು ವೈವಿಧ್ಯತೆಯನ್ನು ಸುಧಾರಿಸುತ್ತವೆ.

200,000 ಕ್ಕೂ ಹೆಚ್ಚು ಪ್ರಾಣಿ ಪ್ರಭೇದಗಳು ಪರಾಗಸ್ಪರ್ಶಕಗಳಾಗಿವೆ, ಅವುಗಳಲ್ಲಿ ಬಹುಪಾಲು ಕಾಡು ಪ್ರಾಣಿಗಳು, ಅವುಗಳಲ್ಲಿ ಚಿಟ್ಟೆಗಳು, ಪಕ್ಷಿಗಳು, ಬಾವಲಿಗಳು ಮತ್ತು 20,000 ಕ್ಕೂ ಹೆಚ್ಚು ಜೇನುನೊಣ ಪ್ರಭೇದಗಳು ಸೇರಿವೆ.

ಜೇನುನೊಣಗಳು ಮತ್ತು ಇತರ ಪರಾಗಸ್ಪರ್ಶಕಗಳು ಪರಿಸರ ಆರೋಗ್ಯದ ಸೂಚಕಗಳಾಗಿಯೂ ಕಾರ್ಯನಿರ್ವಹಿಸುತ್ತವೆ, ಪರಿಸರ ವ್ಯವಸ್ಥೆಗಳು ಮತ್ತು ಹವಾಮಾನದ ಬಗ್ಗೆ ಒಳನೋಟಗಳನ್ನು ಒದಗಿಸುತ್ತವೆ. ಪರಾಗಸ್ಪರ್ಶಕಗಳನ್ನು ರಕ್ಷಿಸುವುದರಿಂದ ಜೀವವೈವಿಧ್ಯತೆ ಮತ್ತು ಮಣ್ಣಿನ ಫಲವತ್ತತೆ, ಕೀಟ ನಿಯಂತ್ರಣ ಮತ್ತು ಗಾಳಿ ಮತ್ತು ನೀರಿನ ನಿಯಂತ್ರಣದಂತಹ ನಿರ್ಣಾಯಕ ಪರಿಸರ ವ್ಯವಸ್ಥೆಯ ಸೇವೆಗಳನ್ನು ಹೆಚ್ಚಿಸುತ್ತದೆ.

ಕೃಷಿಪರಿಸರ ವಿಜ್ಞಾನ, ಅಂತರಬೆಳೆ, ಕೃಷಿಅರಣ್ಯ ಮತ್ತು ಸಮಗ್ರ ಕೀಟ ನಿರ್ವಹಣೆಯಂತಹ ಪ್ರಕೃತಿ ಸ್ನೇಹಿ ಕೃಷಿ ಪದ್ಧತಿಗಳು ಪರಾಗಸ್ಪರ್ಶಕಗಳನ್ನು ಉಳಿಸಿಕೊಳ್ಳಲು ಸಹಾಯ ಮಾಡುತ್ತದೆ, ಸ್ಥಿರವಾದ ಬೆಳೆ ಇಳುವರಿಯನ್ನು ಖಚಿತಪಡಿಸುತ್ತದೆ ಮತ್ತು ಆಹಾರ ಕೊರತೆ ಹಾಗೂ ಪರಿಸರದ ಪರಿಣಾಮಗಳನ್ನು ಕಡಿಮೆ ಮಾಡುತ್ತದೆ.

ಉದ್ದೇಶಪೂರ್ವಕ ಪರಾಗಸ್ಪರ್ಶಕ ಸಂರಕ್ಷಣಾ ಪ್ರಯತ್ನಗಳು ಅಂತಿಮವಾಗಿ ಜೀವವೈವಿಧ್ಯದ ಇತರ ಘಟಕಗಳ ಸಂರಕ್ಷಣೆಯನ್ನು ಉತ್ತೇಜಿಸುತ್ತವೆ, ಇದು ಕೀಟ ನಿಯಂತ್ರಣ, ಮಣ್ಣಿನ ಫಲವತ್ತತೆ, ಗಾಳಿ ಮತ್ತು ನೀರಿನ ನಿಯಂತ್ರಣದಂತಹ ಪರಿಸರ ವ್ಯವಸ್ಥೆಯ ಸೇವೆಗಳನ್ನು ಹೆಚ್ಚಿಸುತ್ತದೆ. ಸುಸ್ಥಿರ ಕೃಷಿ–ಆಹಾರ ವ್ಯವಸ್ಥೆಗಳಿಗೆ ಆಹಾರ, ನಾರು ಮತ್ತು ಇಂಧನದ ಉತ್ಪಾದನೆಗೆ ಕೃಷಿ ಪದ್ಧತಿಗಳ ದೀರ್ಘಕಾಲೀನ ಸಹಬಾಳ್ವೆಯನ್ನು ಖಾತ್ರಿಪಡಿಸುವ ಸಮಗ್ರ ವಿಧಾನವನ್ನು ಅಳವಡಿಸಿಕೊಳ್ಳುವುದು ಅಗತ್ಯವಿದೆ. ಪರಾಗಸ್ಪರ್ಶಕಗಳ ಭವಿಷ್ಯವನ್ನು ರಕ್ಷಿಸಲು ನಾವೆಲ್ಲರೂ ಮಾಡಬಹುದಾದದ್ದು ಒಂದು ವಿಷಯವಿದೆ.

ಜೇನುನೊಣಗಳು ಅಪಾಯದಲ್ಲಿವೆ. ಪ್ರಸ್ತುತ ಜಾತಿಗಳ ಅಳಿವಿನ ಪ್ರಮಾಣವು ಮಾನವ ಪ್ರಭಾವಗಳಿಂದಾಗಿ ಸಾಮಾನ್ಯಕ್ಕಿಂತ 100 ರಿಂದ 1,000 ಪಟ್ಟು ಹೆಚ್ಚಾಗಿದೆ. ಅಕಶೇರುಕ ಪರಾಗಸ್ಪರ್ಶಕಗಳಲ್ಲಿ ಸುಮಾರು 35 ಪ್ರತಿಶತ, ವಿಶೇಷವಾಗಿ ಜೇನುನೊಣಗಳು, ಚಿಟ್ಟೆಗಳು, ಮತ್ತು ಬಾವಲಿಗಳಂತಹ ಸುಮಾರು 17 ಪ್ರತಿಶತ ಕಶೇರುಕ ಪರಾಗಸ್ಪರ್ಶಕಗಳು ಜಾಗತಿಕವಾಗಿ ಅಳಿವಿನಂಚಿನಲ್ಲಿವೆ.

ಈ ಪ್ರವೃತ್ತಿ ಮುಂದುವರಿದರೆ, ಹಣ್ಣುಗಳು, ಬೀಜಗಳು ಮತ್ತು ಅನೇಕ ತರಕಾರಿ ಬೆಳೆಗಳಂತಹ ಪೌಷ್ಟಿಕ ಬೆಳೆಗಳ ಬದಲಿಗೆ ಅಕ್ಕಿ, ಜೋಳ ಮತ್ತು ಆಲೂಗಡ್ಡೆಯಂತಹ ಪ್ರಮುಖ ಬೆಳೆಗಳು ಹೆಚ್ಚಾಗಿ ಕಂಡುಬರುತ್ತವೆ, ಇದು ಅಂತಿಮವಾಗಿ ಅಸಮತೋಲಿತ ಆಹಾರಕ್ಕೆ ಕಾರಣವಾಗುತ್ತದೆ.

ತೀವ್ರ ಕೃಷಿ ಪದ್ಧತಿಗಳು, ಭೂ ಬಳಕೆಯ ಬದಲಾವಣೆ, ಏಕ–ಬೆಳೆ ಪದ್ಧತಿ, ಕೀಟನಾಶಕಗಳು ಮತ್ತು ಹವಾಮಾನ ಬದಲಾವಣೆಗೆ ಸಂಬಂಧಿಸಿದ ಹೆಚ್ಚಿನ ತಾಪಮಾನ ಇವೆಲ್ಲವೂ ಜೇನುನೊಣಗಳ ಸಂಖ್ಯೆಗೆ ಮತ್ತು ವಿಸ್ತೃತವಾಗಿ, ನಾವು

ಬೆಳೆಯುವ ಆಹಾರದ ಗುಣಮಟ್ಟಕ್ಕೆ ಸಮಸ್ಯೆಗಳನ್ನು ಉಂಟುಮಾಡುತ್ತವೆ. ಪರಾಗಸ್ಪರ್ಶ ಬಿಕ್ಕಟ್ಟಿನ ಆಯಾಮಗಳು ಮತ್ತು ಜೀವವೈವಿಧ್ಯ ಮತ್ತು ಮಾನವ ಜೀವನೋಪಾಯಕ್ಕೆ ಅದರ ಸಂಪರ್ಕಗಳನ್ನು ಗುರುತಿಸಿ, ಜೈವಿಕ ವೈವಿಧ್ಯತೆಯ ಸಮಾವೇಶವು ಪರಾಗಸ್ಪರ್ಶಕಗಳ ಸಂರಕ್ಷಣೆ ಮತ್ತು ಸುಸ್ಥಿರ ಬಳಕೆಯನ್ನು ಆದ್ಯತೆಯನ್ನಾಗಿ ಮಾಡಿದೆ. 2000 ರಲ್ಲಿ, ಕೃಷಿ ಮತ್ತು ಸಂಬಂಧಿತ ಪರಿಸರ ವ್ಯವಸ್ಥೆಗಳಲ್ಲಿ ಪರಾಗಸ್ಪರ್ಶಕಗಳ ಸುಸ್ಥಿರ ಬಳಕೆಯನ್ನು ಉತ್ತೇಜಿಸಲು ಅಡ್ಡ–ಕಡಿತದ ಉಪಕ್ರಮವಾಗಿ ಪಕ್ಷಗಳ ಐದನೇ ಸಮ್ಮೇಳನದಲ್ಲಿ (COP V) ಅಂತರರಾಷ್ಟ್ರೀಯ ಪರಾಗಸ್ಪರ್ಶಕ ಉಪಕ್ರಮ (IPI) ಅನ್ನು ಸ್ಥಾಪಿಸಲಾಯಿತು (COP ನಿರ್ಧಾರ V/5, ವಿಭಾಗ II). ಇದರ ಮುಖ್ಯ ಗುರಿಗಳು ಪರಾಗಸ್ಪರ್ಶಕಗಳ ಕುಸಿತವನ್ನು ಮೇಲ್ವಿಚಾರಣೆ ಮಾಡುವುದು, ಪರಾಗಸ್ಪರ್ಶಕಗಳ ಮೇಲೆ ವರ್ಗೀಕರಣ ಮಾಹಿತಿಯ ಕೊರತೆಯನ್ನು ಪರಿಹರಿಸುವುದು, ಪರಾಗಸ್ಪರ್ಶದ ಆರ್ಥಿಕ ಮೌಲ್ಯ ಮತ್ತು ಪರಾಗಸ್ಪರ್ಶ ಸೇವೆಗಳ ಕುಸಿತದ ಆರ್ಥಿಕ ಪರಿಣಾಮವನ್ನು ನಿರ್ಣಯಿಸುವುದು ಮತ್ತು ಪರಾಗಸ್ಪರ್ಶಕ ವೈವಿಧ್ಯತೆಯನ್ನು ರಕ್ಷಿಸುವುದು. ಅಂತರರಾಷ್ಟ್ರೀಯ ಪರಾಗಸ್ಪರ್ಶಕ ಉಪಕ್ರಮ (IPI) ವನ್ನು ಸಂಘಟಿಸುವುದರ ಜೊತೆಗೆ, FAO, ರಾಣಿ ಜೇನು ಸಂತಾನೋತ್ಪತ್ತಿಯಿಂದ ಹಿಡಿದು ಕೃತಕ ಗರ್ಭಧಾರಣೆಯವರೆಗೆ ಜೇನುತುಪ್ಪ ಉತ್ಪಾದನೆ ಮತ್ತು ರಫ್ತು ಮಾರುಕಟ್ಟೆಗೆ ಸುಸ್ಥಿರ ಪರಿಹಾರಗಳವರೆಗೆ ದೇಶಗಳಿಗೆ ತಾಂತ್ರಿಕ ಸಹಾಯವನ್ನು ಒದಗಿಸುತ್ತದೆ. ॐ



ಸಂಪ್ರೀತಿ ಸಮೃದ್ಧಿ ಮಾಸ ಪತ್ರಿಕೆ

#66, ಸಂಪ್ರೀತಿ – ಸದನ, ಸರ್ಕಾರಿ ಆಸ್ಪತ್ರೆ ಪಕ್ಕದ ರಸ್ತೆ, ಮಾಗಡಿ ಟೌನ್, ರಾಮನಗರ ಜಿಲ್ಲೆ - 562 120

ದೂರವಾಣಿ : 8971608213. ಇ–ಮೇಲ್ : **sampreethisamruddhi@gmail.com**

ಪತ್ರಿಕೆಯ ಚಂದಾವಿವರ

10 ವರ್ಷಕ್ಕೆ ರೂ. 2000/– (ಎರಡು ಸಾವಿರ ರೂಗಳು),
05 ವರ್ಷಕ್ಕೆ ರೂ. 1000/– (ಒಂದು ಸಾವಿರ ರೂಗಳು)
02 ವರ್ಷಕ್ಕೆ ರೂ. 500/– (ಐದು ನೂರು ರೂಗಳು)

ಚಂದಾ ಹಣವನ್ನು ಚೆಕ್ ಮೂಲಕ : Publisher Sampreethi Samruddhi monthly magazine,
ಅಥವಾ ಗೂಗಲ್ ಪೇ ಸಂಖ್ಯೆ : 98455 65696 ಮೂಲಕ ಸಂದಾಯ ಮಾಡಬಹುದು.
ಹೆಚ್ಚಿನ ವಿವರಗಳಿಗೆ ಈ ಸಂಖ್ಯೆಯನ್ನು ಸಂಪರ್ಕಿಸಿ : 8971608213

ನಾಳೆ ನೀವೂ ಮುದುಕರಾಗಲೇ ಬೇಕು

ಅವರು ಕಳೆದ 3 ವರ್ಷಗಳಿಂದ ಆ ವೃದ್ಧಾಶ್ರಮದಲ್ಲೇ ಇದ್ದರು. ಮಕ್ಕಳಿಬ್ಬರು ವೈದ್ಯರಾದರೂ ಇರುವುದು ಬೇರೆ ದೇಶದಲ್ಲಿ, ಹೆಂಡತಿ ತೀರಿಕೊಂಡ ಬಳಿಕ... ಈ ವೃದ್ಧಾ ಶ್ರಮವೇ ಅವರ ಮನೆಯಾಗಿ ಬಿಟ್ಟಿತ್ತು. ಮೊದ ಮೊದಲು ಒಂದೆರಡು ಸಲ ಮಗ, ಮಗಳು ಕಾಲ್ ಮಾಡುತಿದ್ದರು.. ಈಗ ಮಕ್ಕಳ ಕಾಲ್ ಬರದೇ ವರ್ಷ 2 ಆಗಿತ್ತು. ಆಶ್ರಮದ ಪೇಮೆಂಟ್ ಪ್ರತಿ ತಿಂಗಳು ಗೂಗಲ್ ಪೇ ಆಗುತ್ತಿತ್ತು.

ಅವರಿಗೂ ನಾಲಿಗೆ ಜಡ್ಡು ಗಟ್ಟಿ ಹೋಗಿತ್ತು ಆಶ್ರಮದ ಆ ದಾಲ್ ಅನ್ನ ತಿಂದು ತಿಂದು. 78 ವರ್ಷದ ರಾಯರಿಗೆ ಅಂದೇಕೋ ಕೋಳಿ ಬಿರಿಯಾನಿ ತಿನ್ನಲು ಮನಸ್ಸಾಗಿತ್ತು.. ಮನೆಯಲಾಗಿದ್ದರೆ ಮನಸ್ಸಾದ ತಕ್ಷಣ ಕೋಳಿ ತಂದು ಹೆಂಡತಿಗೆ ಹೇಳಿ ಬಿರಿಯಾನಿ ಮಾಡಿಸಿ ತಿನ್ನುತಿದ್ದರು.. ಇಲ್ಲಿ ಯಾರಲ್ಲಿ ಹೇಳುವುದು?, ಆಸೆ ಅತಿಯಾಗಿದ್ದರಿಂದ ಓಪನ್ ಇರುವ ಗೇಟ್ ನೋಡಿ ಮೆಲ್ಲನೆ ಗೇಟ್ ನತ್ತ ಹೋದರು..

ಅಲ್ಲೊಬ್ಬ ಖತರ್ನಾಕ್ ವಾಚ್ಮಾನ್ ಯಾವಾಗಲೂ ಇರುತ್ತಿದ್ದ, ಯಾರನ್ನು ಕೂಡಾ ಹೊರ ಹೋಗಲು ಬಿಡುತ್ತಿರಲಿಲ್ಲ ಅವನು. ಅಂದು ಅವನೂ ಇಲ್ಲದ್ದು ನಿಜಕ್ಕೂ ರಾಯರಿಗೆ ಖುಷಿ ಏನಿಸಿತ್ತು.. ಮೆಲ್ಲಗೆ ಆಶ್ರಮದಿಂದ ಹೊರ ಬಂದರು. ಸ್ವಲ ದೂರ ಬಂದಾಗಲೇ ಸಿಕ್ಕಿತ್ತು ಹೋಟೆಲ್ ಸ್ವಾದಿಸ್ಟ್.. ತಮ್ಮ ನೆಚ್ಚಿನ ಹೋಟೆಲ್‌ಗಳಲ್ಲಿ ಒಂದು. ಮತ್ತೆ ಮತ್ತೆ ಹಿಂದೆ ನೋಡಿದರು ಯಾರು ನೋಡಿರದ್ದು ಖಾತ್ರಿ ಮಾಡಿಕೊಂಡವರೇ ಹೋಟೆಲ್‌ನ ಒಳಗೆ ಓಡಿದರು. ವೈಟರ್ ಬಳಿ ತಮಗಿಷ್ಟದ ಚಿಕನ್ ಬಿರಿಯಾನಿ ಆರ್ಡರ್ ಮಾಡಿದ್ದರು.. ಗಬ ಗಬನೆ ತಿಂದರು.. ಅರ್ದ ಪ್ಲೇಟ್ ಕಾಲಿ ಆದಾಗ ಹಣದ ನೆನಪಾಗಿ ಪರ್ಸ್ ಹುಡುಕಿದರೆ ಅಲ್ಲಿದ್ದದ್ದು 100 ರೂ ಮಾತ್ರ..

ಮತ್ತೆ ಕೇಳಿದರು ಸಪ್ಲೈರ್ ಬಳಿ ಬಿರಿಯಾನಿಗೆ ಎಷ್ಟು? ಎಂದು, 150 ಎಂದಾಗ, ಎದೆ ದಸಕ್ ಎಂದಿತು ರಾಯರಿಗೆ. ಅಷ್ಟರಲ್ಲಾಗಲೇ ಪ್ಲೇಟ್ ಕಾಲಿಯಾಗಿತ್ತು, ಮುಖದಲ್ಲಿ ಮೊದಲ ಬಾರಿ ಹೆದರಿಕೆ, ಗಾಬರಿ ಎಲ್ಲವೂ ಆಗುತಿತ್ತು, ಏನು ಮಾಡುವುದೆಂದೇ ತೋಚಿರಲಿಲ್ಲ ಅವರಿಗೆ. ಈಗ ಜೀವನದಲ್ಲಿ ಮೊದಲ ಬಾರಿ ಮಾನ ಹೋಗುವ ಪ್ರಸಂಗ ಎದುರಾಗಿದ್ದು ಅಂದು ಕಣ್ಣಂಚಲ್ಲಿ ನೀರು ಬಂದಿತ್ತು. ಮಕ್ಕಳಿಗೆ ಶಪಿಸಿದರು, ಕುಲದೇವರನ್ನು ಪ್ರಾರ್ಥಿಸಿದರು, ಹೊಟ್ಟೆ ತುಂಬಿದ್ದರಿಂದ ತೇಗಿದರು. ಘರ್....ಎಂದು, ಅದು ಅವರ ನಿಯಂತ್ರಣದಲ್ಲಿಲ್ಲದೇ ಬಂದಿತ್ತು..

ಒಂದಷ್ಟು ಹೊತ್ತಾದರೂ ಬಿಲ್ ಬರದಾಗ ವೇಟರ್ ಅನ್ನು ಕರೆದರು ನಡುಗುವ ಸ್ವರದಲ್ಲೇ ಬಿಲ್ ಕೊಡಿ ಎಂದರು, ಮುಂದಿನದಕ್ಕೆ ಸಿದ್ದರಾಗಿದ್ದರು ಅವರು ಅಲ್ಲೊಂದು ಟ್ವಿಸ್ಟ್ ಇತ್ತು.. ವೈಟರ್ ಬಂದವನೇ ನಿಮ್ಮ ಬಿಲ್ ಅವರು ಕೊಟ್ಟಿದ್ದಾರೆ ಎಂದು ಬಿಟ್ಟ. ರಾಯರು ಹತ್ತಿರದ ಟೇಬಲ್ ನೋಡಿದರು ಒಬ್ಬ ಬೆನ್ನು ಹಾಕಿ ಕೂತಿದ್ದ. ರಾಯರಿಗೆ ಆಶ್ಚರ್ಯ ದೇವರನ್ನು ನೋಡಿರಲಿಲ್ಲ ಅವರು ಇಲ್ಲಿ ದೇವರೇ ಬಂದಿದ್ದರು.. ಇನ್ನೂ ಸಮೀಪ ಹೋದರೆ ಅಲ್ಲಿ ಮತ್ತೊಂದು ಅಘಾತ ವಿತ್ತು....

ಆಶ್ರಮದ ವಾಚ್ ಮ್ಯಾನ್ ನಗುತ್ತಾ ಕೂತಿದ್ದ ಅಲ್ಲಿ... "ಸರ್ ನಾನು ನೋಡಲು ಸಿಟ್ಟಿನ ಮನುಷ್ಯ ನಾಗಿದ್ದಿರ ಬಹುದು ಆದರೆ ನನ್ನ ಮನಸ್ಸು ನಿಮ್ಮ ಮಕ್ಕಳಷ್ಟು ಕೆಟ್ಟದಾಗಿಲ್ಲ, ಬಹಳ ದಿನಗಳಿಂದ ನಿಮ್ಮನ್ನು ನೋಡುತ್ತಾ ಇದ್ದೇನೆ ನಿಮ್ಮ ಆಸೆಗಳೇನೆಂದು ಕೂಡಾ ಗೊತ್ತಿತ್ತು ಆದರೆ ಇಡಿ ಆಶ್ರಮಕ್ಕೆ ಬಿರಿಯಾನಿ ಊಟ ಕೊಡಿಸುವಷ್ಟು ಶ್ರೀಮಂತ ನಾನಲ್ಲ ಸರ್... ಅದಿಕ್ಕೆ ನಿಮ್ಮನ್ನು ಹೊರಬಿಟ್ಟು ನಿಮ್ಮ ಆಸೆ ಈಡೇರಿಸಿದೆ. ನನ್ನ ತಂದೆ ಈಗಿಲ್ಲ ಸರ್ ಅವರೆಲ್ಲೇ ಇದ್ದರೂ ನಾನು ಮಾಡಿದ ಕೆಲಸ ಅವರನ್ನು ತೃಪ್ತ ಪಡಿಸಿದೆ ಎನ್ನುವ ಸಂತೋಷ ನನ್ನಲ್ಲಿದೆ.. ಓಕೆ ಸರ್ ನಡೆ ಯಿರಿ ನಾವಿನ್ನು ಆಶ್ರಮಕ್ಕೆ ಹೋಗೋಣ" ಎಂದು.. ಹೊಟ್ಟೆ ತುಂಬಿದ ರಾಯರನ್ನು ಮರಳಿ ಆಶ್ರಮದತ್ತ ಕರೆದೋಯ್ದ.

ಇಂತಹ ಅದೆಷ್ಟೋ ಅಸಹಾಯಕ ವೃದ್ಧರು ಮಕ್ಕಳಿದ್ದೂ ಕೂಡಾ ವೃದ್ಧಾಶ್ರಮಗಳಲ್ಲಿ ಕಾಲ ಕಳೆಯುತ್ತಿ ದ್ದಾರೆ. ತಮ್ಮ ಅದೆಷ್ಟೋ ಆಸೆ ಗಳನ್ನು ತಮ್ಮಲ್ಲೇ ಹಿಡಿದಿಟ್ಟು ತಮ್ಮ ಆಯಸ್ಸಿನ ಕೊನೆಯ ದಿನಗಳನ್ನು ಬಂದಿಯಾಗಿ 4 ಗೋಡೆಯ ಮಧ್ಯ ಕಳೆಯುತ್ತಿರುವ ಇಂತಹ ವೃದ್ಧರ ಆಸೆಗಳನ್ನು ತೀರಿಸುವುದು ಮಕ್ಕಳಾದವರ ಕರ್ತವ್ಯ... ಇಲ್ಲದಿದ್ದರೆ... ನೆನಪಿರಲಿ

ನಾಳೆ ನೀವೂ ಮುದುಕರಾಗಲೇ ಬೇಕು .... ಓಂ

ವಿಶ್ವ ದಾದಿಯರ ದಿನ

ವಿಶ್ವ ದಾದಿಯರ ದಿನವನ್ನು ಖ್ಯಾತ ದಾದಿ ಪ್ಲಾರೆನ್ಸ್ ನೈಟಿಂಗೇಲ್ ಅವರು ಹುಟ್ಟಿದ ದಿನದಂದು ಆಚರಿಸಲಾಗುವುದು. ಅವರು ಮನುಕುಲಕ್ಕೆ ನೀಡಿದ ಅಮೋಘ ಸೇವೆಯನ್ನು ಸ್ಮರಿಸುವ ಸಲುವಾಗಿ 'ವಿಶ್ವ ದಾದಿಯರ ದಿನ'ಎಂದು ಜಗತ್ತಿನಾದ್ಯಂತ ಮೇ 12 ರಂದು ಸಂಭ್ರಮದಿಂದ ಆಚರಿಸಲಾಗುತ್ತಿದೆ. ಈ ಆಚರಣೆಯನ್ನು ವಿಶ್ವ ದಾದಿಯರ ಪರಿಷತ್ತು 1971 ರಲ್ಲಿ ಆರಂಭ ಮಾಡಿತ್ತು.

ಯಾರೀಕೆ ಫ್ಲಾರೆನ್ಸ್ ನೈಟಿಂಗೇಲ್?

1820ರ ಮೇ 12ರಂದು ಜನಿಸಿದ ಫ್ಲಾರೆನ್ಸ್ ನೈಟಿಂಗೇಲ್ ಇವರನ್ನು 'ಆಧುನಿಕ ನರ್ಸಿಂಗ್‌ನ ರೂವಾರಿ' ಎಂದು ಕರೆಯುತ್ತಾರೆ. ಮೂಲತಃ ಇಟಲಿ ದೇಶದಲ್ಲಿ ಜನಿಸಿ ಬಳಿಕ ಬ್ರಿಟಿಷ್ ದೇಶದ ಸಂಜಾತೆಯಾದ ಈಕೆ 13 ಆಗಸ್ಟ್ 1910 ರಲ್ಲಿ ಇಹಲೋಕ ತ್ಯಜಿಸಿದರು. ಸುಮಾರು 90 ವರ್ಷಗಳ ಪರಿಪೂರ್ಣ ಬದುಕು ಸವೆಸಿದ ಈಕೆ ತನ್ನ ಜೀವನವನ್ನು ಮನುಕುಲದ ಸೇವೆಗೆ ಮುಡಿಪಾಗಿಟ್ಟಿದ್ದಳು. ಸಾಮಾಜಿಕ ಕಾರ್ಯಕರ್ತೆಯಾಗಿದ್ದ ಈಕೆ ವೃತ್ತಿಯಲ್ಲಿ ಅಂಕಿ ಅಂಶ ತಜ್ಞೆಯಾಗಿದ್ದಳು. ಆದರೆ ನೊಂದವರ ದೀನ ದಲಿತರ ಸಾಲಿಗೆ ಈಕೆ ಸಾಕ್ಷಾತ್ ದೇವತೆಯಾಗಿದ್ದಳು.

ಕ್ರಿಮಿನ್ ಯುದ್ಧದ ಸಮಯದಲ್ಲಿ ನುರಿತ ದಾದಿಯರ ತಂಡದ ನಾಯಕಿಯಾಗಿ ಈಕೆ, ಗಾಯಗೊಂಡ ಸೈನಿಕರ ಸೇವೆಯನ್ನು ಹಗಲು ರಾತ್ರಿ ಮಾಡಿ ಹಲವಾರು ಸೈನಿಕರು ಜೀವ ಉಳಿಸಿದ್ದಳು. ರಾತ್ರಿ ಹೊತ್ತು ಯುದ್ಧ ಭೂಮಿಯಲ್ಲಿ ಕತ್ತಲಿನ ನಡುವೆ ದೀಪವನ್ನು ಹಿಡಿದುಕೊಂಡು ನೊಂದ ಮತ್ತು ಗಾಯಗೊಂಡ ಸೈನಿಕರ ಸೇವೆ ಮಾಡಿ 'ಲೇಡಿ ಆಫ್ ಲ್ಯಾಂಪ್' ಎಂಬ ಹೆಸರಿನಿಂದ ಪ್ರಖ್ಯಾತಿಗೊಂಡಿದ್ದರು.

ಈಕೆ ಮಾಡಿದ ನಿಸ್ವಾರ್ಥ ಸೇವೆಯಿಂದ ವಿಕ್ಟೋರಿಯಾ ಸಂಸ್ಕೃತಿಯಲ್ಲಿ ದಾದಿಗಳಿಗೆ ವಿಶೇಷವಾದ ಸ್ಥಾನಮಾನ ದೊರೆತು ಬಹಳಷ್ಟು ಸೇವಾ ಮನೋಭಾವದ ಜನರು ನರ್ಸಿಂಗ್ ಕಲಿಕೆಗೆ ಮುಂದಾಗಿದ್ದರು ಎಂಬುದು ಗಮನಾರ್ಹ ಅಂಶ ಮತ್ತು ವೈದ್ಯಕೀಯ ಜಗತ್ತಿನಲ್ಲಿ ದಾದಿಯರಿಗೆ ಅತಿ ವಿಶಿಷ್ಟವಾದ ಸ್ಥಾನಮಾನ ಮುಂದೆ ಸಿಗುವಲ್ಲಿ ಸಹಕಾರಿಯಾಯಿತು ಎಂದರೂ ತಪ್ಪಾಗಲಿಕ್ಕಿಲ್ಲ.

ಮನೆ ಮದ್ದು :

ಕಪ್ಪಾದ ಕುತ್ತಿಗೆಯಿಂದ ಮುಕ್ತಿ ಹೊಂದಲು ಆಲೂಗೆಡ್ಡೆಯನ್ನು ಚೆನ್ನಾಗಿ ತುರಿದು ಅದರ ರಸವನ್ನು ತೆಗೆದು, ಈ ರಸವನ್ನು ಕುತ್ತಿಗೆಗೆ ಹಚ್ಚಿ 10-15 ನಿಮಿಷಗಳ ಕಾಲ ಒಣಗಲು ಬಿಡಿ, ನಂತರ ಉಗುರು ಬೆಚ್ಚಗಿನ ನೀರಿನಿಂದ ತೊಳೆಯಿರಿ.

ಫ್ಲಾರೆನ್ಸ್ ನೈಟಿಂಗೇಲ್ ನಿಸ್ವಾರ್ಥ ಸೇವೆ ಗುರುತಿಸಿದ ಜಗತ್ತು

ಫ್ಲಾರೆನ್ಸ್ ನೈಟಿಂಗೇಲ್ ಅವರು ಮಾಡಿದ ಸೇವೆಯನ್ನು ಜಗತ್ತಿನೆಲ್ಲೆಡೆ ಗುರುತಿಸಲಾಯಿತು. 1860 ರಲ್ಲಿ 'ನರ್ಸಿಂಗ್ ತರಬೇತಿಗಾಗಿ' ಲಂಡನ್‌ನ ಸೈಂಟ್ ಥಾಮಸ್ ಆಸ್ಪತ್ರೆಯಲ್ಲಿ ನೈಟಿಂಗೇಲ್ ನರ್ಸಿಂಗ್ ಶಾಲೆಯನ್ನು ಆರಂಭಿಸಲಾಯಿತು. ಈಗ ಇದು ಲಂಡನ್ ಕಿಂಗ್ಸ್ ಕಾಲೇಜಿನ ಅಧೀನದಲ್ಲಿದೆ. ನೈಟಿಂಗೇಲ್ ಅವರ ಸೇವೆಯನ್ನು ಸ್ಮರಿಸುವ ಸಲುವಾಗಿ ಪ್ರತಿ ನರ್ಸಿಂಗ್ ವಿದ್ಯಾರ್ಥಿಯೂ ತನ್ನ ವಿದ್ಯಾರ್ಜನೆಯ ಬಳಿಕ 'ನೈಟಿಂಗೇಲ್ ಪ್ರಮಾಣ' ಎಂಬ ಪ್ರತಿಜ್ಞಾ ವಿಧಿಯನ್ನು ಪೂರೈಸುತ್ತಾರೆ ಮತ್ತು ನರ್ಸಿಂಗ್ ಸೇವೆಯಲ್ಲಿ ಅತೀ ಹೆಚ್ಚಿನ ಸೇವೆಗೈದ ದಾದಿಯರಿಗೆ ನೈಟಿಂಗೇಲ್ ಮೆಡಲ್ ಅಥವಾ ಪದಕ ನೀಡಿ ಗೌರವಿಸಲಾಗುತ್ತದೆ.

ಕ್ರಿಮಿನ್ ಯುದ್ಧದ ಸಮಯದಲ್ಲಿ ನುರಿತ ದಾದಿಯರ ತಂಡದ ನಾಯಕಿಯಾಗಿ ಈಕೆ, ಗಾಯಗೊಂಡ ಸೈನಿಕರ ಸೇವೆಯನ್ನು ಹಗಲು ರಾತ್ರಿ ಮಾಡಿ ಹಲವಾರು ಸೈನಿಕರು ಜೀವ ಉಳಿಸಿದ್ದಳು. ರಾತ್ರಿ ಹೊತ್ತು ಯುದ್ಧ ಭೂಮಿಯಲ್ಲಿ ಕತ್ತಲಿನ ನಡುವೆ ದೀಪವನ್ನು ಹಿಡಿದುಕೊಂಡು ನೊಂದ ಮತ್ತು ಗಾಯಗೊಂಡ ಸೈನಿಕರ ಸೇವೆ ಮಾಡಿ 'ಲೇಡಿ ಆಫ್ ಲ್ಯಾಂಪ್' ಎಂಬ ಹೆಸರಿನಿಂದ ಪ್ರಖ್ಯಾತಿಗೊಂಡಿದ್ದರು.

ಈಕೆ ಮಾಡಿದ ನಿಸ್ವಾರ್ಥ ಸೇವೆಯಿಂದ ವಿಕ್ಟೋರಿಯಾ ಸಂಸ್ಕೃತಿಯಲ್ಲಿ ದಾದಿಗಳಿಗೆ ವಿಶೇಷವಾದ ಸ್ಥಾನಮಾನ ದೊರೆತು ಬಹಳಷ್ಟು ಸೇವಾ ಮನೋಭಾವದ ಜನರು ನರ್ಸಿಂಗ್ ಕಲಿಕೆಗೆ ಮುಂದಾಗಿದ್ದರು ಎಂಬುದು ಗಮನಾರ್ಹ ಅಂಶ ಮತ್ತು ವೈದ್ಯಕೀಯ ಜಗತ್ತಿನಲ್ಲಿ ದಾದಿಯರಿಗೆ ಅತಿ ವಿಶಿಷ್ಟವಾದ ಸ್ಥಾನಮಾನ ಮುಂದೆ ಸಿಗುವಲ್ಲಿ ಸಹಕಾರಿಯಾಯಿತು ಎಂದರೂ ತಪ್ಪಾಗಲಿಕ್ಕಿಲ್ಲ.

ದಾದಿಯರಿಗೆ ನೈಟಿಂಗೇಲ್ ಪದಕದ ಗೌರವ

ಫ್ಲಾರೆನ್ಸ್ ನೈಟಿಂಗೇಲ್ ಅವರು ಮಾಡಿದ ಸೇವೆಯನ್ನು ಜಗತ್ತಿನೆಲ್ಲೆಡೆ ಗುರುತಿಸಲಾಯಿತು. 1860 ರಲ್ಲಿ 'ನರ್ಸಿಂಗ್ ತರಬೇತಿಗಾಗಿ' ಲಂಡನ್ ಸೈಂಟ್ ಥಾಮಸ್ ಆಸ್ಪತ್ರೆಯಲ್ಲಿ ನೈಟಿಂಗೇಲ್ ನರ್ಸಿಂಗ್ ಶಾಲೆಯನ್ನು ಆರಂಭಿಸಲಾಯಿತು. ಈಗ ಇದು ಲಂಡನ್‌ನ ಕಿಂಗ್ಸ್ ಕಾಲೇಜಿನ ಅಧೀನದಲ್ಲಿದೆ. ನೈಟಿಂಗೇಲ್ ಅವರ ಸೇವೆಯನ್ನು ಸ್ಮರಿಸುವ ಸಲುವಾಗಿ ಪ್ರತಿ ನರ್ಸಿಂಗ್ ವಿದ್ಯಾರ್ಥಿಯೂ ತನ್ನ ವಿದ್ಯಾರ್ಜನೆಯ ಬಳಿಕ 'ನೈಟಿಂಗೇಲ್ ಪ್ರಮಾಣ' ಎಂಬ ಪ್ರತಿಜ್ಞಾ ವಿಧಿಯನ್ನು ಪೂರೈಸುತ್ತಾರೆ ಮತ್ತು ನರ್ಸಿಂಗ್ ಸೇವೆಯಲ್ಲಿ ಅತೀ ಹೆಚ್ಚಿನ ಸೇವೆಗೈದ ದಾದಿಯರಿಗೆ ನೈಟಿಂಗೇಲ್ ಮೆಡಲ್ ಅಥವಾ ಪದಕ ನೀಡಿ ಗೌರವಿಸಲಾಗುತ್ತದೆ.

ದೈವ ಸ್ವರೂಪಿಯಾಗಿ ಕಾಣಿಸುವ ದಾದಿಯರು

ರೋಗಿಗಳ ಕಾಯಿಲೆ ವಾಸಿ ಮಾಡುವಲ್ಲಿ, ಅವರಲ್ಲಿ ಮಾನಸಿಕ ಧೈರ್ಯ ತುಂಬುವಲ್ಲಿ ರೋಗಿಗಳು ಮಹತ್ವದ ಪಾತ್ರವನ್ನು ವಹಿಸುತ್ತಾರೆ. ಅವರ ಮಾನವೀಯ ಸೇವೆಗೆ ಬೆಲೆ ಕಟ್ಟಲು ಸಾಧ್ಯವಾಗುವುದಿಲ್ಲ. ಕೆಲವೊಮ್ಮೆ ರೋಗಿ ಗುಣಮುಖವಾಗುವಲ್ಲಿ ವೈದ್ಯ ನೀಡಿದ ಔಷಧಿಗಿಂತ ದಾದಿ ನೀಡಿದ ಸೇವೆ ಪ್ರಮುಖವಾಗಿರುತ್ತದೆ. ಪ್ರತಿಯೊಬ್ಬರಿಗೂ ಒಂದಲ್ಲಾ ಒಂದು ಸಮಯದಲ್ಲಿ ದಾದಿ ದೈವೀ ಸ್ವರೂಪಿಯಾಗಿ ಕಾಣಿಸುತ್ತಾರೆ. ಮನುಷ್ಯ ಅಂದ ಮೇಲೆ ಕಾಯಿಲೆ ಬರುವುದು ಸಹಜ. ಆದರೆ ಕೆಲವರಿಗೆ ಅಪಘಾತವಾಗಿ ಅಥವಾ ಬೇರೆ ಯಾವುದೋ ಕಾಯಿಲೆಯಿಂದ ಮಲಗಿದ್ದಲ್ಲಿಯೇ ಆದಾಗ ದಾದಿಯರು ನೀಡುವ ಸೇವೆ ನೋಡುವಾಗ ಎಂಥವರಿಗೂ ಅವರ ಮೇಲೆ, ಅವರ ವೃತ್ತಿ ಮೇಲೆ ಗೌರವ ಮೂಡುವುದು. ರೋಗಿ ಹೇಗೆಯೇ ಇರಲಿ, ಯಾವುದೇ ಹೇಸಿಗೆ ತೋರದೆ ಅವರ ಕೆಲಸಗಳನ್ನು ಮಾಡುತ್ತಾರೆ. ಅಮ್ಮನಂತೆ ಆರೈಕೆ ಮಾಡುತ್ತಾರೆ, ಮನಸ್ಸಿಗೆ ಧೈರ್ಯ ತುಂಬುತ್ತಾರೆ. ಆ ಸಹೋದರಿಯ ಸೇವೆಯಿಂದಲೇ ನಮ್ಮ ದೇಹ ಚೇತರಿಸಿಕೊಳ್ಳಲಾರಂಭಿಸುತ್ತದೆ.

ಪ್ರತಿಯೊಬ್ಬ ಮನುಷ್ಯ ಅವರ ಸೇವೆಯನ್ನು ಪಡೆದುಕೊಂಡೇ ಕೊಳ್ಳುತ್ತಾನೆ. ಅವರ ಸೇವೆಗೆ ಗೌರವನ್ನು ನೀಡುವ ಈ ದಿನದಂದು ಅವರಿಗೆ ನಮ್ಮ ಕೃತಜ್ಞತೆ ಸಲ್ಲಿಸೋಣ, ಅವರ ನಿಸ್ವಾರ್ಥ ಸೇವೆಗೆ ನಮ್ಮದೊಂದು ನಮನ. ॐ

ವಿಶ್ವ ತಂಬಾಕು ರಹಿತ ದಿನ

ವಿಶ್ವ ತಂಬಾಕು ರಹಿತ ದಿನವನ್ನು ಪ್ರತಿ ವರ್ಷ ಮೇ 31 ರಂದು, ವಿಶ್ವ ಆರೋಗ್ಯ ಸಂಸ್ಥೆಯು ತಂಬಾಕು ಮತ್ತು ಅದರ ಉತ್ಪನ್ನದ ಸೇವನೆಯಿಂದ ಉಂಟಾಗುವ ಅಪಾಯ ಮತ್ತು ಕುಟುಂಬ, ಸಮಾಜ ಮತ್ತು ಪರಿಸರದ ಮೇಲೆ ಅದರ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲು ವಿಶ್ವ ತಂಬಾಕು ರಹಿತ ದಿನವನ್ನು ಆಚೋಜಿಸುತ್ತದೆ.

ತಾಜಾ ಹೂವುಗಳನ್ನು ಹೊಂದಿರುವ ಬೂದಿ ತಟ್ಟೆಗಳು ವಿಶ್ವ ತಂಬಾಕು ರಹಿತ ದಿನದ ಸಾಮಾನ್ಯ ಸಂಕೇತವಾಗಿದೆ. ಪ್ರತಿ ವರ್ಷ ಮೇ 31 ರಂದು ವಿಶ್ವದಾದ್ಯಂತ ವಿಶ್ವ ತಂಬಾಕು ರಹಿತ ದಿನ (WNTD) ಆಚರಿಸಲಾಗುತ್ತದೆ. ವಾರ್ಷಿಕ ಆಚರಣೆಯು ಸಾರ್ವಜನಿಕರಿಗೆ ತಂಬಾಕು ಬಳಕೆಯ ಅಪಾಯಗಳು, ತಂಬಾಕು ಕಂಪನಿಗಳ ವ್ಯವಹಾರ ಪದ್ಧತಿಗಳು, ತಂಬಾಕು ಬಳಕೆಯ ವಿರುದ್ಧ ಹೋರಾಡಲು ವಿಶ್ವ ಆರೋಗ್ಯ ಸಂಸ್ಥೆ (WHO) ಏನು ಮಾಡುತ್ತಿದೆ ಮತ್ತು ಪ್ರಪಂಚದಾದ್ಯಂತ ಜನರು ತಮ್ಮ ಆರೋಗ್ಯ ಮತ್ತು ಆರೋಗ್ಯಕರ ಜೀವನದ ಹಕ್ಕನ್ನು ಪಡೆಯಲು ಮತ್ತು ಭವಿಷ್ಯದ ಪೀಳಿಗೆಯನ್ನು ರಕ್ಷಿಸಲು ಏನು ಮಾಡಬಹುದು ಎಂಬುದರ ಕುರಿತು ತಿಳಿಸುತ್ತದೆ.

ತಂಬಾಕು ಸಾಂಕ್ರಾಮಿಕ ರೋಗ ಮತ್ತು ಅದು ಉಂಟುಮಾಡುವ ತಡೆಗಟ್ಟಬಹುದಾದ ಸಾವು ಮತ್ತು ರೋಗದ ಬಗ್ಗೆ ಜಾಗತಿಕ ಗಮನ ಸೆಳೆಯಲು ಫಊಊಔ ಸದಸ್ಯ ರಾಷ್ಟ್ರಗಳು 1987 ರಲ್ಲಿ ವಿಶ್ವ ತಂಬಾಕು ರಹಿತ ದಿನವನ್ನು ಸ್ಥಾಪಿಸಿದವು. ಈ ದಿನವು ತಂಬಾಕು ಬಳಕೆಯ ವ್ಯಾಪಕ ಹರಡುವಿಕೆ ಮತ್ತು ಋಣಾತ್ಮಕ ಆರೋಗ್ಯ ಪರಿಣಾಮಗಳ ಬಗ್ಗೆ ಗಮನ ಸೆಳೆಯುವ ಉದ್ದೇಶವನ್ನು ಹೊಂದಿದೆ, ಇದು ಪ್ರಸ್ತುತ ವಿಶ್ವಾದ್ಯಂತ ಪ್ರತಿ ವರ್ಷ 8 ಮಿಲಿಯನ್‌ಗಿಂತಲೂ ಹೆಚ್ಚು ಸಾವುಗಳಿಗೆ ಕಾರಣವಾಗುತ್ತದೆ, ಇದರಲ್ಲಿ ಧೂಮಪಾನ ಮಾಡದವರೂ ಸಹ ಸೆಕೆಂಡ್ ಹ್ಯಾಂಡ್ ಹೊಗೆಗೆ ಒಡ್ಡಿಕೊಳ್ಳುವುದರಿಂದ 1.2 ಮಿಲಿಯನ್ ಸಾವುಗಳು ಸಂಭವಿಸುತ್ತವೆ. ಸರ್ಕಾರಗಳು, ಸಾರ್ವಜನಿಕ ಆರೋಗ್ಯ ಸಂಸ್ಥೆಗಳು, ಧೂಮಪಾನಿಗಳು, ಬೆಳೆಗಾರರು ಮತ್ತು ತಂಬಾಕು ಉದ್ಯಮದಿಂದ ಜಗತ್ತಿನಾದ್ಯಂತ ಉತ್ಸಾಹ ಮತ್ತು ಪ್ರತಿರೋಧ ಎರಡನ್ನೂ ಈ ದಿನ ಎದುರಿಸಿದೆ.

WHO ಮತ್ತು ವಿಶ್ವ ತಂಬಾಕು ರಹಿತ ದಿನ

ವಿಶ್ವ ಆರೋಗ್ಯ ದಿನ, ವಿಶ್ವ ರಕ್ತದಾನಿಗಳ ದಿನ, ವಿಶ್ವ ರೋಗನಿರೋಧಕ ವಾರ, ವಿಶ್ವ ಕ್ಷಯರೋಗ ದಿನ, ವಿಶ್ವ ಮಲೇರಿಯಾ ದಿನ, ವಿಶ್ವ ಹೆಪಟೈಟಿಸ್ ದಿನ, ವಿಶ್ವ ಚಾಗಸ್ ರೋಗ ದಿನ, ವಿಶ್ವ ರೋಗಿಯ ಸುರಕ್ಷತಾ ದಿನ, ವಿಶ್ವ ಸೂಕ್ಷ್ಮಜೀವಿ ನಿರೋಧಕ ಜಾಗೃತಿ ವಾರ ಮತ್ತು ವಿಶ್ವ ಏಡ್ಸ್ ದಿನಗಳ ಜೊತೆಗೆ ಫಊಊಔ ಗುರುತಿಸಿರುವ 11 ಅಧಿಕೃತ ಜಾಗತಿಕ ಸಾರ್ವಜನಿಕ ಆರೋಗ್ಯ ಅಭಿಯಾನಗಳಲ್ಲಿ ಫಓಖಿಆ ಒಂದಾಗಿದೆ.

ಟೈಮ್‌ಲೈನ್

1987 ರಲ್ಲಿ, WHO ಯ ವಿಶ್ವ ಆರೋಗ್ಯ ಸಭೆಯು ಫಊಂ 40.38 ನಿರ್ಣಯವನ್ನು ಅಂಗೀಕರಿಸಿತು, ಏಪ್ರಿಲ್ 7, 1988 ಅನ್ನು "ವಿಶ್ವ ಧೂಮಪಾನ ರಹಿತ ದಿನ" ಎಂದು ಕರೆಯಿತು. ವಿಶ್ವಾದ್ಯಂತ ತಂಬಾಕು ಬಳಕೆದಾರರು 24 ಗಂಟೆಗಳ ಕಾಲ ತಂಬಾಕು ಉತ್ಪನ್ನಗಳನ್ನು ಬಳಸುವುದನ್ನು ತಡೆಯುವಂತೆ ಒತ್ತಾಯಿಸುವುದು ಈ ದಿನದ ಉದ್ದೇಶವಾಗಿತ್ತು, ಈ ಕ್ರಮವು ಧೂಮಪಾನವನ್ನು ತ್ಯಜಿಸಲು ಪ್ರಯತ್ನಿಸುತ್ತಿರುವವರಿಗೆ ಸಹಾಯ ಮಾಡುತ್ತದೆ ಎಂದು ಅವರು ಆಶಿಸಿದರು. 1988 ರಲ್ಲಿ, ವಿಶ್ವ ಆರೋಗ್ಯ ಸಭೆಯು WHA 42.19 ನಿರ್ಣಯವನ್ನು ಅಂಗೀಕರಿಸಿತು, ಪ್ರತಿ ವರ್ಷ ಮೇ 31 ರಂದು ವಿಶ್ವ ತಂಬಾಕು ರಹಿತ ದಿನವನ್ನು ಆಚರಿಸಲು ಕರೆ ನೀಡಿತು. ಅಂದಿನಿಂದ, WHO ಪ್ರತಿ ವರ್ಷ ವಿಶ್ವ ತಂಬಾಕು ರಹಿತ ದಿನವನ್ನು ಬೆಂಬಲಿಸುತ್ತಿದೆ.

Printed by Arvind, Published Edited and Owned by Dr. D.C. Ramachandra, No.66, Doddasomanahalli, Magadi Tq, Ramanagar Dist. and Printed at Computer World, Near G.T. Mall, Mallige Thota, Magadi Road, Bengaluru - 560 023. **Editor: Dr. C. Nanjundaiah.**

SAMPREETHI
PUBLICATION

Pre Nursery / LKG / UKG
books available at discounted prices

No. 66, 'Sampreethi Sadana' Ganesha Layout,
Government Hospital parallel Road
Magadi - 562 120, Ramanagara District.

For Orders Contact
+91 9606700696

Registered with Registrar of News Papers for India No.KARKAN/2018/76081, **Sampreethi Samruddhi,** May - 2025.
License to post without prepayment. License No.**KA/BG/CNA/119/2025-2027,**
Date of publication: **28.04.2025.** Posted at **Magadi Sub Post Office-562120** on **29th** of every month

ಸಮೃದ್ಧಿ ಭೈರವ ಭವನ

T.M. ರೋಡ್, ಚುಂಚನಹಳ್ಳಿ, ಶ್ರೀ ಆದಿಚುಂಚನಗಿರಿ ಕ್ಷೇತ್ರ

ಶ್ರೀ ಭೈರವೇಶ್ವರ ಸ್ವಾಮಿ ಭುಕ್ತಿ ಸೇವೆ, ಮದುವೆ, ನಾಮಕರಣ, ಆರತಕ್ಷತೆ,
ಭೀಗರ ಔತಣ, ಮುಂತಾದ ಶುಭ–ಸಮಾರಂಭಗಳಿಗೆ ಸಂಪರ್ಕಿಸಿ

7795808178, 8722127146

To,

If undelivered please return to :
The Editor
Sampreethi Sadan
Govt. Hospital Parallel Road,
Magadi Town, Magadi - 562120